ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 21 ಭಾನುವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 155 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಒಕ್ಕಲಿಗರ ಒಮ್ಮತ

ಬೆಂಗಳೂರಲ್ಲಿ ನಡೆದ ಜಾತಿಗಣತಿ ಜಾಗೃತಿ ಸಭೆಯಲ್ಲಿ ಸಮುದಾಯಕ್ಕೆ ಆದಿಚುಂಚನಗಿರಿ ಶ್ರೀಗಳು, ಸ್ಫಟಿಕಪುರಿ ಮಠದ ಶ್ರೀಗಳು ಕರೆ

ಬೆಂಗಳೂರು, ಸೆ.20(ಕೆಎಂಶಿ)–ಸರ್ಕಾರ ಜಾತಿಗಣತಿ ನಡೆಸುವಾಗ ನಮ್ಮ ಸಮುದಾಯದವರು ಉಪಜಾತಿಗಳಿಗೂ ಮೊದಲು ಒಕ್ಕಲಿಗ ಎಂದೇ ಬರೆಸಬೇಕು. ನಂತರ ಅಗತ್ಯವಿದ್ದರೆ ಉಪಜಾತಿಗಳನ್ನು ಬರೆಸಿಕೊಳ್ಳಬಹುದು ಎಂದು ತಮ್ಮ ಸಮಾಜದವರಿಗೆ ಒಕ್ಕಲಿಗ ಮಠಾಧೀಶರು ಹಾಗೂ ನಾಯಕರು ಕರೆ ನೀಡಿದ್ದಾರೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದ ಒಕ್ಕಲಿಗ ಸಮುದಾಯ ಜಾತಿಗಣತಿ ಜಾಗೃತಿ ಸಭೆಯಲ್ಲಿ ತೀರ್ಮಾನ ಕೈಗೊಂಡು ಈ ಕರೆ ನೀಡಲಾಗಿದೆ. ಸಮುದಾಯ ಒಗ್ಗಟ್ಟಿನಿಂದಿದೆ. ಆದರೆ, ಸಮೀಕ್ಷೆ ಸಂದರ್ಭದಲ್ಲಿ ಗೊಂದಲಗಳನ್ನು ಉಂಟುಮಾಡಿಕೊಳ್ಳಬೇಡಿ. ನಿಮ್ಮ ಕುಟುಂಬದ ವಾಸ್ತವ ಸ್ಥಿತಿಯನ್ನು ಸರ್ಕಾರದ ಗಮನಕ್ಕೆ ತನ್ನಿ. ▶ 6ನೇ ಪುಟಕ್ಕೆ



ಬೆಂಗಳೂರಲ್ಲಿ ಒಕ್ಕಲಿಗ ಸಮುದಾಯ ಏರ್ಪಡಿಸಿದ್ದ ಜಾತಿಗಣತಿ ಜಾಗೃತಿ ಸಭೆಯನ್ನು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಈ ವೇಳೆ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇದ್ದರು.

ಸಮೀಕ್ಷೆಗೆ ಸಕಾಲವಲ್ಲ

ಬೆಂಗಳೂರು,ಸೆ.20(ಕೆಎಂಶಿ)– ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ನೆಪದಲ್ಲಿ ಕೈಗೆತ್ತಿಕೊಂಡಿರುವ ಜಾತಿಗಣತಿಗೆ ಇದು ಸಕಾಲವಲ್ಲ ಎಂದು ಒಕ್ಕಲಿಗ ಸಮಾಜ ಅಭಿಪ್ರಾಯಪಟ್ಟಿದೆ. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ, ಸ್ಫಟಿಕಾಪುರಿ ಮಠದ ನಂಜಾವಧೂತ ಸ್ವಾಮಿಜಿ ಹಾಗೂ ವಿಶ್ವ ಒಕ್ಕಲಿಗರ ಮಠದ ನಿಶ್ಚಲಾನಂದನಾಥ ಸ್ವಾಮೀಜಿ ಅಲ್ಲದೆ, ಆದಿಚುಂಚನಗಿರಿಯ ಎಲ್ಲಾ ಶಾಖಾ ಮಠದ ಸ್ವಾಮೀಜಿಗಳು ಮಾತನಾಡಿ, ರಾಜ್ಯಾದ್ಯಂತ ಕೃಷಿ ಚಟುವಟಿಕೆ ಆರಂಭಗೊಂಡಿದೆ. ಸಾಲು–ಸಾಲು ಹಬ್ಬಗಳು ಬರುತ್ತಿವೆ. ಅಲ್ಲದೆ, ಹಳೇ ಮೈಸೂರು ಭಾಗದಲ್ಲಿ ನವರಾತ್ರಿ ಹಾಗೂ ದಸರಾ ನಡೆಯುತ್ತಿರುವುದರಿಂದ ಜಾತಿಗಣತಿ ಸಮೀಕ್ಷೆಗೆ ಕಾಲ ಪಕ್ವವಲ್ಲ.

ದಸರಾ ಮತ್ತು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರುವ ಜನ ಮತ್ತು ರೈತರು ಮನೆಯಿಂದ ಹೊರಗಿರುವ ಸಮಯದಲ್ಲಿ ಸಮೀಕ್ಷೆ ಪೂರ್ಣ ಪ್ರಮಾಣದಲ್ಲಿ ಸಾಧ್ಯವೇ? ಎಂದು ಪ್ರಶ್ನಿಸಿದರು. ಸರ್ಕಾರ ಒಂದು ವೇಳೆ ಜಾತಿಗಣತಿ ಮುಂದೂಡಲು ಸಾಧ್ಯವಿಲ್ಲ ಎಂಬ ತೀರ್ಮಾನ ಕೈಗೊಂಡಿದ್ದೇ ಆದಲ್ಲಿ, ಈಗ ನಿಗದಿಪಡಿಸಿರುವ ದಿನಗಳನ್ನು ಹೆಚ್ಚಿಸುವಂತೆ ಆಗ್ರಹಿಸಿದರು. ತೆಲಂಗಾಣ ಸರ್ಕಾರ ಜಾತಿ ಸಮೀಕ್ಷೆಯನ್ನು 90 ದಿನಗಳ ಕಾಲ ನಡೆಸಿತು, ಆ ರಾಜ್ಯದಲ್ಲಿರುವ ಜನಸಂಖ್ಯೆ 3.50 ಕೋಟಿ, ನಮ್ಮಲ್ಲಿ 7 ಕೋಟಿ ಜನಸಂಖ್ಯೆಗೆ ಕೇವಲ 15 ದಿನದಲ್ಲಿ ಪೂರ್ಣ ಪ್ರಮಾಣದ ಸಮೀಕ್ಷೆ ನಡೆಸಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಸತ್ಯ ಸಮೀಕ್ಷೆ ನಡೆಯಲಿ: ಹೆಚ್‌ಡಿಕೆ

ಮೈಸೂರು: ಶೈಕ್ಷಣಿಕ–ಸಾಮಾಜಿಕ ಸಮೀಕ್ಷೆ ಬಗ್ಗೆ ನಮಗೇನೂ ತಕರಾರಿಲ್ಲ. ಸುಪ್ರೀಂಕೋರ್ಟ್ ಆದೇಶದಂತೆ ಕಾಲ ಕಾಲಕ್ಕೆ ಸಮೀಕ್ಷೆ ನಡೆಯಬೇಕು, ನಡೆಯಲಿ. ನಾನು ಬೇಡವೆನ್ನುವುದಿಲ್ಲ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಆದರೆ, ಕೇವಲ ಹದಿನೈದೇ ದಿನದಲ್ಲಿ 6.5 ಕೋಟಿ ಜನರ ಸಮೀಕ್ಷೆ ಸಾಧ್ಯವೇ? ಈಗ ಪವಿತ್ರ ನಾಡಹಬ್ಬ, ನವರಾತ್ರಿಗಳ ಸಂದರ್ಭ. ಸಮೀಕ್ಷೆ ನಡೆಸುವ ಅಂಗನವಾಡಿ ಕಾರ್ಯಕರ್ತೆಯರು, ಶಿಕ್ಷಕರು, ಸರಕಾರಿ ಅಧಿಕಾರಿ–ಸಿಬ್ಬಂದಿಗೆ ಹಬ್ಬ, ಆಚರಣೆ, ಸಂಭ್ರಮ ಇರುವುದಿಲ್ಲವೇ? ನಿಮಗೆ ಮಾತ್ರವೇ ನವರಾತ್ರಿಯೇ? ನವದುರ್ಗೆಯರನ್ನು ಪೂಜಿಸುವ ಈ ಕಾಲದಲ್ಲಿ ಮಹಿಳೆಯರಿಗೆ ತಮ್ಮ ಮನೆಗಳಲ್ಲಿ ನೆರವೇರಿಸಲೇಬೇಕಾದ ಧಾರ್ಮಿಕ ಕಾರ್ಯಗಳು ಇರುತ್ತವೆ. ಈ ಸಮಯದಲ್ಲಿ ಸಮೀಕ್ಷೆ ಹೇಗೆ ಸಾಧ್ಯ? ಹೀಗಾಗಿ ಇದು ಸಮೀಕ್ಷೆಗೆ ಸಕಾಲವಲ್ಲ. ಮುಂದಕ್ಕೆ ಹಾಕಿ ಅಥವಾ ಸಮಯ ವಿಸ್ತರಿಸಿ. ಜನರಿಗೆ ಪ್ರಾಮಾಣಿಕ, ವಸ್ತುನಿಷ್ಠ, ಸತ್ಯನಿಷ್ಠ ಸಮೀಕ್ಷೆ ಬೇಕು. ಇಲ್ಲವಾದರೆ ಇದಕ್ಕೂ ಹಿಂದಿನ ಎರಡು ಸಮೀಕ್ಷಾ ವರದಿಗಳ ಗತಿಯೇ ಆಗಲಿದೆ. ಜನರ ತೆರಿಗೆ ಹಣ ಪೋಲಾಗಬೇಕೆ? ಇನ್ನೂ ಎಷ್ಟು ಕೋಟಿ ಖರ್ಚಾಗಬೇಕು? ಕೊನೇಪಕ್ಷ 3 ತಿಂಗಳ ಕಾಲಾವಕಾಶ ಬೇಕೇಬೇಕು. ಹಂತಹಂತವಾಗಿ ಸಮೀಕ್ಷೆ ನಡೆಸಿ. ಅದಕ್ಕೇನು ಸಮಸ್ಯೆ? ಆತುರಾತುರ ಸಮೀಕ್ಷೆ ಯಾರ ಆನಂದಕ್ಕೆ? ಎಲ್ಲರನ್ನೂ ಒಳಗೊಳ್ಳುವ, ಯಾವ ಸಮುದಾಯಕ್ಕೂ ಅನ್ಯಾಯ ಆಗದಂತೆ ಆದರ್ಶ ಸಮೀಕ್ಷೆ ಅಗತ್ಯ. ತಪ್ಪಿದರೆ ಈ ಸಮೀಕ್ಷೆಯ ಹಿಂದಿರುವ ಶಕ್ತಿಗಳಿಗೆ ಶಿಕ್ಷೆ ತಪ್ಪಿದ್ದಲ್ಲ. ನಡೆಯಲಿ ಸತ್ಯಸಮೀಕ್ಷೆ ಎಂದು ಪ್ರತಿಪಾದಿಸಿದ್ದಾರೆ.

ಡಿಕೆಶಿ–ಹೆಚ್‌ಡಿಕೆ ಸಮಾಗಮ



ಬೆಂಗಳೂರು,ಸೆ.20(ಕೆಎಂಶಿ)–ರಾಜಕೀಯ ವೈರತ್ವ ಹೊರತಾಗಿಯೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಒಂದೇ ವೇದಿಕೆಯಲ್ಲಿ ಕಾಣಿಸಿಕೊಂಡರು. ಹಸ್ತಲಾಘವ ಮಾಡಿದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷೆ ಹೆಸರಿನಲ್ಲಿ ನಡೆಸುತ್ತಿರುವ ಜಾತಿಗಣತಿ ಬಗ್ಗೆ ಚರ್ಚಿಸಲು ▶ 6ನೇ ಪುಟಕ್ಕೆ

ಪಂಡಿತ್ ಎಂ.ವೆಂಕಟೇಶ್ ಕುಮಾರರಿಗೆ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ



ಎಂ.ವೆಂಕಟೇಶ್‌ಕುಮಾರ್

ಮೈಸೂರು, ಸೆ.20– ಪ್ರತಿವರ್ಷ ನಾಡಹಬ್ಬ ದಸರಾ ಸಂದರ್ಭದಲ್ಲಿ ಮೈಸೂರಿನ ಅರಮನೆಯ ಮುಂಭಾಗದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನೀಡಲಾಗುವ ಪ್ರತಿಷ್ಠಿತ ಸಂಗೀತ ವಿದ್ವಾನ್ ಪ್ರಶಸ್ತಿಗೆ ಪ್ರಸಕ್ತ ಸಾಲಿನಲ್ಲಿ ಪಂಡಿತ್ ಎಂ.ವೆಂಕಟೇಶ್ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಪ್ರಕಟಿಸಿದ್ದಾರೆ.

ದೇಶ–ವಿದೇಶಗಳಲ್ಲಿ ತಮ್ಮ ಅದ್ಭುತ ಗಾಯನದ ಮೂಲಕ ಖ್ಯಾತರಾಗಿರುವ ಹಿಂದೂಸ್ತಾನಿ ಸಂಗೀತ ದಿಗ್ಗಜರಲ್ಲಿ ಒಬ್ಬರೆನಿಸಿದ ಪಂಡಿತ್ ವೆಂಕಟೇಶ್‌ಕುಮಾರ್ ಅವರ ಆಯ್ಕೆ ಅತ್ಯಂತ ಸಂತೋಷ ತಂದಿದೆ. ಸೆ.22ರಂದು ಮೈಸೂರಿನ ಅರಮನೆಯ ಮುಂಭಾಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಡಾ. ವೈ.ಕೆ.ಮುದ್ದುಕೃಷ್ಣ ಅವರ ಆಯ್ಕೆ ಸಲಹಾ ಸಮಿತಿ ಪಂಡಿತ್ ವೆಂಕಟೇಶ್‌ಕುಮಾರ್ ಅವರನ್ನು ಆಯ್ಕೆ ಮಾಡಿದೆ ಎಂದು ತಿಳಿಸಿದರು. ಈ ಪ್ರಶಸ್ತಿಯು 5 ಲಕ್ಷ ರೂ. ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ.

ಮಲಯಾಳಂ ನಟ ಮೋಹನ್‌ಲಾಲ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ



ನವದೆಹಲಿ: ಮಲಯಾಳಂ ಖ್ಯಾತ ನಟ ಮೋಹನ್‌ಲಾಲ್ ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಘೋಷಿಸಿದೆ. ಮೋಹನ್‌ಲಾಲ್ ಅವರ ಸಿನಿ ಪ್ರಯಾಣವು ಯುವಪೀಳಿಗೆಗಳಿಗೆ ಸ್ಫೂರ್ತಿ ನೀಡುತ್ತದೆ. ಭಾರತೀಯ ಚಿತ್ರರಂಗಕ್ಕೆ ನೀಡಿದ ಅಪ್ರತಿಮ ಕೊಡುಗೆಗಾಗಿ ನಟ, ನಿರ್ದೇಶಕ ಮತ್ತು ನಿರ್ಮಾಪಕರನ್ನು ಗೌರವಿಸಲಾಗುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವಾಲಯ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ. ಸೆ.23ರಂದು ನಡೆಯಲಿರುವ 71ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 65 ವರ್ಷದ ಮೋಹನ್‌ಲಾಲ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಮಾಹಿತಿ ನೀಡಿದೆ. ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಹೆಸರಿನಲ್ಲಿ ಸಿನಿಮಾ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. 4 ದಶಕಗಳ ಸಿನಿ ಪ್ರಯಾಣದಲ್ಲಿ ಮೋಹನ್‌ಲಾಲ್ ಅವರು ಮಲಯಾಳಂ, ತಮಿಳು, ತೆಲುಗು, ಹಿಂದಿ, ಕನ್ನಡದಲ್ಲಿ 350ಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ. 'ತನ್ಮಾತ್ರೆ', 'ದೃಶ್ಯಂ', 'ವನಪ್ರಸ್ಥಂ', 'ಮುಂದಿರಿವಲ್ಲಿಕಲ್ ತಳಿರ್ಕುಂಬೋಳ್', 'ಪುಲಿಮುರುಗನ್' ಚಿತ್ರಗಳ ಮೂಲಕ ಗಮನ ಸೆಳೆದಿದ್ದರು. ಮೋಹನ್‌ಲಾಲ್ ಅವರಿಗೆ ಅತ್ಯುತ್ತಮ ನಟನೆಗಾಗಿ ಎರಡು ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ, 9 ಕೇರಳ ರಾಜ್ಯ ಪ್ರಶಸ್ತಿ ಸೇರಿದಂತೆ ಅಂತರರಾಷ್ಟ್ರೀಯ ಪ್ರಶಸ್ತಿಗಳು ಲಭಿಸಿವೆ. ಮೋಹನ್‌ಲಾಲ್‌ಗೆ 2001ರಲ್ಲಿ ಪದ್ಮಶ್ರೀ, 2019ರಲ್ಲಿ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯು ಪರೀಕ್ಷೆ ತಾತ್ಕಾಲಿಕ ವೇಳಾಪಟ್ಟಿ ಪ್ರಕಟ



ಬೆಂಗಳೂರು: ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು 2025–26ನೇ ಸಾಲಿನ ದ್ವಿತೀಯ ಪಿಯುಸಿ ಮತ್ತು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯ ತಾತ್ಕಾಲಿಕ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ತಾತ್ಕಾಲಿಕ ವೇಳಾಪಟ್ಟಿಯ ಪ್ರಕಾರ, ದ್ವಿತೀಯ ಪಿಯುಸಿ ಪರೀಕ್ಷೆಗಳು 2026ರ ಫೆಬ್ರವರಿ28ರಂದು ಪ್ರಾರಂಭವಾಗಲಿದ್ದು, ▶ 6ನೇ ಪುಟಕ್ಕೆ

ಸಮಾನ ಅವಕಾಶಕ್ಕೆ ಸಮೀಕ್ಷೆ

ಇದು ಕೇವಲ ಜಾತಿಗಣತಿಯಲ್ಲ; ಜನರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆ: ಮುಖ್ಯಮಂತ್ರಿ ಸಿದ್ದರಾಮಯ್ಯ



ಸಿದ್ದರಾಮಯ್ಯ

ಗದಗ,ಸೆ.20–ರಾಜ್ಯದಲ್ಲಿ ನಡೆಸಲುದ್ದೇಶಿಸಿರುವ ಸಮೀಕ್ಷೆ ಕೇವಲ ಜಾತಿಗಣತಿಯಲ್ಲ, ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಾಗಿದೆ. ಜನರ ಜಾತಿ ವಿವರ ಪಡೆಯುವ ಜೊತೆಗೆ ಅವರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ವಿವರ ಪಡೆದು, ಅವಕಾಶ ವಂಚಿತರಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲು ಈ ಸಮೀಕ್ಷೆಯನ್ನು ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಗದಗ್‌ನ ಸರ್ಕ್ಯೂಟ್ ಹೌಸ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾತಿ ಸಮೀಕ್ಷೆಯಲ್ಲಿ ಕ್ರಿಶ್ಚಿಯನ್‌ನಡಿ ವಿವಿಧ ಜಾತಿಗಳನ್ನು ಉಲ್ಲೇಖಿಸಲಾಗುವುದೇ ಎಂಬುದಕ್ಕೆ ಉತ್ತರಿಸಿ, ಇದರ ಬಗ್ಗೆ ಅಭಿಪ್ರಾಯಗಳನ್ನು ತಿಳಿಸಲಾಗಿದ್ದು, ಅನಗತ್ಯವಿರುವ ಅಂಶಗಳನ್ನು ತೆಗೆದುಹಾಕಲು ಹಿಂದುಳಿದ ವರ್ಗಗಳ ಆಯೋಗವೇ ನಿರ್ಧರಿಸುತ್ತದೆ. ಆಯೋಗವು ಶಾಸನಬದ್ಧ ಸಂಸ್ಥೆಯಾಗಿದ್ದು, ಸಮೀಕ್ಷೆ ನಡೆಸಲು ಮಾರ್ಗಸೂಚಿಗಳನ್ನಷ್ಟೇ ಸರ್ಕಾರ ನೀಡಿದೆ ಎಂದರು. 1,75,000 ಶಿಕ್ಷಕರು ಸಮೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿದ್ದಾರೆ. ಶಿಕ್ಷಕರು ತಲಾ 150 ಮನೆಗಳಿಂದ ಮಾಹಿತಿ ಸಂಗ್ರಹಿಸಲಿದ್ದು, ಈ ಸಮೀಕ್ಷಾ ಕಾರ್ಯ 15 ದಿನಗಳ ಕಾಲ ನಡೆಯಲಿದೆ. ಸಮೀಕ್ಷೆಯಲ್ಲಿ ಧರ್ಮ, ಜಾತಿ, ಉಪಜಾತಿ, ಶಿಕ್ಷಣ, ಉದ್ಯೋಗ ಸೇರಿದಂತೆ ಹಲವು ಮಾಹಿತಿಗಳನ್ನು ಕಲೆಹಾಕಲಿದ್ದಾರೆ ಎಂದು ಹೇಳಿದರು.

ಸಮೀಕ್ಷೆಗೆ ಯಾರ ವಿರೋಧವೂ ಇಲ್ಲ: ಜಾತಿ ಗಣತಿ ಹಿಂದೆ ಷಡ್ಯಂತ್ರವಿದೆ ಎಂದು ವಚನಾನಂದ ಸ್ವಾಮೀಜಿಗಳು ಆರೋಪಿಸಿರುವುದಕ್ಕೆ ಪ್ರತಿಕ್ರಿಯೆ ನೀಡಿ, ಕೇಂದ್ರ ಸರ್ಕಾರವೂ ಜಾತಿ ಸಮೀಕ್ಷೆ ನಡೆಸಲಿದ್ದು, ಅದರಲ್ಲಿಯೂ ಷಡ್ಯಂತ್ರವಿರಲಿದೆಯೇ? ▶ 6ನೇ ಪುಟಕ್ಕೆ

ಕುವೆಂಪು ರಚಿತ ನಾಡಗೀತೆಗೆ ಶತಮಾನದ ಇತಿಹಾಸ
ಸೆ.23ಕ್ಕೆ 'ನಾಡಗೀತೆಗೆ ನೂರರ ಸಂಭ್ರಮ ಸಾವಿರ ಸ್ವರಗಳ ಸಂಗಮ' ದಾಖಲೆ ಕಾರ್ಯಕ್ರಮ

20 ಸಾವಿರ ವಿದ್ಯಾರ್ಥಿಗಳಿಂದ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಾಡಗೀತೆ ಗಾಯನ


ಎಂ.ಕೆ.ಸವಿತಾ

ಮೈಸೂರು, ಸೆ.20(ಎಂಟಿವೈ)– ರಾಷ್ಟ್ರಕವಿ ಕುವೆಂಪು ವಿರಚಿತ ನಾಡಗೀತೆಗೆ 100 ವರ್ಷ ಸಂದ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದಲ್ಲಿ ಸೆ.23ರಂದು ಬೆಳಗ್ಗೆ 10.30ಕ್ಕೆ ವಿವಿಧ ಕಾಲೇಜುಗಳ 20 ಸಾವಿರ ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ನಾಡಗೀತೆ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ತಿಳಿಸಿದ್ದಾರೆ.

ಬಯಲು ರಂಗಮಂದಿರದಲ್ಲಿ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ನಾಡಗೀತೆಗೆ ಶತಮಾನದ ಇತಿಹಾಸವಿದೆ. ರಾಷ್ಟ್ರಕವಿ ಕುವೆಂಪು ಅವರು ತಮ್ಮ 20ನೇ ವಯಸ್ಸಿನಲ್ಲಿ ನಾಡಗೀತೆ 'ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ' ಗೀತೆಯನ್ನು ರಚಿಸಿದ್ದರು. 1924ರಲ್ಲಿ ಈ ಗೀತೆಯನ್ನು ಬರೆದಿರುವುದಾಗಿ ಕುವೆಂಪು ಅವರು ತಮ್ಮ ಆತ್ಮಕಥೆಯಲ್ಲಿ ಬರೆದುಕೊಂಡಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಕುವೆಂಪು ಅವರು ಬರೆದ ಗೀತೆಯನ್ನು 1971ರಲ್ಲಿ ನಾಡಗೀತೆಯಾಗಿ ಸ್ವೀಕರಿಸಿತು. ನಂತರ ಕೆಲ ವರ್ಷಗಳ ಹಿಂದೆ ಕರ್ನಾಟಕ ಸರ್ಕಾರ ನಾಡಗೀತೆಯ ಅವಧಿಯನ್ನು 2.30 ನಿಮಿಷಕ್ಕೆ ಸೀಮಿತಗೊಳಿಸಿ, ನಾಡಗೀತೆಯಾಗಿ ಘೋಷಿಸಿ ಎಲ್ಲಾ ಕಾರ್ಯಕ್ರಮಗಳ ಆರಂಭಕ್ಕೂ ಮುನ್ನ ನಾಡಗೀತೆಯನ್ನು ಹಾಡುವುದು ಕಡ್ಡಾಯಗೊಳಿಸಿದೆ ಎಂದರು.

'ನಾಡಗೀತೆಗೆ ನೂರರ ಸಂಭ್ರಮ ಸಾವಿರಾರು ಸ್ವರಗಳ ಸಂಗಮ' ಹೆಸರಲ್ಲಿ ಬಯಲು ರಂಗಮಂದಿರದಲ್ಲಿ ಸೆ.23ರಂದು ಬೆಳಗ್ಗೆ 10.30ಕ್ಕೆ ಸುಮಾರು 20 ಸಾವಿರ ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ನಾಡಗೀತೆ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ವ್ಯಾಪ್ತಿಯ ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿದೆ.

ಈ ನಾಡಗೀತೆ ನೂರರ ಸಂಭ್ರಮ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ದಸರಾ ಕವಿಗೋಷ್ಠಿ ಉಪಸಮಿತಿಯು ಕೈಜೋಡಿಸುತ್ತಿದೆ. ಅಂದಾಜು 15ರಿಂದ 20 ಸಾವಿರ ವಿದ್ಯಾರ್ಥಿಗಳೊಂದಿಗೆ ಹಲವು ಗಾಯಕರು, ಸಂಗೀತ ಕಲಿಯುತ್ತಿರುವ ವಿದ್ಯಾರ್ಥಿಗಳು ನಾಡಗೀತೆಯನ್ನು ಏಕಕಾಲದಲ್ಲಿ ಹಾಡಲಿದ್ದಾರೆ. ಈಗಾಗಲೇ ತರಬೇತಿ ನೀಡಲಾಗುತ್ತಿದ್ದು, ಸೆ.22ರಂದು ಬೆಳಗ್ಗೆ ತಾಲೀಮು ನಡೆಸಲಾಗುತ್ತದೆ ಎಂದು ತಿಳಿಸಿದರು.

ಕವಿಗೋಷ್ಠಿಯಲ್ಲೂ ಗಾಯನ: ದಸರಾ ಕವಿಗೋಷ್ಠಿ ಉದ್ಘಾಟನಾ ಕಾರ್ಯಕ್ರಮದ ವೇದಿಕೆಯಲ್ಲಿಯೇ ನಾಡಗೀತೆಗೆ ನೂರರ ಸಂಭ್ರಮದ ಸಾಮೂಹಿಕ ಗೀತೆ ಗಾಯನ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಮೈಸೂರಿನ ಪುರಭವನದ ಆವರಣದಲ್ಲಿ ಅಳವಡಿಸಿರುವ ಸಂವಿಧಾನ ಪೀಠಿಕೆ ಫಲಕ ಲೋಕಾರ್ಪಣೆ

ದೇಶದಲ್ಲಿ ಸಂವಿಧಾನ ಮರೆಮಾಚುವ ಹುನ್ನಾರ ನಡೆಯುತ್ತಿದೆ; ಡಾ.ಮಹದೇವಪ್ಪ ಆತಂಕ

ಮೈಸೂರು, ಸೆ.20(ಬಿಎಲ್‌ಯು)– ದೇಶದಲ್ಲಿ ಇಂದು ಸಂವಿಧಾನವನ್ನು ಮರೆಮಾಚುವ ಹುನ್ನಾರ ನಡೆಯುತ್ತಿದ್ದು, ಈ ಬಗ್ಗೆ ದಲಿತರು, ಅಸ್ಪೃಶ್ಯರು ಒಗ್ಗಟ್ಟಾಗಿ ವಿರೋಧಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕರೆ ನೀಡಿದರು.

ಮೈಸೂರಿನ ಪುರಭವನದ ಆವರಣದಲ್ಲಿ ಇಂದು ಸಂವಿಧಾನ ಪೀಠಿಕೆಯ ಶಿಲಾಫಲಕ ಉದ್ಘಾಟಿಸಿ ಮಾತನಾಡಿದ ಅವರು, ನಾವೆಲ್ಲಾ ಸಂಘಟಿತರಾಗಿ ಸಂವಿಧಾನವನ್ನು ಮರೆಮಾಚಲು ಬಿಡದೆ, ಅಂಬೇಡ್ಕರ್ ವಾದವನ್ನು ಗಟ್ಟಿಗೊಳಿಸಬೇಕು ಎಂದು ಕರೆ ನೀಡಿದರು.

ಭಾರತೀಯರೆಲ್ಲಾ ಒಂದು ಎಂಬ ಮನೋಭಾವದ ಬಗ್ಗೆ ಜಾಗೃತಿ ಮೂಡಿಸಲು ಸಂವಿಧಾನ ಪೀಠಿಕೆಯನ್ನು ಪ್ರತಿ ಮನೆಗೂ ತಲುಪಿಸಬೇಕು. ಈ ನಿಟ್ಟಿನಲ್ಲಿ ನಾನು ಶಾಲಾ– ಕಾಲೇಜುಗಳಲ್ಲಿ ಸಂವಿಧಾನ ಪೀಠಿಕೆ ಓದಿಸಲು ಆರಂಭಿಸಿದೆ. ನಾವು ಭಾರತೀಯರು, ಭಾರತದ ಮೂಲ ನಿವಾಸಿಗಳು ಎಂಬ ಬಗ್ಗೆ ದೇಶದ ಜನರಲ್ಲಿ ಅರಿವು ಮೂಡಿಸಲು ಸಂವಿಧಾನ ಪೀಠಿಕೆ ಅತ್ಯಗತ್ಯ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಮೈಸೂರಿನ ಗಾಂಧಿನಗರದ ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಸರ್ವ ಧರ್ಮ ಸಮಭಾವ ಪೀಠಿಕೆಯ ಸಾರಾಂಶವಾಗಿದೆ. ಸಂವಿಧಾನ ಪೀಠಿಕೆ ಈ ದೇಶದ ರಕ್ಷಾಕವಚವಾಗಿದ್ದು, ಎಲ್ಲಾ ಶಾಲಾ ಕಾಲೇಜುಗಳಲ್ಲಿ ಇದನ್ನು ಹಾಕಬೇಕು ಎಂದು ಸಲಹೆ ನೀಡಿದರು.

ಭಾರತ ಒಂದು, ಭಾರತೀಯರೆಲ್ಲಾ ಬಂಧು ಎಂದು ಅರ್ಥೈಸುವ ಸಮ ಭಾವದ ಸಂದೇಶ ಸಾರುವ ಸಂವಿಧಾನ ಪೀಠಿಕೆಯನ್ನು ಕೊಟ್ಟ ಮಹಾನ್ ನಾಯಕ ಡಾ.ಅಂಬೇಡ್ಕರ್ ಅವರು. ಈ ಪೀಠಿಕೆಯನ್ನು ಸಾರ್ವಜನಿಕವಾಗಿ ಅಲ್ಲದೆ ಪ್ರತಿ ಮನೆಯಲ್ಲೂ ಹಾಕಬೇಕು ಎಂದು ಸ್ವಾಮೀಜಿ ಸಲಹೆಯಿತ್ತರು. ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಶಿವಕುಮಾರ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಸಮಿತಿಯ ಜಿಲ್ಲಾಧ್ಯಕ್ಷ ಅರುಣ್ ಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್ ಹಾಗೂ ಇತರರು ಈ ವೇಳೆ ಹಾಜರಿದ್ದರು.


ಮೈಸೂರಿನ ಪುರಭವನದಲ್ಲಿ ಅಳವಡಿಸಿರುವ ಸಂವಿಧಾನ ಪೀಠಿಕೆ ಫಲಕ ಲೋಕಾರ್ಪಣೆಗೊಳಿಸಲಾಯಿತು.

ಶ್ರೀಗಳಿಂದ ಆಶೀರ್ವಾದ ಪಡೆದ ಶಾಸಕ ಜಿಟಿಡಿ...


ಬೆಂಗಳೂರಿನ ವಿಜಯನಗರದ ಆದಿಚುಂಚನಗಿರಿ ಮಠದಲ್ಲಿ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಒಕ್ಕಲಿಗ ಸಮುದಾಯದ ಜಾಗೃತಿ ಸಭೆಯಲ್ಲಿ ಪಾಲ್ಗೊಂಡಿದ್ದ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಶ್ರೀಗಳನ್ನು ಸನ್ಮಾನಿಸಿ, ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಮಾಜಿ ಡಿಸಿಎಂ ಡಾ.ಅಶ್ವತ್ಥ್ ನಾರಾಯಣ್, ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಇನ್ನಿತರರು ಉಪಸ್ಥಿತರಿದ್ದರು.

ಮರ ಕಡಿತ: ಮಾಜಿ ಶಾಸಕರ ವಿರುದ್ಧ ಮೈಗ್ರಾಪದಿಂದ ಅರಣ್ಯ ಇಲಾಖೆಗೆ ದೂರು

ಮೈಸೂರು, ಸೆ.20–ಮೈಸೂರಿನ ಸರಸ್ವತಿಪುರಂನಲ್ಲಿರುವ ಜವರೇಗೌಡ ಪಾರ್ಕ್ ಬಳಿ ಮಾಜಿ ಶಾಸಕರೊಬ್ಬರು ಮರ ಹಾಗೂ ಕೊಂಬೆಗಳನ್ನು ಅನವಶ್ಯಕವಾಗಿ ಕಡಿದಿದ್ದು, ಈ ಸಂಬಂಧ ಕ್ರಮ ಕೈಗೊಳ್ಳಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಮೈಸೂರು ಗ್ರಾಹಕರ ಪರಿಷತ್ ದೂರು ಸಲ್ಲಿಸಿದೆ. ಈ ಕುರಿತು ಸೆ.13ರಂದು ಮೈಗ್ರಾಪ ಸದಸ್ಯರೊಬ್ಬರು ಅರಣ್ಯ ಇಲಾಖೆಗೆ ದೂರವಾಣಿ ಮೂಲಕ ಮಾಹಿತಿ ನೀಡಿದ್ದು, ಅದರಂತೆ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಲಾಗಿ ಮರ ಹಾಗೂ ಕೊಂಬೆಗಳನ್ನು ಮಾಜಿ ಶಾಸಕರು ಕಡಿಸಿರುವುದು ತಿಳಿದು ಬಂದಿದೆ. ಈ ಸಂಬಂಧ ಸೆ.14ರಂದು ನಡೆದ ಮೈಗ್ರಾಪ ಸಭೆಯಲ್ಲಿ ನೀವು (ಉಪ ಅರಣ್ಯ ಸಂರಕ್ಷಣಾಧಿಕಾರಿಗಳು) ಕ್ರಮ ವಹಿಸುವುದಾಗಿ ತಿಳಿಸಿದ್ದು, ಶೀಘ್ರವೇ ಕ್ರಮ ಕೈಗೊಳ್ಳಬೇಕೆಂದು ದೂರಿನಲ್ಲಿ ಕೋರಲಾಗಿದೆ.

ಶ್ರೀ ಮಲೆ ಮಹದೇಶ್ವರ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ...


ಶ್ರೀ ಮಲೆ ಮಹದೇಶ್ವರ ಪತ್ತಿನ ಸಹಕಾರ ಸಂಘದ ಮೈಸೂರು ತಾಲೂಕು ಮತ್ತು ನಗರದ 24–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಎಂ.ಕುಮಾರ ಅಧ್ಯಕ್ಷತೆಯಲ್ಲಿ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾ ನೆರವೇರಿತು. ಸಂಘದ ಉಪಾಧ್ಯಕ್ಷ ಮೋಹನ್ ಕುಮಾರ್, ಸಂಘದ ನಿರ್ದೇಶಕರಾದ ಎಸ್.ಶಿವಮೂರ್ತಿ, ಕೆ.ಎಸ್.ಮಾದಪ್ಪ, ರಾಜು, ಎನ್.ಬಿ.ರಾಜು, ಶ್ರೀಕಂಠಮೂರ್ತಿ, ಬಸವರಾಜು ಎಂ., ಎನ್.ಸೋಮಣ್ಣ ನಾಗರಾಜು, ಯತಿರಾಜು, ಶ್ರೀಮತಿ ಎನ್.ಬಿ. ಭಾಗ್ಯ ಶ್ರೀಮತಿ ದ್ರಾಕ್ಷಾಯಿಣಿ ಲಿಂಗರಾಜು ಹಾಗೂ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಾಶ್ ಡಿ. ಹಾಗೂ ಎಲ್ಲಾ ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.

ಜಾತಿಗಣತಿ ವೇಳೆ ಮರಾಠ ಎಂದು ನಮೂದಿಸಲು ಮರಾಠ ಪರಿಷತ್ ಮನವಿ

ಮೈಸೂರು,ಸೆ.20(ಜಿಎ)–ಕಳೆದ ಬಾರಿ ನಡೆದ ಸಮೀಕ್ಷೆ ವೇಳೆ ಮರಾಠ ಸಮುದಾಯದವರ ಸಂಖ್ಯೆ ಕಡಿಮೆ ತೋರಿಸಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಮೀಕ್ಷೆಯಲ್ಲಿ ಜಾತಿ ಕಾಲಂನಲ್ಲಿ ಮರಾಠ ಎಂದು ನಮೂದಿಸಿ ಎಂದು ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ ತಿಳಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪರಿಷತ್‌ನ ನಗರ ಪ್ರಧಾನ ಕಾರ್ಯದರ್ಶಿ ಜ್ಞಾನಪ್ರಕಾಶ್ ಮಾತನಾಡಿ, ಸಮೀಕ್ಷೆ ವೇಳೆ ಕ್ಷತ್ರಿಯ ಮರಾಠ ಸಮುದಾಯದದವರು ಧರ್ಮ ಹಿಂದೂ, ಜಾತಿ ಮರಾಠ, ಉಪ ಜಾತಿ ಕುಣಬಿ, ಮಾತೃಭಾಷೆ ಮರಾಠಿ ಎಂದು ಬರೆಸಬೇಕೆಂದು ಕೋರಿದರು.

ಈ ಹಿಂದೆ ನಡೆದ ಸಮೀಕ್ಷೆಯಲ್ಲಿ ಮರಾಠ ಸಮುದಾಯ ಸಂಖ್ಯೆ ಕೇವಲ 14 ಲಕ್ಷ ಇದೆ ಎಂದು ತೋರಿಸಲಾಗಿದೆ. ಆದರೆ, ನಾವು 40 ಲಕ್ಷಕ್ಕೂ ಅಧಿಕ ಜನಸಂಖ್ಯೆ ಇದೆ. ಈ ಹಿನ್ನೆಲೆಯಲ್ಲಿ ಸಮುದಾಯವರು ಸೆ.22ರಿಂದ ಅ.7ರವರೆಗೆ ನಡೆಯುವ ಸಮೀಕ್ಷೆ ವೇಳೆ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ, ತಮ್ಮ ಆಧಾರ್ ಕಾರ್ಡ್ ಸಂಗ್ರಹಿಸಿಕೊಳ್ಳಿ, ಸಮೀಕ್ಷೆ ಮಾಡುವವರ ಬಳಿ ತಾಳ್ಮೆಯಿಂದ ವರ್ತಿಸಿ, ಗೊಂದಲವಾದರೆ ಪರಿಷತ್ ಸಹಾಯ ಪಡೆದುಕೊಳ್ಳಬಹುದು. ಈಗಾಗಲೇ ಎಲ್ಲಾ ಮನೆಗಳಿಗೂ ಕರಪತ್ರ ನೀಡಲಾಗಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಭೀಮರಾವ್ ಸಾಠೆ, ಕೇಶವನಾಥರಾವ್ ಜಾಧವ್, ಸುರೇಶ್‌ರಾವ್ ಜಾಧವ್ ಉಪಸ್ಥಿತರಿದ್ದರು.

ವಾರ್ಷಿಕ ಮಹಾಸಭೆ

ಮೈಸೂರು: ಮೈಸೂರು ತಾಲೂಕಿನ ವರುಣದಲ್ಲಿರುವ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ವಾರ್ಷಿಕ ಸಭೆ ಸೆ.20ರಂದು ಬೆಳಗ್ಗೆ 11 ಗಂಟೆಗೆ ಸಂಘದ ಕಚೇರಿಯಲ್ಲಿ ನಡೆಯಲಿದೆ.


ಉಚಿತ ಆರೋಗ್ಯ ತಪಾಸಣಾ ಶಿಬಿರ...


ಪ್ರಧಾನಿ ನರೇಂದ್ರ ಮೋದಿ ಅವರ 75ನೇ ಹುಟ್ಟುಹಬ್ಬದ ಪ್ರಯುಕ್ತ ಪಕ್ಷದ ರೈತ ಮೋರ್ಚಾ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಯಾದವಗಿರಿ ಉದ್ಯಾನವನದಲ್ಲಿ ಏರ್ಪಡಿಸಲಾಗಿತ್ತು. ಶಿಬಿರವನ್ನು ಬಿಜೆಪಿ ಮುಖಂಡರಾದ ಡಾ. ಸುಶ್ರುತ್‌ಗೌಡ ಉದ್ಘಾಟಿಸಿದರು. ಚಾಮರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ, ರೈತ ಮೋರ್ಚಾ ಸಂಜೀವಿನಿ ಕುಮಾರ್, ಒಬಿಸಿ ಮೋರ್ಚಾ ಉಪಾಧ್ಯಕ್ಷ ನಾಗೇಶ್, ಬಿಜೆಪಿ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮಾವುತರು, ಕಾವಾಡಿಗಳಿಗೆ ಸನ್ಮಾನ


ಡಾ. ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದಿಂದ ದಸರಾ ಗಜಪಡೆಯ ಮಾವುತರು ಹಾಗೂ ಕಾವಾಡಿಗಳನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಗೌರವಾಧ್ಯಕ್ಷ ವಿ.ಸೋಮಣ್ಣ, ಉದ್ಯಮಿ ಬಾಲಾಜಿ ಶೇಖರ್, ಕಾವೇರಿ ಆಸ್ಪತ್ರೆಯ ಛೇರ್ಮನ್ ಡಾ.ಚಂದ್ರಶೇಖರ್, ಅಧ್ಯಕ್ಷ ಬಿ.ಎಸ್. ರವಿ, ಉಪಾಧ್ಯಕ್ಷ ರಾಜೀವ್ ದೊರೆ, ಕಾರ್ಯಾಧ್ಯಕ್ಷ ಬಿ.ಎಸ್.ಮಹೇಶ್, ಡಾ. ಆದರ್ಶ್, ರಂಗರಾಜು, ಅಕ್ರಮ್, ಮೈಸೂರು ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ಸಂರಕ್ಷಣಾ ವಿಭಾಗ) ಪ್ರಭುಗೌಡ, ಮೂರ್ತಿ, ಶಿವು, ಮಂಜು, ಶಿವಣ್ಣ ಮತ್ತಿತರರನ್ನು ಕಾಣಬಹುದು.

ನಿಧನ



ಪಿ.ರಾಣಿ

ಹುಲಿಕೆರೆ, ಸೆ.20– ಕೆಆರ್‌ಎಸ್ ರಸ್ತೆಯಲ್ಲಿನ ಹುಲಿಕೆರೆ ಎಂಎನ್‌ಪಿಎಂ ಕಾಲೋನಿ ನಿವಾಸಿ ಪಿ.ರಾಣಿ(80) ಅವರು ಬುಧವಾರ ನಿಧನರಾದರು. ಇವರು ನಾಲ್ವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಹುಲಿಕೆರೆಯ ಅವರ್ ಲೇಡಿ ಆಫ್ ಗುಡ್ ಹೆಲ್ತ್ ಚರ್ಚ್‌ನಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಕ್ಯಾಥೋಲಿಕ್ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.09.2025 ಭಾನುವಾರ, ಮಳೆ ನಕ್ಷತ್ರ: ಉತ್ತರಾ 14.09.2025 ರಿಂದ 26.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಅಮಾವಾಸ್ಯೆ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ, ಅಮಾವಾಸ್ಯೆ, ಬೆಳಗ್ಗೆ 7ರಿಂದ ಶ್ರೀ ಶಾರದಾ ಪರಮೇಶ್ವರಿಯವರ ಸನ್ನಿಧಿಯಲ್ಲಿ ಮಹಾಭಿಷೇಕ, 9.30 ರಿಂದ ಹರಿದ್ರಾಲಂಕಾರ ದರ್ಶನ, ಮಧ್ಯಾಹ್ನ 12ಕ್ಕೆ ಜಗತ್ಪ್ರಸೂತಿಕಾಲಂಕಾರ–ಮಹಾಪೂಜೆ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಅಭಿನವ ಶಂಕರಾಲಯ, ಫೋರ್ಟ್ ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತ, ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣೆ, ಕುತ್ತಿಗೆ ನೋವು ಮತ್ತು ಭುಜದ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಉಚಿತ ತಪಾಸಣೆ ಮತ್ತು ವಿಶೇಷ ಚಿಕಿತ್ಸಾ ಶಿಬಿರ, ಸ್ಥಳ: ಪಂಚಕರ್ಮ ಹೊರರೋಗಿ ವಿಭಾಗ ರೂಂ ನಂ–14, ಬೆಳಗ್ಗೆ 9 ರಿಂದ.

■ **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಉಚಿತ ತಪಾಸಣೆ ಮತ್ತು ವಿಶೇಷ ಚಿಕಿತ್ಸಾ ಶಿಬಿರ, ಸ್ಥಳ: ಪಂಚಕರ್ಮ ಹೊರರೋಗಿ ವಿಭಾಗ ರೂಂ ನಂ–14, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರಕ್ಕೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಹೊನ್ನುಸಿರಿ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ.ಎಸ್.ಜಯಕುಮಾರ್, ಸ್ಥಳ: ಶ್ರೀಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ಕ್ಕೆ.

■ **ನಾದಬ್ರಹ್ಮ ಸಂಗೀತ ಸಭಾ:** ನಾದಕಿಶೋರೋತ್ಸವ–2025, ಬೆಳಗ್ಗೆ 9ರಿಂದ, ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ–ವಿಭವ್ ಓಂಕಾರ್ ಗಾಯತ್ರಿ, ಶ್ರೀವತ್ಸ–ಪಿಟೀಲು, ಯಶಸ್–ಮೃದಂಗ, ಬೆಳಗ್ಗೆ 10ರಿಂದ–ಕರ್ನಾಟಕ ಶಾಸ್ತ್ರೀಯ ಗಾಯನ–ಕೀರ್ತನ ನರಸಿಂಹನ್, ಶ್ರೀಲಲಿತ–ಪಿಟೀಲು, ಶುಭಾಂಗ್–ಮೃದಂಗ, ಬೆಳಗ್ಗೆ 11ರಿಂದ ಕರ್ನಾಟಕ ಶಾಸ್ತ್ರೀಯ ಗಾಯನ–ಮನೋಜ್ ಆರ್.ಎಸ್., ಅಮೋಘ್ ನಡದೂರ್–ಪಿಟೀಲು, ಭುವನ್–ಮೃದಂಗ, ಮಧ್ಯಾಹ್ನ 12ರಿಂದ ಕರ್ನಾಟಕ ಶಾಸ್ತ್ರೀಯ ಕೊಳಲು ವಾದನ–ಸುಮೇರು ವಿ.ಸಕಲೇಶಪುರ್, ಶ್ರೀವತ್ಸ–ಪಿಟೀಲು, ಶುಭಾಂಗ್–ಮೃದಂಗ, ಸ್ಥಳ: ಗಾನಭಾಸ್ಕರ ಸಂಗೀತ ವಿಜಿಆರ್ ದಾಸಪ್ಪ ಮಿನಿಹಾಲ್, ನಾದಬ್ರಹ್ಮ ಸಂಗೀತ ಸಭಾ (ಜೆಎಲ್‌ಬಿ ರಸ್ತೆ)

■ **ನವರತ್ನ ದಿಗಂಬರ ಜೈನ್ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಆರ್.ಸುನೀಲ್‌ಕುಮಾರ್, ಸ್ಥಳ: ಶ್ರೀ ಶಾಂತಿನಾಥ ಸಭಾ ಮಂಟಪ, ಕೋಟೆ ಶ್ರೀ ಶಾಂತಿನಾಥ ಜೈನ ಬಸದಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಿಳಾ ಘಟಕ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ :** ದಸರಾ ಚುಟುಕು ಕವಿಗೋಷ್ಠಿ, ಉದ್ಘಾಟನೆ : ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಅಧ್ಯಕ್ಷತೆ: ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಪ್ರಶಸ್ತಿ ಪ್ರದಾನ : ಚುಟುಕು ಸಾಹಿತ್ಯ ಪರಿಷತ್ ಕೇಂದ್ರ ಸಮಿತಿ ರಾಜ್ಯಾಧ್ಯಕ್ಷ ತೋಂಟದಾರ್ಯ, ಮುಖ್ಯ ಅತಿಥಿಗಳು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಂಚೆ ಇಲಾಖೆ ವಿಶ್ರಾಂತ ಹಿರಿಯ ಅಧೀಕ್ಷಕ ಕೆ. ಓಬಯ್ಯ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ಚುಟುಕು ಸಿರಿ ಡಾ. ರತ್ನ ಹಾಲಪ್ಪಗೌಡ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಲ್.ರೇವಣ್ಣ ಸಿದ್ದಯ್ಯ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ, ಶ್ರೀ ಶಿವರಾತ್ರಿ ರಾಜೇಂದ್ರನಗರ ಬಡಾವಣೆ, ವರುಣ, ಬೆಳಗ್ಗೆ 11ಕ್ಕೆ.

■ **ಜನನಿ ಸೇವಾ ಟ್ರಸ್ಟ್ :** ಮೈಸೂರು ದಸರಾಕ್ಕೆ ದೇಶ ವಿದೇಶಗಳಿಂದ ಆಗಮಿಸುವ ಪ್ರವಾಸಿಗರಿಗೆ ಅರಮನೆಯಲ್ಲಿ ಸಾಂಪ್ರದಾಯಿಕ ಸ್ವಾಗತ ಕಾರ್ಯಕ್ರಮ, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಆಯೂಬ್ ಖಾನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ವಿ.ಎಂ. ಪ್ರಭುಸ್ವಾಮಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ವಸಂತ, ಗೌತಮ್ ಸಲೇಚಾ, ಎಂ. ಶಿವಣ್ಣ, ಶ್ರೀಮತಿ ಎಸ್. ನಾಗರತ್ನ, ಶ್ರೀಮತಿ ಆರ್. ಸೌಮ್ಯ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಎಂ.ಕೆ. ಅಶೋಕ್, ಸ್ಥಳ: ಅರಮನೆ ಆವರಣ, ಬೆಳಗ್ಗೆ 11.30ಕ್ಕೆ.

■ **ಮೈಸೂರು ಬೊಂಬೆ ರಂಗಮಂದಿರ :** ಬೊಂಬೆ ಪ್ರದರ್ಶನ, ಉದ್ಘಾಟನೆ : ಗಮಕ ಮತ್ತು ಬೊಂಬೆಯಾಟ ಕಲಾವಿದ ಶಿವಬುದ್ಧಿ, ಮುಖ್ಯ ಅತಿಥಿಗಳು : ಬೊಂಬೆಯಾಟ ಕಲಾವಿದ ಸತ್ಯನಾರಾಯಣ, ಸ್ಥಳ: ಮೈಸೂರು ಪಪ್ಪೆಟ್ ಥಿಯೇಟರ್, ಜೂ ಎದುರು, ಸಂಜೆ 4 ರಿಂದ.

■ **ಶ್ರೀ ಕೃಷ್ಣ ಗಾನಸಭಾ :** ಗಾನ ವಿಶಾರದ ಶ್ರೀ ಬಿಡಾರಂ ಕೃಷ್ಣಪ್ಪ ಸ್ಮಾರಕ ಸಂಗೀತ ಕಾರ್ಯಕ್ರಮ, ವಿದ್ವಾನ್ ಜಿ.ಕೆ. ಮನಮೋಹನ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ವಯೋಲಿನ್, ವಿದುಷಿ ರಂಜನ್ ವೆಂಕಟೇಶ್–ಮೃದಂಗ, ವಿದ್ವಾನ್ ಎಸ್.ಮಂಜುನಾಥ್–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಹಿಮಾಲಯ ಪ್ರತಿಷ್ಠಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಯೋಗ ಶಿಕ್ಷಕ ಡಾ. ನೀಲ್ ಕುಲಕರ್ಣಿ ಬರೆದಿರುವ ಎರಡು ಪುಸ್ತಕಗಳ ಬಿಡುಗಡೆ ಸಮಾರಂಭ, ಕೃತಿ ಬಿಡುಗಡೆ : ಯೋಗಿ ಶ್ರೀ ಶ್ರೀನಿವಾಸ ಅರ್ಕ, ಕೃತಿ ಕುರಿತು: ಭಾರತೀಯ ವಿದ್ಯಾ ಭವನ್ ಖಜಾಂಚಿ ಡಾ.ಎ.ಟಿ.ಭಾಷ್ಯಂ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಡಾ. ಸಿ.ರಮೇಶ್ ಶೆಟ್ಟಿ, ಸ್ಥಳ: ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ – ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಯಂತಿ.ವಿ.ಭಟ್ ಹಾಗೂ ಎಂ.ಎ. ಜ್ಯೋತಿ, ವ್ಯಾಖ್ಯಾನ–ಡಾ. ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಕೆ.ಎಸ್. ಸುರೇಖಾ, 8.30 ನಮ್ಮ ಆರೋಗ್ಯ–ವಿಶ್ವ ಆಲ್‌ಝೈಮರ್ಸ್ ದಿನದ ಸಂಬಂಧವಾಗಿ ಆಲ್‌ಝೈಮರ್ಸ್ ಕಾಯಿಲೆಯ ಚಿಕಿತ್ಸೆಯಲ್ಲಿ ಇತ್ತೀಚಿನ ಬೆಳವಣಿಗೆಗಳು ಕುರಿತು ಭಾರತೀಯ ಆಲ್‌ಝೈಮರ್ಸ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾ ಸಂಸ್ಥೆಯ ರಾಷ್ಟ್ರೀಯ ಕಾರ್ಯದರ್ಶಿಗಳು ಮತ್ತು ಮೈಸೂರಿನ ಶಾರದಾ ವಿಲಾಸ ಔಷಧ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾದ ಡಾ.ಹನುಮಂತಾಚಾರ್ ಜೋಷಿ.ಕೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.05 ಮಕ್ಕಳ ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.30 ಮೈಸೂರು ದಸರಾ ಉತ್ಸವ 2025ರ ನಿಯೋಜಿತ ಉದ್ಘಾಟಕರಾದ ಶ್ರೀಮತಿ ಬಾನು ಮುಶ್ತಾಕ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಸುಜಾತ ತಳವಾರ್, 10.00 ಕೇಳಿ ಗಿಳಿಗಳೇ – ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy ನಾವು ಭಾರತೀಯರು–ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ–ಮಾರ್ಗದರ್ಶಿ ಶಿಕ್ಷಣಕ್ಕೊಂದು ಸೋಪಾನ ಮಾಲಿಕೆಯಲ್ಲಿ ಶೈಕ್ಷಣಿಕ ಮಾರ್ಗದರ್ಶಕರಾದ ಸಿ.ಆರ್.ಹನುಮಂತ್ ಅವರೊಂದಿಗೆ ಮಾತುಕತೆ. ವಿಷಯ: ಓದುವ ಅಭ್ಯಾಸ ಹೇಗಿರಬೇಕು ಹಾಗೂ ಓದಿದ್ದನ್ನು ನೆನಪಿಟ್ಟುಕೊಳ್ಳುವುದು ಹೇಗೆ? ಇವರೊಂದಿಗೆ ಭಾಗವಹಿಸುತ್ತಾರೆ : ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ: ಮೈಸೂರಿನ ಯರಗನಹಳ್ಳಿಯ ಸಣ್ಣಮ್ಮ ಹಾಗೂ ಮಾದಮ್ಮ ಅವರಿಂದ ಹೊನ್ನಮ್ಮನ ಹಾಡು, 1.00 ಪ್ರಗತಿಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿಯೋಜನೆಗಳ ಸರಣಿ, 1.20 ಭಾವಗೀತೆಗಳು: ಶ್ರುತಿ.ಜಿ.ರಾವ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಜೀವನದಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಗುರುದಕ್ಷಿಣೆ, ಪ್ರಸ್ತುತಿ–ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕೃಪಾಪೋಷಿತ ಯಕ್ಷಗಾನ ಮಂಡಲಿ ಸದಸ್ಯರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 5.30 ಮೈಸೂರು ದಸರಾ ಮಹೋತ್ಸವ ಕುರಿತ ಪೂರ್ವಭಾವಿ ಕಾರ್ಯಕ್ರಮ, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿದರ್ಪಣ, ವಾರದ ಕೃಷಿರಂಗ–ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಏಷ್ಯಾ ಕಪ್ ಕ್ರಿಕೆಟ್ 2025ರ ಅಂಗವಾಗಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ದುಬೈನ ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಸೂಪರ್ 4 ಹಂತದ ಟಿ–20 ಪಂದ್ಯದ ವೀಕ್ಷಕ ವಿವರಣೆ, 10.00 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ

ಜಾಹೀರಾತಿಗೆ ಜೋತುಬಿದ್ದು 29 ಲಕ್ಷ ಕಳೆದುಕೊಂಡ ಮೈಸೂರಿಗ!

ಮೈಸೂರು, ಸೆ.20– ಇನ್ಸ್ಟಾಗ್ರಾಮ್‌ನಲ್ಲಿ ಕಾಣಿಸಿದ ಜಾಹೀರಾತು ನಂಬಿ ವ್ಯಕ್ತಿಯೊಬ್ಬರು 29 ಲಕ್ಷಕ್ಕೂ ಹೆಚ್ಚು ಹಣ ಕಳೆದುಕೊಂಡಿದ್ದು, ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಗೋಕುಲಂ ಬಡಾವಣೆಯ 45 ವರ್ಷದ ವ್ಯಕ್ತಿ, ಇನ್ಸ್ಟಾಗ್ರಾಮ್ ನೋಡುವಾಗ ಹೂಡಿಕೆ ಬಗ್ಗೆ ಜಾಹೀರಾತು ಭಿತ್ತರವಾಗಿದೆ. ಕುತೂಹಲದಿಂದ ಆ ಜಾಹೀರಾತು ಮೇಲೆ ಕ್ಲಿಕ್ ಮಾಡಿ, ಅಲ್ಲಿ ಸೂಚಿಸಿದಂತೆ NOMURUX ಅಪ್ಲಿಕೇಶನ್ ಇನ್ಸ್ಟಾಲ್ ಮಾಡಿಕೊಂಡು 29.40 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಆದರೆ ಜಾಹಿರಾತಿನಲ್ಲಿ ತಿಳಿಸಿದ್ದಂತೆ ಯಾವುದೇ ಲಾಭಾಂಶ ಬಂದಿಲ್ಲ. ಆಪ್ ಮೂಲಕ ಸಂಪರ್ಕಿಸುವ ಪ್ರಯತ್ನವೂ ಸಫಲವಾಗಿಲ್ಲ. ಆಗ ತಾವು ಮೋಸ ಹೋಗಿರುವುದು ಗೊತ್ತಾಗಿ ಪೊಲೀಸರಿಗೆ ದೂರು ನೀಡಿದ್ದಾರೆ.

ಜಿಎಸ್‌ಟಿ ಕಡಿತ: ನಾಳೆಯಿಂದ ಹಾಲು ಉತ್ಪಾದನೆಗಳ ಬೆಲೆ ಇಳಿಕೆ



ಬೆಂಗಳೂರು, ಸೆ. 20– ಕೇಂದ್ರ ಸರ್ಕಾರ ಈಗಾಗಲೇ ಹಾಲಿನ ಉತ್ಪನ್ನಗಳ ಮೇಲಿನ ಜಿಎಸ್‌ಟಿ ದರ ಇಳಿಕೆ ಮಾಡಿದ ಹಿನ್ನೆಲೆಯಲ್ಲಿ ನಿರೀಕ್ಷೆಯಂತೆ ನಂದಿನಿ ಮೊಸರು, ತುಪ್ಪ, ಬೆಣ್ಣೆ ಚೀಸ್ ಸೇರಿ ಹಲವು ಉತ್ಪನ್ನಗಳ ಬೆಲೆ ಕಡಿಮೆಯಾಗಲಿದೆ ಸೋಮವಾರದಿಂದಲೇ ಪರಿಷ್ಕೃತ ದರಗಳು ಜಾರಿಗೆ ಬರಲಿವೆ.

ಕೇಂದ್ರ ಸರ್ಕಾರ ಸೆ.22ರಿಂದ ಅನ್ವಯವಾಗು ವಂತೆ ಹಾಲಿನ ಉತ್ಪನ್ನಗಳ ಮೇಲಿನ ಸರಕು ಸೇವಾ ತೆರಿಗೆಯನ್ನು (ಜಿಎಸ್‌ಟಿ) ಶೇ.12ರಿಂದ 5ಕ್ಕೆ ಇಳಿಕೆ ಮಾಡಿದೆ ಇದರಿಂದ ನಂದಿನಿಯ ಕೆಲ ಉತ್ಪನ್ನಗಳ ದರ ಕಡಿಮೆಯಾಗಲಿದೆ.

ಪನ್ನೀರ್ ಮತ್ತು ಗುಡ್ ಲೈಫ್ ಹಾಲಿಗೆ ವಿಧಿಸುತ್ತಿದ್ದ ಜಿಎಸ್‌ಟಿ ಶೇ.5ರಷ್ಟಿತ್ತು. ಇದೀಗ ಈ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗಿಡಲಾಗಿದೆ. ತುಪ್ಪ, ಬೆಣ್ಣೆ, ಚೀಸ್, ಪನ್ನೀರ್ ಹಾಗೂ ಇತರೆ ಕುರಕಲು ತಿಂಡಿಗಳ ಜಿಎಸ್‌ಟಿ ದರವು ಶೇ.12 ರಿಂದ ಶೇ.5ಕ್ಕೆ ಇಳಿಕೆಯಾಗಿದೆ. ಇದಕ್ಕೆ ಅನುಗುಣವಾಗಿ ಈ ಉತ್ಪನ್ನಗಳ ಬೆಲೆಯೂ ಕಡಿಮೆಯಾಗಲಿದೆ.

ಕುಕ್ಕೀಸ್, ಚಾಕೋಲೆಟ್, ಐಸ್‌ಕ್ರೀಂ, ನೀರಿನ ಉತ್ಪನ್ನಗಳಿಗೆ ವಿಧಿಸುತ್ತಿದ್ದ ಜಿಎಸ್‌ಟಿ ಶೇ.18ರಷ್ಟಿತ್ತು. ಇದೀಗ ಈ ಉತ್ಪನ್ನಗಳ ಜಿಎಸ್‌ಟಿ ದರವನ್ನು ಶೇ.5ಕ್ಕೆ ಇಳಿಕೆಯಾಗಲಿದೆ. ಜಿಎಸ್‌ಟಿ ಇಳಿಕೆಯಿಂದ ಮೊಸರಿನ ದರ ಲೀಟರ್‌ಗೆ 4 ರೂ.ವರೆಗೆ ಕಡಿಮೆಯಾಗುವ ನಿರೀಕ್ಷೆ ಇದೆ

ವುವುಜೆಲಾ (ತುತ್ತೂರಿ) ಮಾರಾಟ, ಬಳಕೆ ನಿಷೇಧ

ಮೈಸೂರು, ಸೆ.20– ಮೈಸೂರು ನಗರ ಘಟಕ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆ ಮತ್ತು ಸ್ಥಳಗಳಲ್ಲಿ ಓಡಾಡುವ ಸಾರ್ವಜನಿಕರಿಗೆ ಹಾಗೂ ಪ್ರವಾಸಿಗರಿಗೆ ಕೆಲ ಪುಂಡ ಪೋಕರಿಗಳು ವುವುಜೆಲಾ (ತುತ್ತೂರಿ) ಗಳಿಂದ ಕಿವಿ ಹತ್ತಿರ ಊದಿ ಕಿರಿಕಿರಿ ಉಂಟು ಮಾಡುವುದರಿಂದ ಸಾರ್ವಜನಿಕರ ನೆಮ್ಮದಿ ಭಂಗ ಉಂಟಾಗುವುದಲ್ಲದೆ ಕಿರಿಕಿರಿಯಾಗಿ ಅಚಾತುರ್ಯ ಘಟನೆಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ಕರ್ನಾಟಕ ಪೊಲೀಸ್ ಕಾಯ್ದೆ 1963, ಕಲಂ 35 ರ ರೀತ್ಯ ಮೈಸೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ವುವುಜೆಲಾ (ತುತ್ತೂರಿ) ಮಾರಾಟ ಮಾಡುವುದು ಮತ್ತು ಬಳಸುವುದನ್ನು ನಿಷೇಧಿಸಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ.,

ಕಸಬಾ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ಮಾನ್ಯ ಸದಸ್ಯರೇ, ನಮ್ಮ ಸಂಘದ 2024-2025ನೇ ಸಾಲಿನ ಸರ್ವ ಸದಸ್ಯರ **ವಾರ್ಷಿಕ ಮಹಾಸಭೆಯು** ದಿನಾಂಕ: 24-09-2025ನೇ ಬುಧವಾರ ಬೆಳಿಗ್ಗೆ 11.30 ಘಂಟೆಗೆ, **ಪರಸಯ್ಯನವರ ಧರ್ಮ ಛತ್ರ, ಹುಣಸೂರು** ಇಲ್ಲಿ ಏರ್ಪಡಿಸಲಾಗಿದೆ. ಈಗಾಗಲೇ ನಮ್ಮ ಸೊಸೈಟಿಯ ಎಲ್ಲಾ ಸದಸ್ಯರುಗಳಿಗೆ ಅಂಚೆಯ ಮೂಲಕ ಮಹಾಸಭೆಯ ಆಹ್ವಾನ ಪತ್ರಿಕೆಯನ್ನು ಕಳುಹಿಸಲಾಗಿದೆ. ಆದರೂ ಇತರೆ ಕಾರಣಗಳಿಂದಾಗಿ ಯಾರಿಗಾದರೂ ಆಹ್ವಾನ ಪತ್ರಿಕೆಯು ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಮೇಲೆ ತಿಳಿಸಿರುವ ದಿನಾಂಕದಂದು ಮಹಾ ಸಭೆಗೆ ಹಾಜರಾಗಬೇಕಾಗಿ ಕೋರುತ್ತೇವೆ.

ಸಹಿ/– ಮುಖ್ಯಕಾರ್ಯನಿರ್ವಹಣಾಧಿಕಾರಿ

ಚಾಮರಾಜನಗರ ವಿಶ್ವವಿದ್ಯಾನಿಲಯ
CHAMARAJANAGARA UNIVERSITY

SUVARNA GANGOTRI, CHAMARAJANAGARA-571313

Ph No: 08226-297112 Email ID : chamarajanagarauniversity@gmail.com

No:CUC/UED-1/11/2025-26 Date: 12-09-2025

Tender


(Website: www.kppp.karnataka.gov.in)

ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ಇಲ್ಲಿ **Setting-up of Fully Managed, Promotable, Scalable E-Learning Management System along with Developmrnt and supply of E-Content for Chamarajanagara University** ಕಾಮಗಾರಿ/ಯೋಜನೆಯ ಅವಶ್ಯಕತೆಯಿದ್ದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ **(K.T.P.P)** 1999/2000ರ ಪ್ರಕಾರ ಇ-**Procurement** ಟೆಂಡರ್ ಮೂಲಕ ಪಡೆಯುವ ಆವಶ್ಯಕತೆ ಇರುತ್ತದೆ. ಈ ಸಂಬಂಧ ಸದರಿ ಕಾಮಗಾರಿ/ಯೋಜನೆಯನ್ನು ಹೆಸರಾಂತ/ಅರ್ಹ ಮಾರಾಟಗಾರರಿಂದ ಇ-**Procurement** ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ.

1	ಟೆಂಡರ್ ಪ್ರಕಟಣೆ ದಿನಾಂಕ.	NO/CUC/UED/08/2025-26 Date: 12-09-2025
2	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ.	ದಿನಾಂಕ : 13-09-2025
3	ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ	ದಿನಾಂಕ: 13-10-2025, ಸಂಜೆ 3.00 ಗಂಟೆಗೆ
4	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ದಿನಾಂಕ : 13-10-2025, ಬೆಳಿಗ್ಗೆ 11.00 ಗಂಟೆಗೆ
5	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ದಿನಾಂಕ : 15-10-2025, ಬೆಳಿಗ್ಗೆ 11.00 ಗಂಟೆಗೆ
6	ಟೆಂಡರ್ ಜೊತೆಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ	ರೂ. 68,750=00/-
7	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ದೂರವಾಣಿ ಸಂಖ್ಯೆ	ಕುಲಸಚಿವರು, ಚಾಮರಾಜನಗರ ವಿಶ್ವವಿದ್ಯಾನಿಲಯ ಚಾಮರಾಜನಗರ, ದೂರವಾಣಿ ಸಂಖ್ಯೆ: 08226-297512

ಸಂ:ವಾಸಾಸಂಇ:ಚಾನಗರ:362:2025-26

ಸಹಿ/– ಕುಲಸಚಿವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ



ವೈಕುಂಠ ಸಮಾರಾಧನ ಆಹ್ವಾನ ಪತ್ರಿಕೆ

ಶ್ರೀ ಎಂ.ಬಿ ಚಿಕ್ಕಣ್ಣನವರು

ಇವರು ದಿನಾಂಕ 12.9.2025ನೇ ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 22.09.2025 ನೇ ಸೋಮವಾರ, ವೈಕುಂಠ ಸಮಾರಾಧನೆಯನ್ನು ಬೆಳಗ್ಗೆ 10.30 ಗಂಟೆಗೆ ನಮ್ಮ ಸ್ವಗೃಹ ನಂ.205 ಮಂಚೇಗೌಡನ ಕೊಪ್ಪಲ್ ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಲು ಮನವಿ. ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ತಿಳಿದು ಬರಬೇಕಾಗಿ ಕೋರುತ್ತೇವೆ.

ದುಃಖತಪ್ತರು:
ಪತ್ನಿ– ಭಾರತಿ, ಮಕ್ಕಳು,
ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

ನಕ್ಕರೆ ಅದೇ ಸ್ವರ್ಗ

ಪತಿ : ನನ್ನ ಪತ್ನಿ ನಿನ್ನೆ ಸಂಜೆ ಬಾವಿಗೆ ಬಿದ್ದು ತುಂಬಾನೇ ಏಟು ಮಾಡಿಕೊಂಡು ಜೋರಾಗಿ ಕಿರುಚ್ತಿದ್ಲು ಡಾಕ್ಟರ್

ಡಾಕ್ಟರ್ : ನಿಮ್ಮ ಪತ್ನಿ ಆರೋಗ್ಯ ಈಗ ಹೇಗಿದೆ.

ಪತಿ : ಇವತ್ತು ಪರ್ವಾಗಿಲ್ಲ ಡಾಕ್ಟರೆ, ಬಾವಿ ಒಳಗಿನಿಂದ ಏನು ಶಬ್ದ ಬರ್ತಾ ಇಲ್ಲ

ಮೈಸೂರು ಮಿತ್ರ

ಭಾನುವಾರ, 21 ಸೆಪ್ಟೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ......

ಅಹಂಕಾರದಿಂದ ತುಂಬಿದ ಮನುಷ್ಯನು ಇತರರನ್ನು ಅವಮಾನಿಸುವುದರಲ್ಲಿ ಸಂತೋಷಪಡುತ್ತಾನೆ. ಸಂಸ್ಕಾರದಿಂದ ತುಂಬಿದ ವ್ಯಕ್ತಿಯು ತನ್ನನ್ನು ತಾನು ತಲೆಬಾಗಿ ಇತರರಿಗೆ ಗೌರವವನ್ನು ನೀಡುವುದರಲ್ಲಿ ಸಂತೋಷ ಪಡುತ್ತಾನೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಲಕ್ಕೆ ತಕ್ಕಂತೆ ನಡಿಯಬೇಕು, ತಾಳಕ್ಕೆ ತಕ್ಕಂತೆ ಕುಣಿಯಬೇಕು.

ನಿಮ್ಮ ಪತ್ರಗಳು

■ ರಾಷ್ಟ್ರಕವಿ ಕುವೆಂಪು ಭಾರತ ರತ್ನಕ್ಕೆ ಅರ್ಹರು



ಮಾನ್ಯರೆ,

ಮನುಜ ಮತ ವಿಶ್ವಪಥ ಎಂಬ ಸಂದೇಶ ಸಾರಿದ ಮೇರು ವ್ಯಕ್ತಿತ್ವದ ಜ್ಞಾನ ಶಿಖರ ರಾಷ್ಟ್ರಕವಿ ಕುವೆಂಪು ಅವರಿಗೆ ದೇಶ ಕೊಡಮಾಡುವ ಪ್ರತಿಷ್ಠಿತ ನಾಗರಿಕ ಸೇವಾ ಪ್ರಶಸ್ತಿಯಾದ 'ಭಾರತ ರತ್ನ'ವನ್ನು ಮರಣೋತ್ತರವಾಗಿ ನೀಡಬೇಕು ಎಂದು ತಡವಾಗಿಯಾದರೂ ರಾಜ್ಯ ಸರ್ಕಾರ ಕ್ಯಾಬಿನೆಟ್‌ನಲ್ಲಿ ಒಳ್ಳೆಯ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವುದು ಶ್ಲಾಘನೀಯ. ಜಾತಿ, ಧರ್ಮ, ಮೌಢ್ಯ, ಮೂಢನಂಬಿಕೆಗಳಿಗೆ ಎಂದೂ ಜೋತು ಬೀಳದೆ ವೈಜ್ಞಾನಿಕ, ವಿಶಾಲ ಮನೋಭಾವನೆಯೊಂದಿಗೆ ತಮ್ಮ ವ್ಯಕ್ತಿತ್ವವನ್ನು ಬಲವಾಗಿ ಬೇರೂರಿಸಿ ಸೌಹಾರ್ದ, ಸಹಬಾಳ್ವೆ, ಜಾತ್ಯಾತೀತ, ಸಮಾಜದ ಸಮಾನತೆಯ ಆಶಯ ಹೊಂದಿ ತಾವು ನುಡಿದಂತೆ ನಡೆದು ಬರೆದಂತೆ ಬದುಕಿದ ಆದರ್ಶವಾದಿ. ಕನ್ನಡ ಭಾಷೆಯ ಸಾಹಿತ್ಯ ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದವರಲ್ಲಿ ಇವರು ಅಗ್ರಗಣ್ಯರು. ತಮ್ಮ ಜೀವಮಾನವನ್ನೆಲ್ಲಾ ವೈಚಾರಿಕತೆಗೆ ಒತ್ತು ನೀಡಿ ಮೇಲ್ಪಂಕ್ತಿ ಹಾಕಿಕೊಟ್ಟ ಮಹಾನ್ ಮಾನವತಾವಾದಿ. ಕೇಂದ್ರ ಸರ್ಕಾರವು ಅರ್ಹ ಹಾಗೂ ಯೋಗ್ಯರಾದ ಇವರಿಗೆ 'ಭಾರತ ರತ್ನ' ಘೋಷಿಸಲಿ. ಇದರಿಂದಾಗಿ ಪ್ರಶಸ್ತಿಯ ಮೌಲ್ಯ ಇನ್ನಷ್ಟು ಹೆಚ್ಚಲಿದೆ.

–ಅನಿಲ್ ಕುಮಾರ್, ನಂಜನಗೂಡು.

■ ರಸ್ತೆ ಗುಂಡಿ ಮುಚ್ಚುವಂತೆ ಮನವಿ



ಮಾನ್ಯರೆ,

ಮೈಸೂರಿನ ಶಿವರಾತ್ರೀಶ್ವರನಗರ, ಬನ್ನಿಮಂಟಪದ ಉನ್ನತಿನಗರದ ಹತ್ತಿರ ನಗರ ಪಾಲಿಕೆ ಸಿಬ್ಬಂದಿ ರಸ್ತೆಯ ಮಧ್ಯದಲ್ಲಿ ಮೂರು ಗುಂಡಿಗಳನ್ನು ತೆಗೆದು ಮುಚ್ಚದೆ ಹಾಗೆ ಹೋಗಿದ್ದಾರೆ. ಈ ರಸ್ತೆಯಲ್ಲಿ ಶಾಲಾ ಮಕ್ಕಳು, ಹಿರಿಯ ನಾಗರಿಕರು ಓಡಾಡುವುದುಂಟು. ಆಟೋ, ಬೈಕುಗಳು ವೇಗವಾಗಿ ಚಲಿಸುತ್ತವೆ. ರಾತ್ರಿ ವೇಳೆಯಲ್ಲಿ ಈ ಗುಂಡಿ ಕಣ್ಣಿಗೆ ಕಾಣಿಸುವುದಿಲ್ಲ. ಇದರಿಂದಾಗಿ ಹಲವಾರು ಅಪಘಾತಗಳು ಸಂಭವಿಸಿರುವುದುಂಟು. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇನ್ನೂ ಹೆಚ್ಚಿನ ಅನಾಹುತಗಳು ಸಂಭವಿಸುವ ಮುನ್ನ ಗುಂಡಿಯನ್ನು ಮುಚ್ಚುವಂತೆ ಈ ಮೂಲಕ ಮನವಿ.

–ಶರಾನಿಧ, ಬನ್ನಿಮಂಟಪ.

■ ಕೆ.ಆರ್. ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ಕುವೆಂಪುನಗರ ವಾಣಿಜ್ಯ ಸಂಕೀರ್ಣದಿಂದ ಕುವೆಂಪುನಗರ ಡಿಪೋವರೆಗಿನ ನೃಪತುಂಗ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮೊದಲೇ ಕಿರಿದಾದ ರಸ್ತೆ. ಹಣ್ಣು, ತರಕಾರಿ ಮಾರುವವರು ಸಹ ವ್ಯಾಪಾರ ಮಾಡುತ್ತಿರುತ್ತಾರೆ. ಈ ರಸ್ತೆಯಲ್ಲಿ ಹೊಸ ಹೊಸ ಕಟ್ಟಡಗಳು ನಿರ್ಮಾಣ ಆಗುತ್ತಿರುವುದರಿಂದ ಅಲ್ಲಲ್ಲಿ ವಾಚ್‌ಮನ್ ಶೆಡ್‌ಗಳನ್ನು ಸಹ ನಿರ್ಮಿಸಿ ಪರಿಸ್ಥಿತಿ ಹೇಳತೀರದಾಗಿದೆ. ಮುಂಬರುವ ನಾಡಹಬ್ಬ ಮೈಸೂರು ದಸರಾ ಅನುದಾನದಲ್ಲಿ ಕೆ.ಆರ್. ಕ್ಷೇತ್ರದ ಕ್ರಿಯಾಶೀಲ ಶಾಸಕರು ಈ ರಸ್ತೆಯ ಬಗ್ಗೆ ಗಮನಹರಿಸಿ ಅಭಿವೃದ್ಧಿಪಡಿಸಲು ಮನವಿ.

– ನೊಂದ ನಾಗರಿಕರು, ಮೈಸೂರು.

■ ಮುದ್ದಹಳ್ಳಿ –ನವಿಲೂರು ರಸ್ತೆ ಡಾಂಬರೀಕರಣ ಮಾಡಿ

ಮಾನ್ಯರೆ,

ನಂಜನಗೂಡು–ಊಟಿ ರಸ್ತೆಯ ಕಡುಬಿನಕಟ್ಟೆಯಿಂದ ಮುದ್ದಹಳ್ಳಿ– ನವಿಲೂರು ಮಾರ್ಗವಾಗಿ ಲಕ್ಷ್ಮಣಾಪುರ, ಸೂರಳ್ಳಿ, ಕಸುವಿನಹಳ್ಳಿ, ಹುರಾ ಗ್ರಾಮಗಳಿಗೆ ದಿನವೂ ಅನೇಕ ಕೆಎಸ್‌ಆರ್‌ಟಿಸಿ ಬಸ್ಸುಗಳು ಸಂಚರಿಸುತ್ತವೆ.

ಗ್ರಾಮ ಪಂಚಾಯಿತಿ ಕಚೇರಿ, ಶಾಲೆ, ಆಸ್ಪತ್ರೆ, ಆರೋಗ್ಯ ಉಪಕೇಂದ್ರಗಳಿದ್ದು, ನಿತ್ಯವೂ ಅನೇಕ ಸಿಬ್ಬಂದಿಗಳು ಸಂಚಾರ ಮಾಡುತ್ತಾರೆ. ಅಲ್ಲದೆ ಇದೇ ಗ್ರಾಮಗಳಿಂದ ಅನೇಕ ಮಂದಿ ಕೆಲಸ ನಿಮಿತ್ತ, ನಂಜನಗೂಡು, ಮೈಸೂರು ನಗರಗಳಿಗೆ ಸಂಚರಿಸುತ್ತಾರೆ. ಆದರೆ ಕಡುಬಿನಕಟ್ಟೆಯಿಂದ ಮುದ್ದಹಳ್ಳಿ – ನವಿಲೂರು ನಡುವಿನ 5 ಕಿ.ಮೀ. ರಸ್ತೆ ಭಾರಿ ಹಳ್ಳಕೊಳ್ಳಗಳಿಂದ ಕೂಡಿದ್ದು ಬಸ್ಸು, ಕಾರು ಹಾಗೂ ದ್ವಿಚಕ್ರ ವಾಹನಗಳು ಕೂಡ ಓಡಾಡಲು ಸಾಧ್ಯವಾಗದಷ್ಟು ದೊಡ್ಡ ದೊಡ್ಡ ಗುಂಡಿಗಳು ಬಿದ್ದಿವೆ. ಇದರಿಂದಾಗಿ ವಾಹನ ಸವಾರರು ಹಳ್ಳಕೊಳ್ಳಗಳನ್ನು ತಪ್ಪಿಸಲು ಎಡ ಭಾಗದಲ್ಲಿ ಹೋಗುವವರು ಬಲ ಭಾಗದಲ್ಲಿ ಹಾಗೂ ಡಾಂಬರು ರಸ್ತೆಯನ್ನೇ ಬಿಟ್ಟು ಪಕ್ಕದ ಮಣ್ಣು ಹಾದಿಗೆ ಇಳಿಯುತ್ತಾರೆ. ಇದರಿಂದ ಅಪಘಾತಗಳಾಗುವ ಸಂಭವ ಇದೆ. ವೃದ್ಧರು, ಗರ್ಭಿಣಿಯರು ಬಸ್ಸಿನಲ್ಲಿ ಹೋಗಲು ಹರಸಾಹಸ ಪಡುವಂತಾಗಿದೆ. ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಅಧ್ಯಕ್ಷರು, ಸದಸ್ಯರು ಈ ಬಗ್ಗೆ ಗಮನಹರಿಸದಿರುವುದು ಖಂಡನೀಯ. ಕ್ಷೇತ್ರದ ಶಾಸಕರು ಈ ಬಗ್ಗೆ ಗಮನಹರಿಸಿ ಕೂಡಲೇ ರಸ್ತೆ ಡಾಂಬರೀಕರಣ ಮಾಡಲು ಕ್ರಮ ವಹಿಸಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

■ ಪೊಲೀಸರು ಹೆಚ್ಚಿನ ಕಟ್ಟೆಚ್ಚರ ವಹಿಸಬೇಕು

ಮಾನ್ಯರೆ,

ವಿಶ್ವವಿಖ್ಯಾತ ಮೈಸೂರು ದಸರಾ –2025 ಕಾರ್ಯಕ್ರಮಗಳು ಶುರುವಾಗಲು ಸಿದ್ಧವಾಗುತ್ತಿದೆ. ಸುಮಾರು 11 ದಿನ ಮೈಸೂರಿನಲ್ಲಿ ಹಲವಾರು ದಸರಾ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿ ಪೊಲೀಸರು ಹೆಚ್ಚಿನ ಬಿಗಿ ಭದ್ರತೆಯನ್ನು ಕೊಡಬೇಕು. ಮೈಸೂರಿಗೆ ಹಲವಾರು ಹೊರಗಿನ ಪ್ರಯಾಣಿಕರು ಬರುವ ಕಾರಣ ಮೈಸೂರಿನ ಜನತೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ರಾತ್ರಿ ಸಮಯದಲ್ಲಿ ಪೊಲೀಸರು ಹೆಚ್ಚು ಗಮನಹರಿಸಬೇಕು. ಈಗಾಗಲೇ ಹಗಲು ರಾತ್ರಿ ಎನ್ನದೆ ಕರ್ತವ್ಯದಲ್ಲಿರುವ ಮೈಸೂರಿನ ಪೊಲೀಸರಿಗೆ ಮೈಸೂರು ಜನತೆಯ ಪರವಾಗಿ ಧನ್ಯವಾದಗಳು.

– ಮಹಾಂತೇಶ್ ಬಳ್ಳೂರುಹುಂಡಿ, ನಂಜನಗೂಡು ತಾ.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ವೈಕುಂಠ ಸಮಾರಾಧನೆ... ಹೀಗೊಂದು ಹರಟೆ...

ಗೆಳತಿ ಸುಧಾ ಅವರೊಡನೆ ಮೊನ್ನೆ ಮೊನ್ನೆ ಒಂದು ವೈಕುಂಠ ಸಮಾರಾಧನೆಗೆ ಹೋಗುವ ಸಂದರ್ಭ ಒದಗಿ ಬಂದಿತ್ತು. ನಮ್ಮ ಗೃಹ ಸಮುಚ್ಚಯದಲ್ಲಿ ತೀರಿಕೊಂಡ ಒಬ್ಬ ಹಿರಿಯ ಮಹಿಳೆಯ ಸಲುವಾಗಿ ನಡೆದುದು ಅದು. ನಾವು ಅಲ್ಲಿಗೆ ಹೋದಾಗ, ನಮ್ಮ ಸಂಸ್ಕೃತಿಗೆ ಸೇರಿದ, ಬಿಟ್ಟುಹೋಗುತ್ತಿರುವ, ಬದಲಾದ ಹಲವಾರು ಅಂಶಗಳು ಗಮನಿಸಲು ಸಿಕ್ಕಿತು. ನನಗೆ ಉಂಟಾದ ಅಚ್ಚರಿ, ಖೇದ, ಸಂತೋಷ ಇತ್ಯಾದಿ ಭಾವಗಳನ್ನು ನಿಮ್ಮೊಡನೆಯೂ ಹಂಚಿಕೊಳ್ಳಲು ಆಗಲೇ ನಿರ್ಧರಿಸಿದೆ!

ಆ ವಿಶಾಲವಾಗಿದ್ದ ಪಡಸಾಲೆಯಲ್ಲಿ ಒಂದು ಕೊನೆಯಲ್ಲಿ ಹಾಕಿದ್ದ ಒಂದು ಕುರ್ಚಿಯ ಮೇಲೆ ತೀರಿಹೋಗಿದ್ದ ಆ ಹಿರಿಯ ಜೀವದ ಫೋಟೋ ಹೂಹಾರಗಳನ್ನು ಧರಿಸಿ ಮುಗುಳ್ನಗುತ್ತಾ ನಮ್ಮೆಲ್ಲರನ್ನೂ ಮೌನವಾಗಿ ಗಮನಿಸುತ್ತಿದೆಯೇನೋ ಎಂಬಂತೆ ತೋರುತ್ತಿತ್ತು. ಅದರ ಮುಂದೆ ವೇದ ಪಠಣ ಮಾಡುತ್ತಿದ್ದ ಋತ್ವಿಜರ ಸಮೂಹ. ಪಡಸಾಲೆಯ ಎಡ ಬಲಗಳಲ್ಲಿ ಹಾಕಿದ್ದ ಸಾಲು ಸಾಲು ಕುರ್ಚಿಗಳಲ್ಲಿ ಆಸೀನರಾಗಿದ್ದ ಕೆಲವರು, ಹರಟೆಯಲ್ಲಿ ಮಗ್ನರಾಗಿದ್ದ ಮಹಿಳಾಮಣಿಗಳು, ಅತ್ತಿಂದಿತ್ತ ಓಡಾಡುತ್ತಾ ಕೆಲಸಗಳನ್ನು ಮಾಡುತ್ತಿದ್ದ ಜವಾಬ್ದಾರಿ ಹೊತ್ತವರು... ಹೀಗೆ ವಿವಿಧ ರೀತಿಯ ಮಂದಿ ಅಲ್ಲಿ ನೆರೆದಿದ್ದರು. ವೇದದಲ್ಲಿ ಹಾಸುಹೊಕ್ಕಿರುವ ಅದರ ಲಯಬದ್ಧತೆಯನ್ನು ಕೇಳುವುದೇ ಒಂದು ಸೊಗಸು ಎಂದು ಅಂದುಕೊಳ್ಳುತ್ತಾ ಅದರೆಡೆಗೆ ಗಮನಹರಿಸಿದೆ. ಆಹಾ! ಇದೇನಿದು! ಅವರಲ್ಲಿ ಅನೇಕರ ಕೈಯ್ಯಲ್ಲಿ ಮೊಬೈಲ್ ಫೋನು! ಅದನ್ನು ನೋಡುತ್ತಾ ಪಠಣ ಮಾಡುತ್ತಿದ್ದವರು ಹಲವು ಮಂದಿ! ಭಲೆ ಮೊಬೈಲೇ ನಿನ್ನಯ ಮಹಿಮೆಯನ್ನು ಏನೆಂದು ವರ್ಣಿಸಲಿ? ಎಂದು ಅಂದುಕೊಂಡೆ. ಈ ಸುಲಭೋಪಾಯದಿಂದಾಗಿ ಶ್ರುತಿ, ಅಂದರೆ ಕೇವಲ ಕೇಳ್ಮೆಯಿಂದಲೇ, ಸಹಸ್ರಾರು ವರ್ಷಗಳಿಂದ ಬಾಯಿಂದ ಬಾಯಿಗೆ ವರ್ಗಾಯಿಸಲ್ಪಟ್ಟಿರುವ ಈ ಅದ್ಭುತ ಸಂಗತಿಗೆ, ಅಂದರೆ, ವೇದಗಳಿಗೆ ಈಗ ಉಂಟಾಗಿರುವ ಆಧುನಿಕತೆಯ ಸ್ಪರ್ಶ ನೋಡಿ ಸಂತೋಷಪಡಬೇಕೋ, ದುಃಖಪಡಬೇಕೋ ತಿಳಿಯದಾದೆ. ಅವರೆಲ್ಲರೂ ಕುಳಿತುದುದು ಚಿಕ್ಕ ಚಿಕ್ಕ ಚಾಪೆಗಳ ಮೇಲೆ. ಅದನ್ನು ನೋಡಿ ಮನಸ್ಸು ಬಾಲ್ಯಕ್ಕೆ ಓಡಿತು. ಆಗೆಲ್ಲ ಇಂತಹ ಚಿಕ್ಕ ಚಾಪೆಗಳನ್ನು ಊಟದ ಚಾಪೆ ಎಂದೇ ಕರೆಯುತ್ತಿದ್ದುದು. ಟೇಬಲ್ ಮೇಲೆ ಕುಳಿತು ಊಟ ಮಾಡುವ ಅಭ್ಯಾಸ ಸಾಮಾನ್ಯವಾಗಿ ಯಾವ ಮಧ್ಯಮ ವರ್ಗದ ಮನೆಯಲ್ಲೂ ಇರದಿದ್ದ ಕಾಲ.

> ಭಲೆ ಮೊಬೈಲೇ ನಿನ್ನಯ ಮಹಿಮೆಯನ್ನು ಏನೆಂದು ವರ್ಣಿಸಲಿ? ಎಂದು ಅಂದುಕೊಂಡೆ. ಈ ಸುಲಭೋಪಾಯದಿಂದಾಗಿ ಶ್ರುತಿ, ಅಂದರೆ ಕೇವಲ ಕೇಳ್ಮೆಯಿಂದಲೇ, ಸಹಸ್ರಾರು ವರ್ಷಗಳಿಂದ ಬಾಯಿಂದ ಬಾಯಿಗೆ ವರ್ಗಾಯಿಸಲ್ಪಟ್ಟಿರುವ ಈ ಅದ್ಭುತ ಸಂಗತಿಗೆ, ಅಂದರೆ, ವೇದಗಳಿಗೆ ಈಗ ಉಂಟಾಗಿರುವ ಆಧುನಿಕತೆಯ ಸ್ಪರ್ಶ ನೋಡಿ ಸಂತೋಷ ಪಡಬೇಕೋ, ದುಃಖಪಡಬೇಕೋ ತಿಳಿಯದಾದೆ.



ಕೆಳಗೆ ಈ ಚಾಪೆಯನ್ನು ಹಾಕಿಕೊಂಡೇ ಊಟಕ್ಕೆ ಕುಳಿತುಕೊಳ್ಳುತ್ತಿದ್ದ ನೆನಪು ನುಗ್ಗಿ ಬಂತು. ಊಟ ಮುಗಿದೊಡನೆ ಅದನ್ನು ಸುತ್ತಿ, ಎತ್ತಿಡುತ್ತಿದ್ದುದು ನನ್ನ ಪಾಲಿನ ಕೆಲಸ ! ಎಷ್ಟು ಸುಲಭವಾಗಿ ಇದನ್ನು ಕಳೆದುಕೊಂಡುಬಿಟ್ಟೆವಲ್ಲ ಎಂದನಿಸಿತು.

ತೀರಿಕೊಂಡವರ ಬಗ್ಗೆ ದುಃಖ, ಆಪ್ತತೆ, ಅಂತಃಕರಣ ಇವುಗಳೆಲ್ಲವೂ ಕೇವಲ ಅವರ ತೀರಾ ಸಮೀಪದ ಬಂಧುಗಳಿಗೆ ಮಾತ್ರವೇನೋ ಎಂಬಂತೆ ಮಹಿಳೆಯರ ಹರಟೆ ನಿರಂತರವಾಗಿ ಸಾಗುತ್ತಿತ್ತು. ನಾವು ಇಲ್ಲಿ ಏತಕ್ಕಾಗಿ ಸೇರಿದ್ದೇವೆ ಎಂಬುದನ್ನೇ ಮರೆತವರಂತೆ. ಮೊನ್ನೆ ಮೊನ್ನೆಯವರೆಗೆ ನಮ್ಮೊಡನೆ ಇದ್ದ ಈ ಜೀವ ಥಟ್ಟನೆ ನಮ್ಮ ಬದುಕಿನಿಂದಲೇ ಹೊರನಡೆವ ಈ ಕಟುಸತ್ಯವನ್ನು ಅರಗಿಸಿಕೊಳ್ಳುವುದು ಅವರ ಮಕ್ಕಳಿಗೆ ಅದೆಷ್ಟು ಕಷ್ಟದ ಕೆಲಸ. ಎಷ್ಟೇ ವಯಸ್ಸಾಗಿದ್ದರೂ ಮಕ್ಕಳಿಗೆ ಅವಳು ಪ್ರೀತಿಯ ತಾಯಿಯೇ ಅಲ್ಲವೇ? ಆ ಮಮತೆಯ ಸ್ಥಾನವನ್ನು ಮತ್ಯಾವ ವಸ್ತುವಿನಿಂದಲೂ ತುಂಬಲು ಸಾಧ್ಯವಿಲ್ಲ. ನಮ್ಮ ಬದುಕಿನಲ್ಲಿ ಆ ಶೂನ್ಯತೆ ಅಥವಾ ನಿರ್ವಾತವು ಹಾಗೆಯೇ ಉಳಿದುಬಿಡುತ್ತದೆ. ತೀರಿಹೋದ ಆ ಹಿರಿಯ ಜೀವದ ಮಕ್ಕಳನ್ನು ನೋಡುತ್ತಿರುವಾಗ ಅವರು ಆಕೆಯೊಡನೆ ಕಳೆದ ಒಂದೊಂದು ನೆನಪೂ ಅವರಲ್ಲಿ ಭದ್ರವಾದ ಬುತ್ತಿಯಂತೆ ಉಳಿದು, ಆಗಾಗ ಅದರ ಸವಿ ಉಣಿಸನ್ನು ನೀಡುತ್ತದೆ ಅಲ್ಲವೇ ಎಂದನಿಸಿತು.

ಅಗೋ ಅಲ್ಲಿ, ಬಂದವರಿಗೆ ದಾನವಾಗಿ ಕೊಡಬೇಕಾದಂತಹ ವಸ್ತುಗಳನ್ನು ಐದಾರು ಮಂದಿ ಸೇರಿ ಕವರುಗಳಿಗೆ ಹಾಕುವ ಕೆಲಸವನ್ನು ಮಾಡುತ್ತಿದ್ದರು. ನಮ್ಮ ಮುಂದಿನ ಪೀಳಿಗೆಯವರು ಇದನ್ನೆಲ್ಲ ಮಾಡುತ್ತಾರಾ? ಎಂದು ಮನಸ್ಸು ಪ್ರಶ್ನಿಸಿತು. ನಮ್ಮ ಸಂಸ್ಕೃತಿ, ಪದ್ಧತಿ, ಆಚಾರ ವಿಚಾರಗಳನ್ನು ಅರ್ಥೈಸಿಕೊಂಡು, ಅದರ ಬಗ್ಗೆ ಗೌರವ ಇದ್ದವರು ಮಾತ್ರ ಮಾಡಲು ಸಾಧ್ಯ ಎಂದು ಒಳಮನಸ್ಸು ಪಿಸುಗುಟ್ಟಿತು. ಮಿಕ್ಕವರು ನಮ್ಮ ಸಂಪ್ರದಾಯಗಳ ಒಳ ಅರ್ಥವನ್ನು ತಿಳಿಯದೆ, ನಮ್ಮದೆಲ್ಲವನ್ನೂ ಜಳ್ಳು ಎಂದು, ಅರ್ಥವಿಲ್ಲದ ಹುಚ್ಚಾಟ ಎಂದು ತಿರಸ್ಕರಿಸುವ ಆಧುನಿಕ ಮನೋಭಾವದವರು ಖಂಡಿತಾ ಮಾಡುವುದಿಲ್ಲ ಎಂಬುದು ಖಾತ್ರಿ. ಮೊನ್ನೆಯಷ್ಟೇ ಶ್ರೀರಂಗಪಟ್ಟಣಕ್ಕೆ ಹೋದ ನೆನಪಾಯಿತು. ತೀರಿಕೊಂಡ ನಮ್ಮ ಎಲ್ಲ ಹಿರಿಯರಿಗೆ, ಪಿತೃಗಳಿಗೆ, ಬಂಧು ಬಳಗದವರಿಗೆ, ಸ್ನೇಹಿತರಿಗೆ ಪಕ್ಷಮಾಸದಲ್ಲಿ ತರ್ಪಣ ಕೊಡುವ, ಕೊಟ್ಟು, ತುಸುವಾದರೂ ಋಣಮುಕ್ತರಾದೆವೆಂಬ ಭಾವದಿಂದ ಧನ್ಯರಾಗುವ ಪದ್ಧತಿ ಅದೆಷ್ಟು ಅರ್ಥಪೂರ್ಣ! ಅಷ್ಟೆಲ್ಲಾ ದಾನಗಳನ್ನು ಮಾಡಿ ದಾನಶೂರ ಎಂದೆನಿಸಿಕೊಂಡಿದ್ದ ಕರ್ಣ ಪಿತೃ ಪೂಜೆಯನ್ನು ಮಾತ್ರ ಮಾಡಿರಲಿಲ್ಲವಂತೆ. ಅದಕ್ಕಾಗಿ ಅದನ್ನು ಮಾಡಿ ಬಾ ಎಂದು ಅವನನ್ನು ಯಮಲೋಕದಿಂದ ಮತ್ತೆ ಭೂಲೋಕಕ್ಕೆ ಕಳುಹಿಸಲಾಯಿತಂತೆ. ಅದರ ಸಲುವಾಗಿ ಈ ಪಿತೃಪಕ್ಷ ಹುಟ್ಟಿಕೊಂಡದ್ದು ಎಂಬ ಒಂದು ಕತೆ ಇದೆ. ನದಿ ತೀರದಲ್ಲಿ ಈ ಕಾರ್ಯ ಮಾಡುವುದು ಮತ್ತಷ್ಟು ಶ್ರೇಷ್ಠವೆಂದು ನಾವು ಶ್ರೀರಂಗಪಟ್ಟಣಕ್ಕೆ ಹೋದುದು. ತಮ್ಮ ಹಿರಿಯರ ಮೇಲಿನ ಗೌರವದಿಂದ ಸಾಲು ಸಾಲಾಗಿ ಬಂದಿದ್ದ ಎಲ್ಲ ಜಾತಿಯ ಜನರನ್ನು ನೋಡಿ ಪರವಾಗಿಲ್ಲ, ನಮ್ಮ ಸಂಸ್ಕೃತಿ ಇನ್ನೂ ಉಸಿರಾಡುತ್ತಿದೆ ಎಂದು ಅನಿಸಿದ್ದು ಸುಳ್ಳಲ್ಲ. ಇಂತಹ ಅಪರಕರ್ಮಗಳನ್ನು ಮಾಡಿಸುವ ಸಲುವಾಗಿಯೇ ಇದ್ದ ವೈದಿಕರದು ಮತ್ತೊಂದು ತಂಡ. ನಿಮಗೆ ಬರೀ ಜಲತರ್ಪಣ ಸಾಕೋ ಪಿಂಡ ಪ್ರದಾನವೂ ಬೇಕೋ ಎಂದು ಅದಕ್ಕೆ ತಕ್ಕಂತೆ ವ್ಯವಸ್ಥೆಗಳನ್ನು ಮಾಡಿ, ಚಕಚಕನೆ ನಿಮ್ಮ ಕೆಲಸ ಮಾಡಿ ಮುಗಿಸುವ ಅಸಾಧ್ಯ ಚಟುವಟಿಕೆಯ ಗುಂಪು. ನಿಮ್ಮ ಜೇಬಿಗೆ ತಕ್ಕುದನ್ನು ನೀವು ಆಯ್ಕೆ ಮಾಡಿಕೊಳ್ಳಬಹುದು.

ಆಯಾ ಗುಂಪಿನ ವೈದಿಕರುಗಳಿಗೊಬ್ಬ ನಾಯಕ ಅಥವಾ ಹಿರಿಯ ಇರುತ್ತಾನೆ. ಆತನ ಕೆಳಗೆ ತಯಾರಾಗುತ್ತಿರುವ, ಅನುಭವ ಪಡೆಯುತ್ತಿರುವ ಹಲವಾರು ಮರಿ ವೈದಿಕರು. ಆಯಾ ಜಾತಿಗಳ ಸಂಪ್ರದಾಯಕ್ಕೆ ತಕ್ಕಂತೆ ಹೊಂದಿಕೊಂಡು ಅಥವಾ ಮಾರ್ಪಾಡು ಮಾಡಿಕೊಂಡು ಕಾರ್ಯ ಮಾಡಿಸುವ ಅವರ ಚಾಕಚಕ್ಯತೆಗೆ ಭಲೇ ಎನ್ನಲೇಬೇಕು. ಅವರಲ್ಲೂ ಅನೇಕರ ಕೈಯ್ಯಲ್ಲಿ ಮೊಬೈಲು! ಅದನ್ನು ನೋಡಿಕೊಂಡು ಮಂತ್ರ ಹೇಳುವ ಟ್ರೇನೀಗಳು! ಇನ್ನು ಆ ಭಗವಂತನ ಕೈಯಲ್ಲೂ ಆಪಲ್ಲೋ, ಒನ್ ಪ್ಲಸ್ಸೋ ಬರುವ ದಿನ ದೂರವಿಲ್ಲ ಎಂದು ಅಂದುಕೊಂಡು ಮನಸ್ಸಿನಲ್ಲೇ ನಕ್ಕೆ. ಸೊಂಟದಲ್ಲಿ ದುಡ್ಡಿಡುವ ಚರ್ಮದ ಪಟ್ಟಿ ಅಥವಾ ಬೆಲ್ಟ್ ಇದ್ದಲ್ಲಿ, ಅವನೇ ಆ ಗುಂಪಿನ ಹಿರಿಯ ಎಂಬುದು ಗೊತ್ತಾಗಿಬಿಡುತ್ತದೆ. ಸಂಸ್ಕೃತವನ್ನು ತಿರಸ್ಕರಿಸಿ, ಅದನ್ನು ಕಲಿಯದೆ ದೂರ ಮಾಡಿದುದರ ಪರಿಣಾಮ ಏನೆಂದರೆ, ವೈದಿಕರ ಬಾಯಲ್ಲಿ ಬರುವ ಮಂತ್ರವೋ, ಶ್ಲೋಕವೋ ತಿಳಿಯದೆ, ಅರ್ಥವಾಗದೆ ಕುರಿಗಳಂತೆ ತಲೆ ಅಲ್ಲಾಡಿಸುವುದು ಅನಿವಾರ್ಯವಾಗಿರುವುದು.

ಸರಿ, ವೈಕುಂಠ ಸಮಾರಾಧನೆಯಿಂದ ವಿಷಯ ಎಲ್ಲೆಲ್ಲಿಗೋ ಹೋಯಿತು. ನಮಸ್ಕಾರ.

ಮೈಸೂರಲ್ಲಿ ಪುಂಡರ ಅಟ್ಟಹಾಸದಿಂದ ಭಯಭೀತರಾಗಿರುವ ಹಿರಿಯ ನಾಗರಿಕರು!

ಜನ, ವಾಹನ ದಟ್ಟಣೆಯ ಪ್ರದೇಶದಲ್ಲೇ ನಕಲಿ ಅಪಘಾತದ ಮೂಲಕ ಸುಲಿಗೆ


● ಇತ್ತೀಚೆಗೆ ಕುವೆಂಪುನಗರದ ಶಾಂತಿಸಾಗರ್ ವೃತ್ತದಲ್ಲಿ ದಟ್ಟಗಳ್ಳಿ ನಿವಾಸಿಯಿಂದ 85 ಸಾವಿರ ವಸೂಲಿ ● ಪೊಲೀಸರ ಭಯವೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣ!

ಮೈಸೂರು, ಸೆ.20(ಆರ್‌ಕೆ)–ಅಪಘಾತದ ನೆಪದಲ್ಲಿ ವೃದ್ಧರನ್ನು ಬೆದರಿಸಿ, ಬ್ಲಾಕ್‌ಮೇಲ್ ಮಾಡಿ ಹಣ ಸುಲಿಗೆ ಮಾಡುವ ಪ್ರಕರಣಗಳು ಜನ ಸಂಚಾರವಿಲ್ಲದ ಸ್ಥಳಗಳಲ್ಲಿ ನಡೆಯುವುದು ಸರ್ವೇಸಾಮಾನ್ಯ. ಜನದಟ್ಟಣೆ ಇರುವ ಪ್ರದೇಶಗಳಲ್ಲೂ ಇಂತಹ ಸಾಹಸಕ್ಕೆ ದುಷ್ಕರ್ಮಿಗಳು ಮುಂದಾಗುತ್ತಾರೆ ಎಂದರೆ ಅದಕ್ಕೆ ಪೊಲೀಸರ ಭಯವಿಲ್ಲ ಎಂದರ್ಥ. ಹಾಗಾಗಿ ಅಪಘಾತದ ನೆಪದಲ್ಲಿ ವೃದ್ಧರನ್ನು ಬ್ಲಾಕ್‌ಮೇಲ್ ಮಾಡಿ ಹಣ ಸಲಿಗೆ ಪ್ರಕರಣಗಳು ಪದೇ ಪದೆ ನಡೆಯುತ್ತಿವೆ. ನಮ್ಮ ಪೊಲೀಸರಂತೂ ಈ ದುಷ್ಕರ್ಮಿಗಳ ಹೆಡೆಮುರಿ ಕಟ್ಟುವಲ್ಲಿ ಅಸಹಾಯಕರಾಗಿಬಿಟ್ಟರೇನೋ ಎಂಬಂತೆ ತೋರುತ್ತಿದೆ.

ಇತ್ತೀಚೆಗೆ ಪುಂಡರು ಜನಸಂದಣಿ ಹೆಚ್ಚಾಗಿರುವ, ಪೊಲೀಸ್ ಠಾಣೆಗೆ ಹತ್ತಿರವಿರುವ ಸ್ಥಳಗಳಲ್ಲೇ ದಾಂಧಲೆ, ಬೈಕ್ ವ್ಹೀಲಿಂಗ್ ಮಾಡುತ್ತಿದ್ದಾರೆ. ಸರಗಳ್ಳತನವಂತೂ ಮಹಿಳೆಯರನ್ನು ಭಯಭೀತರನ್ನಾಗಿ ಮಾಡಿದೆ, ಇದರ ಜೊತೆಗೆ ಇದೀಗ ಅಪಘಾತ ನೆಪದಲ್ಲಿ ವೃದ್ಧರ ಸುಲಿಗೆ ಸೇರ್ಪಡೆಯಾಗಿದೆ ವೃದ್ಧರು ವಾಹನ ಚಾಲನೆ ಮಾಡಲು ಹೆದರುವಂತಹ ಪರಿಸ್ಥಿತಿ ಮೈಸೂರು ನಗರದಲ್ಲಿ ತಲೆದೋರಿದೆ.

ಮೈಸೂರಿನ ಕುವೆಂಪುನಗರದ ಶಾಂತಿಸಾಗರ್ ಜಂಕ್ಷನ್‌ನಲ್ಲಿ ಸದಾಕಾಲ ಜನರ, ವಾಹನಗಳ ಸಂಚಾರ ಇದ್ದೇ ಇರುತ್ತದೆ. ಜಂಕ್ಷನ್ ಮಾತ್ರವಲ್ಲದೇ ಅಲ್ಲಿಂದ ದಟ್ಟಗಳ್ಳಿಗೆ ತೆರಳುವ ಮಾರ್ಗದಲ್ಲಿ ಸುಮಾರು ಅರ್ಧ ಕಿ.ಮೀ.ವರೆಗೂ ರಸ್ತೆಯ ಎರಡೂ ಬದಿಯಲ್ಲಿ ಅಂಗಡಿಗಳಿವೆ, ತಳ್ಳುಗಾಡಿಗಳಿವೆ. ಸದಾಕಾಲ ಜನಜಂಗುಳಿ ಇದ್ದೇ ಇರುತ್ತದೆ. ಅಲ್ಲಿಂದ ಕಿಲೋಮೀಟರ್ ಅಂತರದಲ್ಲೇ ಕುವೆಂಪುನಗರ ಪೊಲೀಸ್ ಠಾಣೆ ಇದೆ. ಈ ರಸ್ತೆಯಲ್ಲಿ ಸಿಸಿ ಕ್ಯಾಮಾರಗಳಿಗೂ ಕೊರತೆ ಇಲ್ಲ. ಆದರೂ ಈ ಪ್ರದೇಶದಲ್ಲಿ ದುಷ್ಕರ್ಮಿಗಳು ಅಟ್ಟಹಾಸ ಮೆರೆಯುವುದು ಸೋಜಿಗದ ವಿಷಯವೇ ಸರಿ.

ಆದದ್ದೇನು?: ಮೈಸೂರಿನ ದಟ್ಟಗಳ್ಳಿ ನಿವಾಸಿ, ಸುಮಾರು 70 ವರ್ಷದ ಕೆ.ಆರ್.ಲಕ್ಷ್ಮೀಶ್ ಎಂಬುವರು ಸೆ.18



ರಂದು ಸಂಜೆ 5.30ರ ಸುಮಾರಿನಲ್ಲಿ ಕಾರಿನಲ್ಲಿ ದಟ್ಟಗಳ್ಳಿ ಮತ್ತು ಶಾಂತಿಸಾಗರ್ ನಡುವೆ ತಮ್ಮ ಮನೆಗೆ ತೆರಳುತ್ತಿದ್ದಾಗ ತೀವ್ರ ವಾಹನ ದಟ್ಟಣೆಯಿದ್ದ ಕಾರಣ ಕಾರನ್ನು ಸ್ವಲ್ಪ ಸಮಯ ರಸ್ತೆ ಬದಿ ನಿಲ್ಲಿಸಿಕೊಂಡು ನಂತರ ನಿಧಾನವಾಗಿ ಚಲಿಸ ತೊಡಗಿದ್ದಾರೆ.

ಅವರು ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಹಿಂದಿನಿಂದ ಬೈಕ್‌ನಲ್ಲಿ ಬಂದ ಪುಂಡನೊಬ್ಬ ಕಾರ್‌ಗೆ ತನ್ನ ಬೈಕ್‌ನ್ನು ಅಡ್ಡ ನಿಲ್ಲಿಸಿ ಕಾರಿನ ಬಾಗಿಲು ತೆಗೆಯುವಂತೆ ದಬಾಯಿಸಿದ್ದಾನೆ. ಅಂಜುತ್ತಲೇ ಅವರು, ಕಾರಿನ ಡೋರ್ ತೆಗೆಯುತ್ತಿದ್ದಂತೆಯೇ ಆತ ನನ್ನ ಪಕ್ಕದ ಸೀಟ್‌ನಲ್ಲಿ ಕುಳಿತುಕೊಂಡು ಮನಸ್ಸೋ ಇಚ್ಛೆ ಬಾಯಿಗೆ ಬಂದಂತೆ ಬೈಯ್ಯುತ್ತಾ, ನಮ್ಮ ಬೈಕ್‌ಗೆ ಡಿಕ್ಕಿ ಹೊಡೆದು ನಿಲ್ಲಿಸದೇ ಬಂದಿದ್ದೀರಿ. ಬೈಕ್ ಹಿಂಬದಿ ಕುಳಿತಿದ್ದ ನನ್ನ ಸಹೋದರನ ಕಾಲಿಗೆ ತೀವ್ರ ಪೆಟ್ಟಾಗಿದ್ದು, ರಕ್ತಸ್ರಾವವಾಗುತ್ತಿದೆ ಎಂದು ಹೇಳಿ ನೀವೇನಾದರೂ ಅಲ್ಲಿಗೆ ಬಂದರೆ ಅಲ್ಲಿ ಜಮಾಯಿಸಿರುವ ಜನ ಆಸ್ಪತ್ರೆ ಖರ್ಚಿಗೆ 2 ರಿಂದ 3 ಲಕ್ಷ ರೂ. ಕೊಡುವಂತೆ ಒತ್ತಾಯಿಸುತ್ತಾರೆ. ಅಲ್ಲದೇ, ನಿಮ್ಮ ಮೇಲೆ ಹಲ್ಲೆಯನ್ನೂ ಮಾಡಬಹುದು ಎಂದು ಹೆದರಿಸಿದ್ದಾನೆ.

ಯಾವುದೇ ಅಪಘಾತ ಮಾಡದಿದ್ದರೂ ಆ ಪುಂಡನ ಬೆದರಿಕೆಗೆ ಬೆಚ್ಚಿದ ವೃದ್ಧರು, ನಾನು ಅಪಘಾತವನ್ನೇ ಮಾಡಿಲ್ಲ. ಒಂದು ವೇಳೆ ಹಾಗಾಗಿದ್ದರೆ ದಯಮಾಡಿ ಕ್ಷಮಿಸಿ ಎಂದು ಬೇಡಿಕೊಂಡಿದ್ದಾರೆ. ಆದರೆ, ಏರು ಧನಿಯಲ್ಲಿ ಅವಾಚ್ಯ ಶಬ್ಧಗಳಿಂದ ಬೈಯ್ಯಲಾರಂಭಿಸಿದ್ದಾನೆ. ಕೊನೆಗೆ 30 ಸಾವಿರ ರೂ.ಗಳನ್ನು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಕಳುಹಿಸುವಂತೆ ಒತ್ತಾಯಿಸಿದ್ದಾನೆ. ಅದರೆ ಆತ ನೀಡಿದ ಕ್ಯೂಆರ್ ಕೋಡ್ ಸರಿಯಾಗಿ ಕಾರ್ಯ ನಿರ್ವಹಿಸಲಿಲ್ಲ. ಆಗ ವೃದ್ಧರು ತಮ್ಮ ಬಳಿ 25 ಸಾವಿರ ರೂ. ನಗದು ಇದೆ ಅದನ್ನು ಕೊಡುತ್ತೇನೆ. ಆಸ್ಪತ್ರೆ ಖರ್ಚಿಗೆ ಬಳಸಿಕೊಳ್ಳಿ ಎಂದಿದ್ದಾರೆ. ಈ ವೇಳೆ ಕಾರಿನಿಂದ ಇಳಿದು ಮೊಬೈಲ್‌ನಲ್ಲಿ ಮಾತನಾಡುವಂತೆ ನಟಿಸಿ, ಮತ್ತೆ ಕಾರಿನಲ್ಲಿ ಬಂದು ಕುಳಿತು ಬೇರೊಂದು ಕ್ಯೂಆರ್ ಕೋಡ್ ತೋರಿಸಿ ಅದಕ್ಕೆ 30 ಸಾವಿರ ವರ್ಗಾವಣೆ ಮಾಡಿಸಿಕೊಂಡಿದ್ದಲ್ಲದೇ, ನನ್ನ ಸಹೋದರ ಮೇಲೇಳಲಾರದೆ ಒದ್ದಾಡುತ್ತಿದ್ದಾನೆ ಇನ್ನೂ 30 ಸಾವಿರ ರೂ. ಕೊಡುವಂತೆ ಡಿಮ್ಯಾಂಡ್ ಮಾಡಿದ್ದಾನೆ. ಆಗ ವೃದ್ಧರು ತಾವು ಫೋನ್ ಪೇ ಮೂಲಕ ಮತ್ತೇ 30 ಸಾವಿರ ರೂ. ವರ್ಗಾವಣೆ ಮಾಡಿದ್ದಾರೆ. ಅಷ್ಟಕ್ಕೇ ಬಿಡದ ದುಷ್ಕರ್ಮಿ, ವೃದ್ಧರ ಕೈಯ್ಯಲ್ಲಿದ್ದ ಇದ್ದ 25 ಸಾವಿರ ರೂ.ಗಳನ್ನು ಕಸಿದುಕೊಂಡಿದ್ದಾನೆ. ಒಟ್ಟಾರೆ ಈ ದುಷ್ಕರ್ಮಿ ವೃದ್ಧ ಲಕ್ಷೀಶ್ ಅವರಿಂದ ಒಟ್ಟು 85 ಸಾವಿರ ರೂ.ಗಳನ್ನು ಸುಲಿಗೆ ಮಾಡಿದ್ದಾನೆ.

ಈ ಆಘಾತದಿಂದ ಸುಧಾರಿಸಿಕೊಂಡ ಬಳಿಕ ಲಕ್ಷ್ಮೀಶ್ ಅವರು, ನಂತರ ತಮ್ಮ ಕಾರು ತಮಗೆ ತಿಳಿಯದೆಯೇ ಬೈಕ್‌ಗೆ ಡಿಕ್ಕಿ ಹೊಡೆದಿದೆಯೋ ಎಂದು ಯೋಚಿಸುತ್ತಾ ಕೆಳಗಿಳಿದು ಕಾರನ್ನು ಪರಿಶೀಲಿಸಿದಾಗ ಆಪಘಾತವಾಗಿರುವ ಯಾವ ಲಕ್ಷಣವೂ ಕಂಡುಬರಲಿಲ್ಲ. ಹೀಗಾಗಿ ತಮ್ಮನ್ನು ಸುಲಿಗೆ ಮಾಡಲಾಗಿದೆ ಎಂದು ಮನವರಿಕೆಯಾದ ಬಳಿಕ ಅವರು, ಕುವೆಂಪುನಗರ ಪೋಲಿಸ್ ಠಾಣೆಗೆ ತೆರಳಿ ಇನ್ಸ್‌ಪೆಕ್ಟರ್ ಯೋಗೇಶ್‌ರವರಿಗೆ ನಡೆದ ಘಟನೆಯನ್ನು ವಿವರಿಸಿದ್ದಾರೆ. ಅಲ್ಲದೆ ಮರುದಿನ ಲಿಖಿತ ದೂರು ನೀಡಿದ್ದಾರೆ.

ದುಷ್ಕರ್ಮಿಗಳು ಒಬ್ಬರೇ ಕಾರು ಚಾಲನೆ ಮಾಡಿಕೊಂಡು ಹೋಗುವ ವೃದ್ಧರನ್ನೇ ಟಾರ್ಗೆಟ್ ಮಾಡಿಕೊಂಡು ಅವರ ಕಾರನ್ನು ಅಡ್ಡಗಟ್ಟಿ ಅಪಘಾತ ಮಾಡಿ ನಿಲ್ಲಿಸದೇ ಹೋಗುತ್ತಿದ್ದೀರಿ ಎಂದು ಬೆದರಿಸಿ ಹಣ ಸುಲಿಗೆ ಮಾಡುತ್ತಿರುವ ಪ್ರಕರಣಗಳು ಮೈಸೂರು ನಗರದ ಜನದಟ್ಟಣೆ ಪ್ರದೇಶಗಳಲ್ಲೇ ಪದೇ ಪದೆ ನಡೆಯುತ್ತಿವೆ. ಪೊಲೀಸರಂತೂ ಇಂತಹ ಪ್ರಕರಣಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾದಂತೆ ಕಾಣುತ್ತಿಲ್ಲ. ಮೈಸೂರಿನ ಕುವೆಂಪುನಗರ, ಸರಸ್ವತಿಪುರಂ, ದಟ್ಟಗಳ್ಳಿ, ಜೆ.ಪಿ.ನಗರ ಭಾಗದಲ್ಲಿ ಹೆಚ್ಚಾಗಿ ಇಂತಹ ಸುಲಿಗೆಗಳು ನಡೆಯುತ್ತಿವೆ. ಆದರೂ, ಪೊಲೀಸರು ಆ ಭಾಗಗಳಲ್ಲಿ ಕಟ್ಟೆಚ್ಚರ ವಹಿಸದೇ ಇರುವುದು ದುಷ್ಕರ್ಮಿಗಳಿಗೆ ವರವಾಗಿ, ವೃದ್ಧರಿಗೆ ಶಾಪವಾಗಿ ಪರಿಣಮಿಸಿದೆ.

> ಕುವೆಂಪುನಗರ ಶಾಂತಿಸಾಗರ್ ಜಂಕ್ಷನ್, ದಟ್ಟಗಳ್ಳಿಗೆ ಹೋಗುವ ರಸ್ತೆ ಹಾಗೂ ಸುತ್ತ ಮುತ್ತಲಿನ ಜಂಕ್ಷನ್‌ಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಸಂಗ್ರಹಿಸಿ, ಅಲ್ಲಿ ಅಂದು ಸಂಚರಿಸಿರುವ ಬೈಕ್ ಸವಾರರನ್ನು ಪರಿಶೀಲಿಸುತ್ತಿದ್ದೇವೆ. ಸಾಮಾನ್ಯವಾಗಿ ಹಣ ಸುಲಿಗೆ ಮಾಡುವ ಯುವಕರ ಗ್ಯಾಂಗ್ ಒಬ್ಬಂಟಿಯಾಗಿ ಕಾರಿನಲ್ಲಿ ಓಡಾಡುವ ವೃದ್ಧರನ್ನು ಟಾರ್ಗೆಟ್ ಮಾಡಿಕೊಂಡಂತಿದೆ. ಈ ಪ್ರಕರಣವನ್ನು ಭೇದಿಸಿ ಆರೋಪಿಗಳನ್ನು ಶೀಘ್ರ ಬಂಧಿಸುತ್ತೇವೆ. ಈ ಹಿಂದೆ ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿದ್ದವರನ್ನು ಗಮನದಲ್ಲಿರಿಸಿಕೊಂಡು ಇತರೆ ಎಲ್ಲಾ ಆಯಾಮಗಳಲ್ಲೂ ನಾವು ತನಿಖೆ ನಡೆಸುತ್ತೇವೆ.
>
> - ಯೋಗೇಶ್, ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್

ಪ್ರತಾಪ್ ಸಿಂಹ, ಯತ್ನಾಳ್ ಟೆಂಟ್ ಟಾಕೀಸ್ ಇದ್ದಂತೆ

ಶಾಸಕ ತನ್ವೀರ್ ಸೇಠ್ ವ್ಯಂಗ್ಯ

ಮೈಸೂರು, ಸೆ.20(ವಿವಿಹೆಚ್)– ಪ್ರತಾಪ್ ಸಿಂಹ, ಬಸನಗೌಡ ಪಾಟೀಲ್ ಯತ್ನಾಳ್ ಅವರು ಟೆಂಟ್ ಟಾಕೀಸ್ ಇದ್ದಂತೆ. ಯಾವಾಗ, ಎಲ್ಲಿ ಬೇಕೋ ಅಲ್ಲಿಗೆ ಬಂದು ಪ್ರದರ್ಶನ ನೀಡಿ ಹೋಗುತ್ತಾರೆ. ಇಂತಹವರ ಮಾತಿಗೆ ನಾವು ಕಿವಿಗೊಡುವುದಿಲ್ಲ. ಜನರೂ ತಲೆಕೆಡಿಸಿಕೊಳ್ಳಬಾರದು ಎಂದು ಶಾಸಕ ತನ್ವೀರ್ ಸೇಠ್ ವ್ಯಂಗ್ಯವಾಡಿದರು

ನಗರದ ಕುದುರೆ ಉದ್ಯಾನವನದಲ್ಲಿ ಜೆಮಿನಿ ಸರ್ಕಸ್ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಸಚಿವನಾಗಿ ಕಾರ್ಯನಿರ್ವಹಿಸಿದಾಗಲೂ ಯಾರು ಅಪಸ್ವರ ಎತ್ತಲಿಲ್ಲ. ನಿಸಾರ್ ಅಹಮದ್ ಅವರು ದಸರಾ ಉದ್ಘಾಟನೆ ಮಾಡಿದಾಗಲೂ ಯಾರು ಮಾತನಾಡಲಿಲ್ಲ. ನಮ್ಮ ಮಾಜಿ ಸಂಸದರ ಪ್ರತಾಪ್ ಸಿಂಹ ಅಧಿಕಾರ ಇಲ್ಲದೇ ಬಹಳ ಬಿಡುವು ಮಾಡಿಕೊಂಡಿರುವುದರಿಂದ ಅವರಿಂದ ಇಷ್ಟೆಲ್ಲಾ ಅವಾಂತರಗಳಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ದಸರಾ ಉದ್ಘಾಟಕರಾಗಿ ಬೂಕರ್ ಪ್ರಶಸ್ತಿ ವಿಜೇತರಾದ ಬಾನು ಮುಷ್ತಾಕ್ ಅವರನ್ನು ರಾಜ್ಯ ಸರ್ಕಾರ ಆಯ್ಕೆ ಮಾಡಿರುವ ಸಂಬಂಧ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ನೀಡಿರುವ ತೀರ್ಪಿನ ವಿರುದ್ಧವಾಗಿ ಪ್ರಚೋದನಕಾರಿ ಹೇಳಿಕೆಗಳು ಬರುತ್ತಿವೆ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಅವರು, ತಾಯಿ ಚಾಮುಂಡೇಶ್ವರಿ ಪೂಜೆಯ ಮೂಲಕ ದಸರಾವನ್ನು ಪ್ರಾರಂಭ ಮಾಡಲಾಗುತ್ತದೆ. ಆದ್ದರಿಂದ ದಸರಾ ವಿಚಾರಕ್ಕೆ ಅಪಸ್ವರ ಎತ್ತುವುದು ಸರಿಯಲ್ಲ. ಆಯ್ಕೆ ವಿರುದ್ಧ ಮಾಡಬೇಕಾದ ಪ್ರಯತ್ನ ಮಾಡಾಯಿತು. ಸುಪ್ರೀಂ ಅಸ್ತು ಎಂದಾದ ಮೇಲೆ ಆ ತೀರ್ಪನ್ನು ಪ್ರಶ್ನಿಸುವ ಹಕ್ಕು ನಮಗಿಲ್ಲ. ತಮ್ಮ ಸ್ವಾರ್ಥಕ್ಕಾಗಿ, ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ದಸರಾ ಮಹೋತ್ಸವವನ್ನು ಆಯ್ಕೆ ಮಾಡಿಕೊಂಡಿರುವವರಿಗೆ ಉಳಿಗಾಲವಿಲ್ಲ ಎಂದು ಕಿಡಿಕಾರಿದರು.

ಚಾಮುಂಡೇಶ್ವರಿ ಮೂರ್ತಿಗೆ ಅಲ್ಪಸಂಖ್ಯಾತರು, ದಲಿತ ಮಹಿಳೆಯರು ಪುಷ್ಪಾರ್ಚನೆ ಮಾಡುವ ಹಾಗಿಲ್ಲ ಎಂಬ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿ, ಮೂರ್ಖರ ಮಾತಿಗೆ ನಾನು ಉತ್ತರ ಕೊಡುವುದಿಲ್ಲ. ಯತ್ನಾಳ್ ಅವರು ತಮ್ಮ ಅಸ್ತಿತ್ವ ಕಾಪಾಡಿಕೊಳ್ಳಲು ಇಂತಹ ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇಂತಹವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸುತ್ತೇನೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಚಾಮುಂಡೇಶ್ವರಿ ದೇವಸ್ಥಾನಕ್ಕೆ ಎಲೆಕ್ಟ್ರಿಕ್ ಬಗ್ಗಿ ದೇಣಿಗೆ ನೀಡಿದ ಸೈಕಲ್ ಪ್ಯೂರ್ ಅಗರಬತ್ತಿ

ನವರಾತ್ರಿ ಪ್ರಯುಕ್ತ ದುರ್ಗೇಶ್ವರಿ ನವರಾತ್ರಿ ಪ್ಯಾಕ್ ಬಿಡುಗಡೆ



ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ. ರೂಪಾ ಅವರಿಗೆ ಎಲೆಕ್ಟ್ರಿಕ್ ಬಗ್ಗಿ ವಾಹನದ ಕೀಲಿಗಳನ್ನು ಸೈಕಲ್ ಪ್ಯೂರ್ ಅಗರಬತ್ತಿ ಮ್ಯಾನೇಜಿಂಗ್ ಡೈರೆಕ್ಟರ್ ಅರ್ಜುನ್ ರಂಗಾ ಹಸ್ತಾಂತರಿಸಿದರು.

ಮೈಸೂರು,ಸೆ.20–ಭಾರತದ ಅತ್ಯಂತ ಪ್ರತಿಷ್ಠಿತ ಮತ್ತು ವಿಶ್ವಾಸಾರ್ಹ ಅಗರಬತ್ತಿ ತಯಾರಕ ಕಂಪನಿ ಆಗಿರುವ ಸೈಕಲ್ ಪ್ಯೂರ್ ಅಗರುಬತ್ತಿ ಸಂಸ್ಥೆಯು ಈ ದಸರಾ ಸಂದರ್ಭದಲ್ಲಿ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಎಲೆಕ್ಟ್ರಿಕ್ ಬಗ್ಗಿಯನ್ನು ದೇಣಿಗೆ ನೀಡಿದೆ.

ಇಂದು ನಡೆದ ಕಾರ್ಯಕ್ರಮದಲ್ಲಿ ಸಂಸ್ಥೆಯು ಚಾಮುಂಡೇಶ್ವರಿ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಶ್ರೀಮತಿ ಎಂ.ಜೆ.ರೂಪಾ ಅವರಿಗೆ ಎಲೆಕ್ಟ್ರಿಕ್ ಬಗ್ಗಿ ವಾಹನದ ಕೀಲಿಗಳನ್ನು ಸೈಕಲ್ ಪ್ಯೂರ್ ಅಗರುಬತ್ತಿ ಮ್ಯಾನೇಜಿಂಗ್ ಡೈರೆಕ್ಟರ್ ಅರ್ಜುನ್ ರಂಗಾ ಹಸ್ತಾಂತರಿಸಿದರು.

ಈ ಪರಿಸರ ಸ್ನೇಹಿ ವಾಹನವು ಹಿರಿಯ ನಾಗರಿಕರು ಮತ್ತು ವಿಕಲಚೇತನ ಭಕ್ತರಿಗೆ ಸೇವೆ ಸಲ್ಲಿಸಲಿದ್ದು, ದೇವಸ್ಥಾನದ ಆವರಣದಲ್ಲಿ ಸುಲಭವಾಗಿ ಅತ್ತಿತ್ತ ಓಡಾಡಲು ನೆರವಾಗುತ್ತದೆ. ಸಮಾಜಕ್ಕೆ ಒಳಿತು ಮಾಡುವ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯ ಪ್ರಯತ್ನದ ಭಾಗವಾಗಿ ಈ ದೇಣಿಗೆ ನೀಡಲಾಗಿದೆ.

ಇದೇ ವೇಳೆ ಸಂಸ್ಥೆಯು ದುರ್ಗೇಶ್ವರಿ ನವರಾತ್ರಿ ಪ್ಯಾಕ್ ಅನ್ನು ಬಿಡುಗಡೆ ಮಾಡಿದೆ. ಈ ಪ್ಯಾಕ್ ನಲ್ಲಿ ಸೂಕ್ಷ್ಮವಾಗಿ ಕೆತ್ತಲಾದ ದೇವಿಯ ಒಂಬತ್ತು ಪ್ರತಿಕೃತಿಗಳನ್ನು ನೀಡಲಾಗಿದ್ದು, ಪ್ರತಿಯೊಂದಕ್ಕೂ ಕಲರ್–ಕೋಡ್ ಕೋಲಂ ಸ್ಟ್ಯಾಂಡ್ (ಕುಶಲ ಕರ್ಮಿಗಳಿಂದ ರಚಿತ ಮರದ ಬಣ್ಣದ ಸ್ಟ್ಯಾಂಡ್) ಒದಗಿಸಲಾಗಿದೆ. ನವರಾತ್ರಿಯ ಪ್ರತಿ ದಿನದ ಬಣ್ಣಕ್ಕೆ ಹೊಂದಿಕೊಳ್ಳುವ ಅಗರಬತ್ತಿ ಪ್ಯಾಕ್‌ಗಳನ್ನೂ ನೀಡಲಾಗಿದೆ. ಈ ಸೆಟ್ ನೊಂದಿಗೆ ಗ್ರಾಫಿಕ್ ಪುಸ್ತಕ ಲಭ್ಯವಿದ್ದು, ಈ ಕೃತಿಯು ಪವಿತ್ರ ಶ್ಲೋಕಗಳನ್ನು ಒಳಗೊಂಡಿದೆ ಮತ್ತು ಜೊತೆಗೆ ಭಕ್ತಿಗೀತೆಗಳ ಯೂಟ್ಯೂಬ್ ಕ್ಯೂಆರ್ ಕೋಡ್ ಒದಗಿಸಲಾಗಿದೆ.

ಬಗ್ಗಿ ಹಸ್ತಾಂತರ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೀಲಿ ಹಸ್ತಾಂತರಿಸಿ ಮಾತನಾಡಿದ ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀ ಅರ್ಜುನ್ ರಂಗಾ ಅವರು, ಚಾಮುಂಡಿ ಬೆಟ್ಟ ಮೈಸೂರಿನ ಆಧ್ಯಾತ್ಮಿಕ ಕೇಂದ್ರವಾಗಿದೆ. ದಸರಾ ಮತ್ತು ನವರಾತ್ರಿ ಸಮೀಪಿಸುತ್ತಿರುವ ಈ ಸಂದರ್ಭದಲ್ಲಿ ದೇವಿಯ ಆಶೀರ್ವಾದ ಮತ್ತು ಶಾಂತಿ ಬಯಸಿ ಇಲ್ಲಿಗೆ ಬರುವ ಭಕ್ತರಿಗೆ ಸೇವೆ ಸಲ್ಲಿಸುವುದು ನಮಗೆ ದೊರೆತಿರುವ ಗೌರವ ಎಂದು ಭಾವಿಸುತ್ತೇವೆ. ಭಕ್ತಿ ಸಾರುವುದಕ್ಕೆ ವಯಸ್ಸು ಅಥವಾ ದೈಹಿಕ ಸಾಮರ್ಥ್ಯ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಎಲೆಕ್ಟ್ರಿಕ್ ಬಗ್ಗಿ ನೀಡಲಾಗಿದೆ ಎಂದು ಹೇಳಿದರು.

ದುರ್ಗೇಶ್ವರಿ ಪ್ಯಾಕ್ ಕುರಿತು ಮಾತನಾಡಿದ ಅವರು, ನವರಾತ್ರಿ ಕೇವಲ ಹಬ್ಬವಲ್ಲ, ಅದು ದೃಢತೆ, ಘನತೆ ಮತ್ತು ದೈವೀ ಶಕ್ತಿಯ ಸಂಭ್ರಮ. ಅದಕ್ಕೆ ಪೂರಕವಾಗಿ ನಾವು ದುರ್ಗೇಶ್ವರಿ ಪ್ಯಾಕ್ ಬಿಡುಗಡೆ ಮಾಡಿದ್ದೇವೆ. ಈ ಮೂಲಕ ನಾವು ಪ್ರತೀ ಮನೆಗೂ ಭಕ್ತಿಯ ಸುಗಂಧ ತರುತ್ತಿದ್ದೇವೆ. ದೇವಿಯ ಭಕ್ತಿಯಲ್ಲಿ ಕಳೆದು ಹೋಗಲು ಭಕ್ತರಿಗೆ ನೆರವಾಗುತ್ತಿದ್ದೇವೆ ಎಂದರು.

ಮೈಸೂರಿನ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಚಾಲನೆ

ಇತ್ತೀಚಿಗೆ ಪ್ರಜಾಪ್ರಭುತ್ವದ ಮೇಲೆ ಕೋಮುವಾದಿಗಳ ಸವಾರಿ; ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಆತಂಕ



ಮೈಸೂರಿನ ದಿವಾನ್ಸ್ ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಭವನದ 23 ಕೋಟಿ ವೆಚ್ಚದ ಮುಂದುವರೆದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಶನಿವಾರ ಚಾಲನೆ ನೀಡಿದರು.



ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುವ ವೇಳೆ ಹುತಾತ್ಮರಾದ ಯೋಧರು, ಅಂಗವೈಕಲ್ಯಕ್ಕೆ ತುತ್ತಾದ ಯೋಧರು ಮತ್ತು ಕುಟುಂಬಸ್ಥರಿಗೆ ಸಚಿವ ಡಾ.ಮಹದೇವಪ್ಪ ನಿವೇಶನಗಳ ಮಂಜೂರಾತಿ ಪತ್ರ ವಿತರಿಸಿದರು.

ಮೈಸೂರು, ಸೆ.20(ಬಿಎಲ್‌ಯು)– ನೆನೆಗುದಿಗೆ ಬಿದ್ದಿರುವ ಮೈಸೂರಿನ ದಿವಾನ್ಸ್ ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಭವನದ 23.83 ಕೋಟಿ ವೆಚ್ಚದ ಮುಂದುವರೆದ ಕಾಮಗಾರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಇಂದು ವಿದ್ಯುಕ್ತ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಡಾ.ಮಹದೇವಪ್ಪ, ಮುಡಾದ ಶೇಕಡ 18ರ ಅನುದಾನದಲ್ಲಿ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿ ಕೈಗೊಳ್ಳಲು ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿತ್ತು. ಅದರಂತೆ ಈಗ ಕಾಮಗಾರಿಗೆ ಚಾಲನೆ ದೊರೆತಿದೆ ಎಂದರು.

ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನವನ್ನು ಅಧ್ಯಯನ ಮಾಡಿದರೆ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಜಾಪ್ರಭುತ್ವದ ಮೇಲೆ ಕೋಮುವಾದಿಗಳ ಸವಾರಿ ನಡೆಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಶಿವಕುಮಾರ್ ಮಾತನಾಡಿ, ಸಂವಿಧಾನದ ಮೂಲಕ ಅಂಬೇಡ್ಕರ್ ಅವರು ದೇಶಕ್ಕೆ ನೀಡಿರುವ ಶಕ್ತಿ ಬಗ್ಗೆ ಇಡೀ ಪ್ರಪಂಚದಲ್ಲಿ ಚರ್ಚೆ ಆಗುತ್ತಿದೆ. ಹಾಗಾಗಿ ಯಾವ ಶಕ್ತಿಯಿಂದಲೂ ಸಂವಿಧಾನ ನಾಶ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಮೈಸೂರಿನ ಗಾಂಧಿನಗರದ ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ, ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಜಿಲ್ಲಾಧ್ಯಕ್ಷ ಅರುಣ್ ಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಎಂಡಿಎ ಆಯುಕ್ತ ರಕ್ಷಿತ್, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ ಈ ವೇಳೆ ಹಾಜರಿದ್ದರು.

ಹುತಾತ್ಮ ಯೋಧರ ಕುಟುಂಬಸ್ಥರಿಗೆ ನಿವೇಶನಗಳ ಮಂಜೂರಾತಿ ಪತ್ರ

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುವ ವೇಳೆ ಹುತಾತ್ಮರಾದ ಕುಟುಂಬಸ್ಥರಿಗೆ ಮತ್ತು ಅಂಗವೈಕಲ್ಯಕ್ಕೆ ತುತ್ತಾದ ನಿವೃತ್ತ ಯೋಧರಿಗೆ ಹಾಗೂ ಇಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಮಂಜೂರಾತಿ ಪತ್ರ ವಿತರಿಸಿದರು.

ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಚಾಲನೆ ನೀಡಿದ ನಂತರ ಡಾ.ಮಹದೇವಪ್ಪ ಅವರು ಯೋಧರಿಗೆ ನಿವೇಶನ ಮಂಜೂರಾತಿ ಪತ್ರ ನೀಡಿದರು. ಸುಬೇದಾರ್– ಸುಬ್ರಹ್ಮಣಿ ಪಿ.ಬಿ., ನಾಯ್ಕ್–ರಾಧಾಕೃಷ್ಣ ಕೆ.ಎಸ್., ಆರ್ಡಿನರಿ ನಾಯ್ಕ್ ಸುಬೇದಾರ್– ದೇವರಾಜು ಎಸ್.ಪಿ, ಭಾರತೀಯ ಭೂ ಸೇನೆ ಕ್ಯಾಪ್ಟನ್– ಎಂ.ವಿ.ಪ್ರಾಂಜಲ್, ನಾಯ್ಕ್–ಕಿರಣ್ ಕುಮಾರ್ ಬಿ.ಎಸ್., ಹಮಲ್ದಾರ್ –ರಮೇಶ್ ಬಿ, ಸಿ.ಟಿ.ಜಿ.ಡಿ– ಗುರು ಹೆಚ್ ಅವರಿಗೆ ನಿವೇಶನಗಳ ಮಂಜೂರಾತಿ ಪತ್ರ ನೀಡಲಾಯಿತು.

ಅಪೊಲೋ ಬಿಜಿಎಸ್ ಆಸ್ಪತ್ರೆಯಿಂದ ತುರ್ತು ಪರಿಸ್ಥಿತಿ ನಿರ್ವಹಣೆಯ ಅಣಕು ಪ್ರದರ್ಶನ



ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆ ತಂಡವು ತುರ್ತು ಪರಿಸ್ಥಿತಿ ನಿರ್ವಹಣೆ ಸಂಬಂಧ ಅಣಕು ಪ್ರದರ್ಶನ ನೀಡಿದರು.

ಮೈಸೂರು, ಸೆ. 20– ಮುಂಬರುವ ದಸರಾ ಉತ್ಸವದ ಸಂದರ್ಭದಲ್ಲಿ ಸಂಭಾವ್ಯ ಕಾಲ್ತುಳಿತ ಹಾಗೂ ಇತರೆ ಸಂಬಂಧಿತ ಘಟನೆಗಳು ಸೇರಿದಂತೆ ಯಾವುದೇ ರೀತಿಯ ವೈದ್ಯಕೀಯ ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ಮಾಡಿಕೊಂಡಿರುವ ಸಿದ್ಧತೆಯನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ ಮೈಸೂರಿನ ಅಪೊಲೋ ಬಿಜಿಎಸ್ ಆಸ್ಪತ್ರೆ ತಂಡವು ಇಂದು ಅಣಕು ಪ್ರದರ್ಶನವನ್ನು ಪ್ರದರ್ಶಿಸಿದರು.

ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ (ಎಡಿಸಿ) ಡಾ.ಪಿ.ಶಿವರಾಜು ಅವರ ಮೇಲ್ವಿಚಾರಣೆಯಲ್ಲಿ ಜಿಲ್ಲಾಧಿಕಾರಿ ಕಚೇರಿಯ ಸುಧೀರ್ ಮತ್ತು ಮೈಸೂರಿನ ಜಿಲ್ಲಾ ಆರ್‌ಸಿಎಚ್‌ಓ ಅಧಿಕಾರಿ ಡಾ. ಮೊಹಮ್ಮದ್ ಸಿರಾಜ್ ಅಧಿಕೃತ ವೀಕ್ಷಕರಾಗಿ ಭಾಗವಹಿಸಿದ್ದರು.

ಆಸ್ಪತ್ರೆಯ ಸಿಬ್ಬಂದಿ, ಆಂಬುಲೆನ್ಸ್ ಸೇವೆಗಳು, ವೈದ್ಯರು, ದಾದಿಯರು ಮತ್ತು ಅರೆವೈದ್ಯರ ನಡುವಿನ ತ್ವರಿತ ಪ್ರತಿಕ್ರಿಯೆ, ಚಿಕಿತ್ಸೆಯ ನಿರ್ಧಾರ, ಸೂಕ್ತ ವ್ಯವಸ್ಥೆಗಳು ಮತ್ತು ಸಮನ್ವಯವನ್ನು ಮೌಲ್ಯಮಾಪನ ಮಾಡಲು ಈ ಪ್ರದರ್ಶನವನ್ನು ನಿಜ ಜೀವನದ ತುರ್ತು ಸನ್ನಿವೇಶಗಳಂತೆ ಸೃಷ್ಟಿಸಿ ಅನುಕರಿಸಲಾಯಿತು. ಮೈಸೂರಿನಲ್ಲಿ ದಸರಾ ಆಚರಣೆಯು ದೇಶ ವಿದೇಶದ ಸಾವಿರಾರು ಜನರನ್ನು ಆಕರ್ಷಿಸುತ್ತದೆ. ತುರ್ತು ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಪೂರ್ವಭಾವಿ ಸಿದ್ಧತೆಯು ನಿರ್ಣಾಯಕ ಪಾತ್ರ ವಹಿಸುತ್ತದೆ. ಅದರಂತೆ ಈ ಪೂರ್ವಭಾವಿ ಪ್ರದರ್ಶನದ ಮೂಲಕ, ಅಪೊಲೋ ಬಿಜಿಎಸ್ ಆಸ್ಪತ್ರೆ ಯಾವುದೇ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ತ್ವರಿತ, ತಜ್ಞ ವೈದ್ಯಕೀಯ ನೆರವನ್ನು ಒದಗಿಸುವ ಸಾಮರ್ಥ್ಯದ ಬಗ್ಗೆ ಸಾರ್ವಜನಿಕರಲ್ಲಿ ಭರವಸೆ ಮೂಡಿಸಿದೆ ಎಂದು ಎಡಿಸಿ ಡಾ.ಶಿವರಾಜು ಹೇಳಿದರು.

ಇಂದು ಮತ್ತೆ ಭಾರತ–ಪಾಕ್ ಹಣಾಹಣಿ



ಮೈಸೂರು, ಸೆ.20(ವಿವಿಹೆಚ್)– ಈ ಸಾಲಿನ ಏಷ್ಯಾಕಪ್ ಪಂದ್ಯಾವಳಿಯಲ್ಲಿ ನಾಳೆ (ಸೆ.21, ಭಾನುವಾರ) ಭಾರತ–ಪಾಕ್ ಮತ್ತೆ ಮುಖಾಮುಖಿಯಾಗುತ್ತಿವೆ. ಕಳೆದ ಭಾನುವಾರ ಭಾರತ, ಪಾಕಿಸ್ತಾನವನ್ನು ಬಗ್ಗು ಬಡಿದಿತ್ತು.

ಕಳೆದ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ನಾಯಕ ಸೂರ್ಯಕುಮಾರ್ ಯಾದವ್ 47 ರನ್ ಸಿಡಿಸಿ ತಂಡ ಗೆಲ್ಲಲು ಸಹಕಾರಿಯಾಗಿದ್ದರು. ಇತ್ತಂಡಗಳು ಪಂದ್ಯ ಮುಗಿದ ಬಳಿಕ ಕೈಕುಲುಕದೆ (ಹ್ಯಾಂಡ್‌ಶೇಕ್) ಹೋದದ್ದು, ಜೊತೆಗೆ ಅಂದಿನ ಪಂದ್ಯವನ್ನು ಭಾರತ, ಪಹಲ್ಗಾಮ್ ಹುತಾತ್ಮರಿಗೆ ಅರ್ಪಿಸಿದ್ದು ಪಾಕ್‌ಗೆ ಇರಿಸು–ಮುರಿಸು ಉಂಟುಮಾಡಿತ್ತು.

ಈ ಘಟನೆ ಸೂಪರ್ 4 ಪಂದ್ಯಕ್ಕೂ ಮುನ್ನ ಉಭಯ ತಂಡಗಳ ನಡುವಿನ ಹಣಾಹಣಿಯ ಕುತೂಹಲವನ್ನು ಮತ್ತಷ್ಟು ಹೆಚ್ಚಿಸಿದೆ. ನಾಳಿನ ಪಂದ್ಯಕ್ಕಾಗಿ ಇಡೀ ವಿಶ್ವವೇ ಕಾತುರದಿಂದಿದೆ ಐಸಿಸಿ ಟೂರ್ನಿಯಲ್ಲಿ ಪಾಕ್ ಮೇಲಿನ ತನ್ನ ಪ್ರಾಬಲ್ಯವನ್ನು ಮುಂದುವರಿಸಲು ಭಾರತ ಸನ್ನದ್ಧವಾಗಿದ್ದರೆ, ಲೀಗ್ ಪಂದ್ಯದ ಸೋಲಿಗೆ ಸೇಡು ತೀರಿಸಿಕೊಳ್ಳುವತ್ತ ಪಾಕ್ ತಯಾರಿ ನಡೆಸಿದೆ.

ಗುಂಪು ಹಂತದಲ್ಲಿ ಆಡಿದ ಎಲ್ಲಾ ಮೂರು ಪಂದ್ಯಗಳನ್ನು ಗೆದ್ದಿರುವ ಟೀಂ ಇಂಡಿಯಾ ಈಗ ಸೂಪರ್ 4 ಸುತ್ತಿನಲ್ಲಿ ಅಗ್ರ ಎರಡರಲ್ಲಿ ಸ್ಥಾನ ಗಿಟ್ಟಿಸಿಕೊಳ್ಳಲು ಭರ್ಜರಿ ತಯಾರಿ ನಡೆಸಿದೆ. ಈ ಸುತ್ತಿನಲ್ಲಿ ಅಗ್ರ ಎರಡು ಸ್ಥಾನ ಪಡೆಯುವ ತಂಡಗಳ ನಡುವೆ ಪ್ರಶಸ್ತಿ ಪಂದ್ಯ ನಡೆಯಲಿದೆ. ಒಂದು ವೇಳೆ ಭಾರತ ತಂಡದೊಂದಿಗೆ ಪಾಕಿಸ್ತಾನ ಅಗ್ರ ಎರಡರಲ್ಲಿ ಕಾಣಿಸಿಕೊಂಡಲ್ಲಿ ಇತ್ತಂಡಗಳು ಪ್ರಶಸ್ತಿಗಾಗಿ ಟೂರ್ನಿಯಲ್ಲಿ ಮೂರನೇ ಬಾರಿಗೆ ಎದುರಾಗಲಿವೆ.

ಭಾರತ–ಪಾಕ್ ಪಂದ್ಯಕ್ಕೆ ರೆಫ್ರಿ ನೇಮಕ: ಸೆ.21 (ಭಾನುವಾರ) ರಂದು ಏಷ್ಯಾಕಪ್ ಸೂಪರ್ 4 ಹಂತದಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ನಿರ್ಣಾಯಕ ಪಂದ್ಯಕ್ಕೆ ಆಂಡಿ ಪೈಕ್ರಾಫ್ಟ್ ರೆಫರಿಯಾಗಿ ಆಯ್ಕೆಯಾಗಿದ್ದಾರೆ. ಹ್ಯಾಂಡ್‌ಶೇಕ್ ವಿವಾದದ ನಂತರ ಇವರ ಆಯ್ಕೆ ವಿವಾದಕ್ಕೆ ಕಾರಣವಾಗಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿಯ ಆಕ್ಷೇಪಣೆಗಳ ನಡುವೆಯೂ ಪೈಕ್ರಾಫ್ಟ್ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪಂದ್ಯದಲ್ಲಿಯೂ ಇತ್ತಂಡಗಳ ಆಟಗಾರರು ಹ್ಯಾಂಡ್‌ಶೇಕ್ ಮಾಡುವರೇ ಎಂಬುದು ಎಲ್ಲರ ಕುತೂಹಲಕ್ಕೆ ಕಾರಣವಾಗಿದೆ.

ಭಾರತ ಮತ್ತು ಪಾಕಿಸ್ತಾನ ನಡುವಣ ಪಂದ್ಯ, ಭಾನುವಾರ ರಾತ್ರಿ 8 ಗಂಟೆಗೆ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿದೆ. ಲೈವ್ ಸ್ಟ್ರೀಮಿಂಗ್ ಸೋನಿ ಲೈವ್‌ನಲ್ಲಿ ನೋಡಬಹುದಾಗಿದೆ.

ಬಾಂಗ್ಲಾಗೆ ಜಯ

ಏಷ್ಯಾಕಪ್–2025 ಪಂದ್ಯಾವಳಿಯ ಸೂಪರ್–4 ಹಂತದ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ ಸೈಫ್ ಹಸನ್ ಹಾಗೂ ತೌಹಿದ್ ಹೃದೋಯ್ ಅವರ ಆಕರ್ಷಕ ಅರ್ಧಶತಕದ ನೆರವಿನಿಂದ ಶ್ರೀಲಂಕಾ ತಂಡವನ್ನು 4 ವಿಕೆಟ್‌ಗಳಿಂದ ಮಣಿಸಿತು. ಆ ಮೂಲಕ ಟೂರ್ನಿಯಲಿ ಶ್ರೀಲಂಕಾದ ಅಜೇಯ ಓಟಕ್ಕೆ ಬ್ರೇಕ್ ಹಾಕಿದೆ.

ಇಲ್ಲಿನ ದುಬೈ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಶ್ರೀಲಂಕಾ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 168 ರನ್ ಕಲೆಹಾಕಿತು. ಈ ಮೊತ್ತ ಬೆನ್ನತ್ತಿದ ಬಾಂಗ್ಲಾದೇಶ 19.5 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿ 4 ವಿಕೆಟ್‌ಗಳಿಂದ ಗೆದ್ದು ಬೀಗಿತು.

ಮಕ್ಕಳ ಸಹಾಯವಾಣಿ ಸಂಖ್ಯೆ 1098 ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಬರೆಸಲು ಸಿಎಸ್ ಸೂಚನೆ



ಬೆಂಗಳೂರು, ಸೆ.20– ರಾಜ್ಯದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ / ಸೇವಾ ಸಂಸ್ಥೆಗಳ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಕಡ್ಡಾಯವಾಗಿ ಬರೆಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ.

ಮಕ್ಕಳ ಹಕ್ಕುಗಳ ರಕ್ಷಣೆ ಇಂದಿನ ತುರ್ತು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅನುಷ್ಠಾನಗೊಂಡಿರುವ ಮಿಷನ್ ವಾತ್ಸಲ್ಯ ಯೋಜನೆಯು ಮಕ್ಕಳ ಅಭಿವೃದ್ಧಿ ಮತ್ತು ರಕ್ಷಣೆಯ ದೃಷ್ಟಿಯ ಮಾರ್ಗವಾಗಿದೆ. ಸಂಕಷ್ಟ ಹಾಗೂ ಸವಾಲಿನಲ್ಲಿರುವ ಮಕ್ಕಳ ಹಿತರಕ್ಷಣೆಗೆ ಹೆಚ್ಚು ಒತ್ತು ನೀಡುತ್ತಿದೆ. ಇಂತಹ ಮಕ್ಕಳ ಗುರುತಿಸುವಿಕೆ, ಸಂಕಷ್ಟ ಸ್ಥಿತಿಯಲ್ಲಿ ಮಾಹಿತಿ ಹಂಚಿಕೊಳ್ಳಲು, ಪುನರ್ ವಸತಿ ಸೇವೆ ಕಲ್ಪಿಸುವಲ್ಲಿ ಮಕ್ಕಳ ಸಹಾಯವಾಣಿ 1098 ಮಹತ್ವದ ಪಾತ್ರ ವಹಿಸುತ್ತದೆ.

ಈ ಸಂಖ್ಯೆಯನ್ನು ವ್ಯಾಪಕವಾಗಿ ಪ್ರಚಾರ ಮಾಡಿದಲ್ಲಿ ಬಾಲ್ಯವಿವಾಹ, ಬಾಲಕಾರ್ಮಿಕತೆ ಸಂಕಷ್ಟದಲ್ಲಿನ ಮಕ್ಕಳ ರಕ್ಷಣೆ ಸೇರಿದಂತೆ ವಿವಿಧ ರೀತಿಯ ಮಕ್ಕಳ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಲು ಸಾಧ್ಯವಾಗಲಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ಶೈಕ್ಷಣಿಕ ಸಂಸ್ಥೆಗಳು, ಖಾಸಗಿ ಸೇವಾ ಸಂಸ್ಥೆಗಳು ಸೇರಿದಂತೆ ಎಲ್ಲಾ ಕಟ್ಟಡಗಳ ಮೇಲೆ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ಕಡ್ಡಾಯವಾಗಿ ಶಾಶ್ವತ ಫಲಕದಲ್ಲಿ ಪ್ರದರ್ಶಿಸಲು ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದ್ದಾರೆ.

ಈಗಾಗಲೇ ಕೆಲವು ಇಲಾಖೆಗಳು ಈ ಕುರಿತು ಕ್ರಮ ವಹಿಸಿವೆ. ಕೆಲವು ಇಲಾಖೆಗಳಲ್ಲಿ ಈ ಬಗ್ಗೆ ನಿರ್ದೇಶನವಿಲ್ಲ ಎಂಬ ಗೊಂದಲಗಳಿಂದ ಶಾಶ್ವತ ಫಲಕಗಳಲ್ಲಿ ಪ್ರದರ್ಶಿಸದೇ ಇರುವುದು ತಿಳಿದು ಬಂದಿದ್ದು, ಮಕ್ಕಳ ಸಹಾಯವಾಣಿ ಸಂಖ್ಯೆಯನ್ನು ಶಾಶ್ವತ ಫಲಕದಲ್ಲಿ ಪ್ರದರ್ಶಿಸದೆ ಇರುವ ಇಲಾಖೆಗಳು ಯಾವುದೇ ಗೊಂದಲಗಳಿಗೆ ಆಸ್ಪದ ಕೊಡದೇ ತಕ್ಷಣ ಕ್ರಮಕೈಗೊಂಡು ಮಕ್ಕಳ ಸಹಾಯವಾಣಿ ಸಂಖ್ಯೆ 1098 ಅನ್ನು ತಮ್ಮ ಇಲಾಖೆಯ ಶಾಶ್ವತ ಫಲಕದಲ್ಲಿ ಪ್ರದರ್ಶಿಸುವಂತೆ ಮುಖ್ಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಮೈಸೂರಿನ ಡಿಆರ್‌ಎಂ ಆಸ್ಪತ್ರೆಯಲ್ಲಿ ಯಶಸ್ವಿ ಥೋರಾಕೋಸ್ಕೋಪಿಕ್ ಲೋಬೆಕ್ಟಮಿ ಶಸ್ತ್ರಚಿಕಿತ್ಸೆ

ಮಕ್ಕಳ ಶ್ವಾಸಕೋಶ ಸಮಸ್ಯೆಗೆ ಮೈಸೂರಲ್ಲೇ ಪ್ರಥಮ ಯಶಸ್ವಿ ಪ್ರಯತ್ನ ಹೆಗ್ಗಳಿಕೆ



ಮೈಸೂರಿನ ಒಂಟಿಕೊಪ್ಪಲಿನ ಡಿಆರ್‌ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವೈದ್ಯರ ತಂಡ.

ಮೈಸೂರು,ಸೆ.20–ಅಪರೂಪದಲ್ಲಿ ಅಪರೂಪವಾದ ಶಿಶು ಶ್ವಾಸಕೋಶ ಗೆಡ್ಡೆ ಸಮಸ್ಯೆಗೆ ಇದೇ ಮೊದಲ ಬಾರಿಗೆ ಮೈಸೂರಿನ ಡಿಆರ್‌ಎಂ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಥೊರಕೋಸ್ಕೋಪಿಕ್ ಲೋಬೆಕ್ಟಮಿ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ. ಆ ಮೂಲಕ ಬೇರೆಡೆ ಗರ್ಭಪಾತ ಮಾಡಿಸಿಕೊಳ್ಳಲು ಮುಂದಾಗಿದ್ದ ದಂಪತಿಗೆ ಮುದ್ದಾದ ಹೆಣ್ಣು ಮಗುವನ್ನು ಪಡೆದುಕೊಳ್ಳುವ ಭಾಗ್ಯವನ್ನು ಡಿಆರ್‌ಎಂ ವೈದ್ಯರ ತಂಡ ಕಲ್ಪಿಸಿದೆ.

ಗರ್ಭಧಾರಣೆಯ 5ನೇ ತಿಂಗಳಲ್ಲಿ, ಶಿಶುವಿನ ಬಲ ಕೆಳಗಿನ ಶ್ವಾಸಕೋಶದಲ್ಲಿ ವಿಶೇಷ ಗಡ್ಡೆ ಕಾಂಜೆನಿಟಲ್ ಸಿಸ್ಟಿಕ್ ಅಡಿನೋಮ್ಯಾಟಾಯ್ಡ್ ಮ್ಯಾಲ್ಫಾರ್ಮೇಶನ್ ಮತ್ತು ಸೀಕ್ವೆಸ್ಟ್ರೇಷನ್ ಪತ್ತೆಯಾಗಿತ್ತು. ದ್ವಿತೀಯ ಅಭಿಪ್ರಾಯ ಪಡೆಯುವ ಸಲುವಾಗಿ ಪೋಷಕರು ಡಿಆರ್‌ಎಂಗೆ ಬಂದಾಗ ಶಿಶುವಿನ ಪ್ರಗ್ನೋಸಿಸ್ ಬಗ್ಗೆ ವೈದ್ಯರು ತಿಳಿಸಿ, ಜಾಗೃತಿ ವಹಿಸಿದರೆ ಗರ್ಭವನ್ನು ಉಳಿಸಿಕೊಂಡು ಮಗು ಜನನವಾದ ನಂತರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿದೆ ಎಂದು ಮನದಟ್ಟು ಮಾಡಿದ್ದರು. ಅದಕ್ಕೆ ಒಪ್ಪಿದ ದಂಪತಿ ವೈದ್ಯರ ಸಲಹೆಯಂತೆ ನಿಗದಿತ ಅವಧಿವರೆಗೂ ಗರ್ಭವನ್ನು ಮುಂದುವರಿಸಿದರು.

ಅಂತೆಯೇ ಡಿಆರ್‌ಎಂ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಬಿಂದು ಬಾಲಸುಬ್ರಹ್ಮಣಿಯನ್ ಹಾಗೂ ಮಕ್ಕಳ ತಜ್ಞ ಡಾ.ಶರತ್ ಕೀರ್ತಿ ಅವರ ಮಾರ್ಗದರ್ಶನದಲ್ಲಿ ಶಿಶು ಸುರಕ್ಷಿತವಾಗಿ ಜನ್ಮ ತಾಳಿತು. ನವಜಾತ ಶಿಶುವಿಗೆ ಯಾವುದೇ ಉಸಿರಾಟ ತೊಂದರೆ ಆಗದೆ, ಹಲವು ತಿಂಗಳುಗಳ ಕಾಲ ಶ್ವಾಸಕೋಶದ ಸೋಂಕು ಕಾಣಿಸಿಕೊಂಡಿರಲಿಲ್ಲ. ಆರು ತಿಂಗಳಾದ ಮೇಲೆ ಸಿಟಿ ಸ್ಕ್ಯಾನ್‌ನಲ್ಲಿ ಗೆಡ್ಡೆ ದೃಢಪಟ್ಟಿದ್ದು, ಶಸ್ತ್ರಚಿಕಿತ್ಸೆಗೆ ಯೋಜಿಸಲಾಯಿತು. ಮಗುವಿಗೆ ಬಲಭಾಗದ ಥೊರಕೋಸ್ಕೋಪಿಕ್ ಲೋವರ್ ಲೋಬೆಕ್ಟಮಿಗೆ ಅತಿ ಸೂಕ್ಷ್ಮ, ಕೀಹೋಲ್ ವಿಧಾನದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಕ್ಕಳ ಶಸ್ತ್ರಚಿಕಿತ್ಸಾ ತಜ್ಞ ಡಾ.ಎಸ್.ಆರ್. ಅವಿನಾಶ್, ಡಾ.ಕೆ.ಎಸ್.ಕುಮಾರ್ ನೇತೃತ್ವದ ಪರಿಣಿತ ತಂಡ ಯಶಸ್ವಿಯಾಗಿ ನೆರವೇರಿಸಿದೆ.

ಸಾಮಾನ್ಯವಾಗಿ ಇಂತಹ ಪ್ರಕರಣಗಳಲ್ಲಿ ದೊಡ್ಡದಾಗಿ ಕಟ್ ಮಾಡಿ, ಓಪನ್ ಥೊರಕೋಟಮಿ ಮೂಲಕ ನೆರವೇರಿಸಲಾಗುತ್ತದೆ. ಆದರೆ, ಈ ಉನ್ನತ ಮಟ್ಟದ ಶಸ್ತ್ರಚಿಕಿತ್ಸೆಯನ್ನು ಥೊರಕೋಸ್ಕೋಪಿಕ್ ವಿಧಾನದಲ್ಲಿ ನಡೆಸಿದ್ದರಿಂದ ಶಸ್ತ್ರ ಚಿಕಿತ್ಸೆ ಸುಖಾಂತ್ಯವಾಯಿತು. ಅಲ್ಲದೇ ಮಗು ಬೇಗ ಚೇತರಿಸಿಕೊಳ್ಳಲು ಸಾಧ್ಯವಾಯಿತು. ಡಾ. ಸಂತೋಷ್ ಜಿ.ರಾವ್ ಮತ್ತು ಡಾ. ರಜತ್ ಅವರು ಅನಸ್ಥೀಷಿಯಾವನ್ನು ಅತ್ಯಂತ ವ್ಯವಸ್ಥಿತವಾಗಿ ನಿರ್ವಹಿಸಿದ್ದರು. ಪತ್ರಿಕಾಗೋಷ್ಠಿಯಲ್ಲಿ ಡಾ.ಎಸ್.ಆರ್.ಅವಿನಾಶ್ ಈ ವಿಶೇಷ ಶಸ್ತ್ರಚಿಕಿತ್ಸಾ ವಿವರ ನೀಡಿದರು. ಅರವಳಿಕೆ ತಜ್ಞರಾದ ಡಾ.ರಜತ್, ಡಾ.ಸಂತೋಷ್‌ಜಿರಾವ್, ಅರವಳಿಕೆ ಮತ್ತು ತುರ್ತು ನಿಗಾ ಘಟಕದ ಮುಖ್ಯಸ್ಥ ಡಾ.ಎಂ.ಒ.ಸಂತೋಷ್, ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಬಿ.ಎಚ್. ಮಂಜುನಾಥ್, ಡಿ.ಟಿ. ಪ್ರಕಾಶ್, ಆಡಳಿತ ವರ್ಗದ ಬಿ.ಎ.ಸುಹಾಸ್, ಎಸ್.ಎಸ್. ಚಿದು ಇತರರು ಉಪಸ್ಥಿತರಿದ್ದರು.

ಸಹಾಯ ಧನಕ್ಕಾಗಿ ಅರ್ಜಿ ಆಹ್ವಾನ


ಮೈಸೂರು,ಸೆ.20– ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರು ಸ್ವಯಂ ಉದ್ಯೋಗ ಕೈಗೊಳ್ಳಲು ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ನೇರವಾಗಿ ಸಾಲ– ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅಕ್ಟೋಬರ್ 31 ರೊಳಗೆ ksbdb.karnataka.gov.in 3 ಅರ್ಜಿ ಸಲ್ಲಿಸಬಹುದಾಗಿದೆ. ಹಲವು ವೃತ್ತಿಗಳಾದ ಹಸು ಸಾಕಾಣಿಕೆ, ಗುಡಿ–ಕೈಗಾರಿಕೆ, ಸಣ್ಣ ಕೈಗಾರಿಕೆ, ಹೋಟೆಲ್ ಉದ್ಯಮ, ಟ್ಯಾಕ್ಸಿ ಇತ್ಯಾದಿ ವ್ಯಾಪಾರ ವಹಿವಾಟುಗಳನ್ನು ಕೈಗೊಳ್ಳಲು ಕನಿಷ್ಠ ರೂ.1.00 ಲಕ್ಷ ಹಾಗೂ ಗರಿಷ್ಠ ರೂ.200 ಲಕ್ಷಗಳ ವರೆಗೆ ಆರ್ಥಿಕವಾಗಿ ನೆರವು ಒದಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ದೂ. ಸಂ: 8861646939 ಸಂಪರ್ಕಿಸಬಹುದು.

ದೇಶ – ವಿದೇಶ

ಜಮ್ಮು–ಕಾಶ್ಮೀರದಲ್ಲಿ ಉಗ್ರರೊಂದಿಗೆ ಗುಂಡಿನ ಚಕಮಕಿ; ಯೋಧ ಹುತಾತ್ಮ


ಜಮ್ಮು: ಉಧಂಪುರ ಜಿಲ್ಲೆಯ ದೂರದ ಅರಣ್ಯ ಪ್ರದೇಶದಲ್ಲಿ ಶನಿವಾರ ಮುಂಜಾನೆ ಸೇನೆ ಮತ್ತು ಪೊಲೀಸರು ಭಯೋತ್ಪಾದಕರಿಗಾಗಿ ಜಂಟಿ ಶೋಧ ಕಾರ್ಯಾಚರಣೆಯನ್ನು ಪುನರಾರಂಭಿಸಿದ್ದು, ಉಗ್ರರೊಂದಿಗೆ ನಡೆದ ಗುಂಡಿನ ಚಕಮಕಿಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಯೋಧ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಉಧಂಪುರದ ದುಡು–ಬಸಂತ್‌ಗಢ ಪ್ರದೇಶದ ಸಿಯೋಜ್ ಧಾರ್ ಅರಣ್ಯ, ಗಡಿ ಮತ್ತು ದೋಡಾದ ಭದೇರ್ವಾದಲ್ಲಿ ಸೇನೆ ಮತ್ತು ಜಮ್ಮು–ಕಾಶ್ಮೀರ ಪೊಲೀಸರ ವಿಶೇಷ ಕಾರ್ಯಾಚರಣೆ ಗುಂಪಿನ (ಎಸ್‌ಒಜಿ) ಮೇಲೆ ಉಗ್ರರು ನಡೆಸಿದ ಗುಂಡಿನ ದಾಳಿಯಲ್ಲಿ ಯೋಧ ಗಾಯಗೊಂಡಿದ್ದರು. ಕೂಡಲೇ ಯೋಧನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಅವರು ಕೊನೆಯುಸಿರೆಳೆದಿದ್ದಾರೆ ಎಂದು ತಿಳಿಸಿದ್ದಾರೆ. ಎನ್‌ಕೌಂಟರ್ ನಡೆದ ಸ್ಥಳದ ಸುತ್ತಮುತ್ತಲಿನ ಪ್ರದೇಶವನ್ನು ರಾತ್ರಿಯಿಡೀ ಸೇನೆ ಸುತ್ತುವರಿದಿದ್ದು, ಶನಿವಾರ ಬೆಳಿಗ್ಗೆ ಜಂಟಿ ಶೋಧ ಕಾರ್ಯಾಚರಣೆ ಪುನರಾರಂಭವಾಯಿತು.


ಅಮೆರಿಕದ ಎಚ್1–ಬಿ ವಿಸಾಗೆ 1 ಲಕ್ಷ ಡಾಲರ್ ಶುಲ್ಕ: ಭಾರತೀಯರ ಮೇಲೆ ಪರಿಣಾಮ

ನ್ಯೂಯಾರ್ಕ್: ವಲಸೆ ತಡೆಯಲು ಎಚ್1–ಬಿ ವಿಸಾದ ಶುಲ್ಕವನ್ನು 1 ಲಕ್ಷ ಡಾಲರ್‌ಗೆ ಏರಿಸುವ ಘೋಷಣೆಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಹಿ ಹಾಕಿದ್ದಾರೆ. ಇದು ಭಾರತೀಯರ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ದೇಶದ ಸದ್ಯದ ವಲಸೆ ವ್ಯವಸ್ಥೆಯಲ್ಲಿ ಅಮೆರಿಕನ್ನರು ಕೆಲಸ ಮಾಡದ ಕ್ಷೇತ್ರಗಳಲ್ಲಿ, ಹೆಚ್ಚು ಕೌಶಲಪೂರ್ಣ ಕಾರ್ಮಿಕರಿಗೆ ಬರಲು ಅವಕಾಶ ನೀಡುವ ವಿಸಾ ಇದು. ಆದರೆ ಅದನ್ನು ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ ಎಂದು ಶ್ವೇತ ಭವನದ ಕಾರ್ಯದರ್ಶಿ ವಿಲ್ ಶಾರ್ಫ್ ಹೇಳಿದ್ದಾರೆ. ಅಮೆರಿಕಕ್ಕೆ ಬರುವವರು ನಿಜವಾಗಿಯೂ ಕೌಶಲಭರಿತರಾಗಿರಬೇಕು, ಅವರು ಅಮೆರಿಕನ್ ಕೆಲಸಗಾರರನ್ನು ಬದಲಿಸಬಾರದು ಎಂದು ಎಚ್1–ಬಿ ವಿಸಾದ ಶುಲ್ಕ ಏರಿಸಲಾಗಿದೆ. ಇದು ಅಮೆರಿಕದ ಕೆಲಸಗಾರರನ್ನು ರಕ್ಷಿಸಲು ಹಾಗೂ ಕಂಪನಿಗಳಿಗೆ ಹೆಚ್ಚು ಕೌಶಲಭರಿತ ನೌಕರರನ್ನು ಅಮೆರಿಕಕ್ಕೆ ಕರೆತರಲು ಸಾಧ್ಯವಾಗಲಿದೆ. ಕಂಪನಿಗಳೇ ಈ ವಿಸಾದ ಶುಲ್ಕ ಪಾವತಿಸಲಿದೆ. ನಮಗೆ ಕಾರ್ಮಿಕರು ಬೇಕು. ಉತ್ತಮ ಕೆಲಸಗಾರರು ಬೇಕು ಎಂದು ಓವಲ್ ಕಚೇರಿಯಲ್ಲಿ ವಾಣಿಜ್ಯ ಕಾರ್ಯದರ್ಶಿ ಹೊವಾರ್ಡ್ ಲುಟ್ನಿಕ್ ಅವರ ಸಮ್ಮುಖದಲ್ಲಿ ಘೋಷಣೆಗೆ ಸಹಿ ಹಾಕುತ್ತಾ ಟ್ರಂಪ್ ಹೇಳಿದ್ದಾರೆ.



ಲೈಂಗಿಕ ಕಿರುಕುಳ ಪ್ರಕರಣ ದಾಖಲು: ದೇವಸ್ಥಾನದಲ್ಲೇ ಅರ್ಚಕ ನೇಣಿಗೆ ಶರಣು

ಮುಂಬೈ: ಲೈಂಗಿಕ ಕ್ರಿಯೆಗೆ ಆಹ್ವಾನಿಸಿದ ಆರೋಪ ಸಂಬಂಧ ಯುವತಿಯೊಬ್ಬಳಿಂದ ದೂರು ದಾಖಲಾದ ಕೆಲವೇ ಗಂಟೆಗಳ ನಂತರ ದೇವಸ್ಥಾನದೊಳಗೆ 52 ವರ್ಷದ ಅರ್ಚಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮುಂಬೈನ ಕಾಂಡಿವಲಿ ಪ್ರದೇಶದ ದೇವಸ್ಥಾನದಲ್ಲಿ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಅರ್ಚಕರ ಶವ ಪತ್ತೆಯಾಗಿದೆ. 19 ವರ್ಷದ ಯುವತಿ ಮತ್ತು ಆಕೆಯ ತಂದೆ ಇಂದು ಬೆಳಗಿನ ಜಾವ 2 ಗಂಟೆ ಸುಮಾರಿಗೆ ಕಾಂಡಿವಲಿ ಪೊಲೀಸ್ ಠಾಣೆಗೆ ತೆರಳಿ ಶುಕ್ರವಾರ ರಾತ್ರಿ 10.30ಕ್ಕೆ ಅರ್ಚಕರು ತನಗೆ ಕರೆ ಮಾಡಿ ತನ್ನೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವಂತೆ ಆಹ್ವಾನಿಸಿದ್ದರು ಎಂದು ಆರೋಪಿಸಿದರು. ಬೆಳಿಗ್ಗೆ ಬಂದು ದೂರು ನೀಡುವಂತೆ ಪೊಲೀಸರು ಯುವತಿ ಮತ್ತು ಆಕೆಯ ತಂದೆಗೆ ತಿಳಿಸಿದ್ದರು. ನಂತರ ಪಶ್ಚಿಮ ಉಪನಗರದ ಲಾಲ್ಜಿಪಾದ ಗಣೇಶ ನಗರದಲ್ಲಿರುವ ದೇವಸ್ಥಾನದೊಳಗೆ ಅರ್ಚಕರು ತಮ್ಮ ಜೀವನವನ್ನು ಕೊನೆಗೊಳಿಸಿದ್ದಾರೆ ಎಂದು ಪೊಲೀಸರಿಗೆ ನಂತರ ತಿಳಿದುಬಂದಿದೆ.

ಪಾಕ್ ಆಕ್ರಮಿತ ಕಾಶ್ಮೀರದಿಂದ ಪಲಾಯನ ಮಾಡಿದ ಹಿಜ್ಬುಲ್, ಜೈಶ್–ಎ–ಮುಹಮ್ಮದ್

ಶ್ರೀನಗರ: ಕಳೆದ ಮೇ ತಿಂಗಳಲ್ಲಿ ಪಹಲ್ಗಾಮ್ ದಾಳಿಗೆ ಪ್ರತಿಯಾಗಿ ಭಾರತ ನಡೆಸಿದ ಆಪರೇಷನ್ ಸಿಂದೂರ್ ದಾಳಿಗಳ ಎಫೆಕ್ಟ್ ಎಷ್ಟು ತೀವ್ರವಾಗಿದೆಯೆಂದರೆ, ಭಾರತದ ಮಗ್ಗುಲ ಮುಳ್ಳಾಗಿ ಕಾಡುತ್ತಿರುವ ಭಯೋತ್ಪಾದಕ ಸಂಘಟನೆಗಳಾದ ಹಿಜ್ಬುಲ್ ಮುಜಾಹಿದ್ದೀನ್ ಹಾಗೂ ಜೈಶ್–ಎ–ಮುಹಮ್ಮದ್ (ಜೆಇಎಂ) ಪಾಕ್ ಆಕ್ರಮಿತ ಕಾಶ್ಮೀರದಲ್ಲಿದ್ದ ತಮ್ಮ ಅಡಗುತಾಣಗಳಿಂದ ಪಲಾಯನ ಮಾಡಿದೆ. ಇಡೀ ಅಡಗುತಾಣವನ್ನೇ ಸ್ಥಳಾಂತರ ಮಾಡಲು ನಿರ್ಧಾರ ಮಾಡಿದ್ದು, ಅಫ್ಘಾನಿಸ್ತಾನ ಗಡಿಯಲ್ಲಿರುವ ಭಾರತದ ಗಡಿಯಿಂದ ಬಹಳ ದೂರದಲ್ಲಿರುವ ಖೈಬರ್ ಪಖ್ತುಂಖ್ವಾ ಪ್ರಾಂತ್ಯಕ್ಕೆ ಈ ಅಡಗುದಾಣವನ್ನು ಶಿಫ್ಟ್ ಮಾಡುವ ಕೆಲಸ ಮಾಡುತ್ತಿದೆ. ಗುಪ್ತಚರ ಮಾಹಿತಿಯ ಪ್ರಕಾರ, ಭಯೋತ್ಪಾದಕ ಗುಂಪುಗಳ ಹಲವಾರು ಸ್ಥಾಪನೆಗಳು ನೆಲೆಗೊಂಡಿದ್ದ ಪಾಕಿಸ್ತಾನ ಆಕ್ರಮಿತ ಕಾಶ್ಮೀರ (ಪಿಒಕೆ) ಭಾರತದ ವೈಮಾನಿಕ ಹಾಗೂ ಡ್ರೋನ್ ದಾಳಿಗೆ ಬಹಳ ಸುಲಭವಾಗಿ ಸಿಗುತ್ತದೆ. ಈ ಕಾರಣಕ್ಕೆ ಈ ಪ್ರದೇಶ ಇನ್ನು ಸುರಕ್ಷಿತವಲ್ಲ ಎಂದು ಈ ಉಗ್ರ ಸಂಘಟನೆಗಳು ಪರಿಗಣಿಸಿರುವುದರಿಂದ ಸ್ಥಳಾಂತರವನ್ನು ಯೋಜನೆ ಮಾಡಲಾಗುತ್ತಿದೆ ಎಂದು ಎಕನಾಮಿಕ್ ಟೈಮ್ಸ್ ವರದಿ ಮಾಡಿದೆ.



ಬಿಜೆಪಿ ಕೌನ್ಸಿಲರ್ ಅನಿಲ್‌ಕುಮಾರ್ ಶವವಾಗಿ ಪತ್ತೆ



ತಿರುವನಂತಪುರಂ: ತಿರುವನಂತಪುರಂನ ಬಿಜೆಪಿ ವಾರ್ಡ್ ಕೌನ್ಸಿಲ್ ಕಚೇರಿಯಲ್ಲಿ ಬಿಜೆಪಿ ನಾಯಕ ಮತ್ತು ತಿರುಮಲ ವಾರ್ಡ್ ಕೌನ್ಸಿಲರ್ ಕೆ. ಅನಿಲ್‌ಕುಮಾರ್ ಅವರು ಶನಿವಾರ ಶವವಾಗಿ ಪತ್ತೆಯಾಗಿದ್ದಾರೆ.

ಈ ಸಂಬಂಧ ಪೊಲೀಸರು ಅಸ್ವಾಭಾವಿಕ ಸಾವಿನ ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಆರಂಭಿಸಿದ್ದಾರೆ. ತಿರುಮಲದ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಬಿಜೆಪಿ ವಾರ್ಡ್ ಕೌನ್ಸಿಲ್ ಕಚೇರಿಯಲ್ಲಿ ಅನಿಲ್‌ಕುಮಾರ್ ಅವರು ನೇಣು ಬಿಗಿದ ಸ್ಥಿತಿಯಲ್ಲಿ ಇಂದು ಬೆಳಗ್ಗೆ 8.30ರ ಸುಮಾರಿಗೆ ಪತ್ತೆಯಾಗಿದ್ದಾರೆ. ಪೊಲೀಸರ ಪ್ರಕಾರ ಅನಿಲ್ ಕುಮಾರ್ ಬರೆದಿದ್ದಾರೆಂದು ನಂಬಲಾದ ಡೆತ್ ನೋಟ್ ಸಹ ಕಚೇರಿಯಲ್ಲಿ ಪತ್ತೆಯಾಗಿದೆ. ಅದರಲ್ಲಿ ಅವರು ಸಹಕಾರಿ ಸಂಘಕ್ಕೆ ಸಂಬಂಧಿಸಿದ ಹಣಕಾಸಿನ ಸಮಸ್ಯೆಗಳನ್ನು ಉಲ್ಲೇಖಿಸಿದ್ದಾರೆ ಮತ್ತು ಪಕ್ಷದ ನಾಯಕರಿಂದ ಸರಿಯಾದ ಬೆಂಬಲ ಸಿಗದಿದ್ದಕ್ಕಾಗಿ ನಿರಾಸೆ ವ್ಯಕ್ತಪಡಿಸಿದ್ದಾರೆ ಎಂದು ವರದಿಯಾಗಿದೆ. ಅನಿಲ್ ಕುಮಾರ್ ಅವರು ಬಿಜೆಪಿ ತಿರುವನಂತಪುರಂ ನಗರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಮಾಹಿತಿ ಹಕ್ಕು ಅಧಿನಿಯಮ ಕಾಯ್ದೆ ಕುರಿತು ವರದಿ ಸಲ್ಲಿಸಿ

ಅಧಿಕಾರಿಗಳಿಗೆ ಮಾಹಿತಿ ಆಯೋಗದ ಮುಖ್ಯ ಆಯುಕ್ತರ ಸೂಚನೆ

ಮಂಡ್ಯ, ಸೆ.20–ಮಾಹಿತಿ ಹಕ್ಕು ಅಧಿನಿಯಮವನ್ನು ಅನುಷ್ಠಾನಗೊಳಿಸಿ 20 ವರ್ಷವಾಗಿದ್ದು, ಜಿಲ್ಲಾಧಿಕಾರಿಗಳು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ವರದಿ ಕಳುಹಿಸಿಕೊಡುವಂತೆ ರಾಜ್ಯ ಮಾಹಿತಿ ಆಯೋಗದ ಮುಖ್ಯ ಆಯುಕ್ತ ಆಶಿತ್ ಮೋಹನ್ ಪ್ರಸಾದ್ ತಿಳಿಸಿದ್ದಾರೆ.

ಶನಿವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಅ.12ಕ್ಕೆ 20 ವರ್ಷಗಳು ತುಂಬುವ ಹಿನ್ನಲೆಯಲ್ಲಿ ಮಾಹಿತಿ ಹಕ್ಕು ಆಯೋಗವು ರಾಜ್ಯಮಟ್ಟದಲ್ಲಿ ಮಾಹಿತಿ ಹಕ್ಕು ಅಧಿನಿಯಮ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಕಾರ್ಯಕ್ರಮ ಆಯೋಜಿಸುತ್ತಿದೆ ಈಅಧಿನಿಯಮದಡಿ ಅರ್ಜಿ ಸ್ವೀಕರಿಸುವ ಕಚೇರಿಗಳು ಲೋಕ್ ಅದಾಲತ್ ಮಾದರಿಯಲ್ಲಿ ದಿನ ನಿಗದಿಪಡಿಸಿಕೊಂಡು ಅರ್ಜಿಗಳನ್ನು ವಿಲೇವಾರಿ ಮಾಡಿದರೆ ಬಹಳಷ್ಟು ಅರ್ಜಿಗಳು ಆಯೋಗದ ಬಳಿ ಬರುವುದಿಲ್ಲ. ಎಂದರು.


ರಾಜ್ಯ ಮಾಹಿತಿ ಆಯೋಗದ ಮುಖ್ಯ ಆಯುಕ್ತ ಆಶಿತ್ ಮೋಹನ್ ಪ್ರಸಾದ್ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು

ಜಿಲ್ಲಾಧಿಕಾರಿ ಡಾ॥ ಕುಮಾರ ಜಿಲ್ಲೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಹಾಗೂ ವಿಲೇವಾರಿಯಾದ ಅರ್ಜಿಗಳ ಕುರಿತು ಮಾಹಿತಿ ನೀಡಿದರು. ಸಭೆಯಲ್ಲಿ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದ ಮೂರ್ತಿ, ಉಪವಿಭಾಗಾಧಿಕಾರಿ ಶಿವಮೂರ್ತಿ, ನಗರಾಭಿವೃದ್ಧಿ ಕೋಶಾಧಿಕಾರಿ ನರಸಿಂಹ ಮೂರ್ತಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕ ಪ್ರತೀಕ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ್, ಡಿಡಿಪಿಐ ಲೋಕೇಶ್, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್, ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕಿ ರೂಪಾಶ್ರೀ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತ ರಿದ್ದರು.

ಭಾರತೀನಗರದಲ್ಲಿ ಸಾರಿಗೆ ಬಸ್ ಬ್ರೇಕ್ ವಿಫಲ

ಸರಣಿ ಅಪಘಾತ; ತಂದೆ ಇಬ್ಬರು ಮಕ್ಕಳಿಗೆ ಗಾಯ

ಭಾರತೀನಗರ: ಕೆಎಸ್ಆರ್‌ಟಿಸಿ ಬಸ್ಸು ಸರಣಿ ಅಪಘಾತ ನಡೆಸಿದ ಪರಿಣಾಮ ಇಬ್ಬರು ಮಕ್ಕಳು ಸೇರಿ ಮೂವರಿಗೆ ತೀವ್ರವಾದ ಗಾಯಗಳಾಗಿದ್ದಲ್ಲದೆ ಕಾರು, ಕಬ್ಬಿನ ಎತ್ತಿನ ಗಾಡಿ ಜಖಂಗೊಂಡ ಘಟನೆ ಭಾರತೀನಗರದ ಹೆದ್ದಾರಿಯಲ್ಲಿ ನಡೆದಿದೆ.

ಕರಡಕೆರೆ ಗ್ರಾಮದ ರಾಜಣ್ಣ (44), ಮಕ್ಕಳಾದ ಧನುಷ್(11), ಗಾನವಿ (9) ಗಾಯಗೊಂಡವರಾಗಿದ್ದು, ಭಾರತೀನಗರದ ಜಿ.ಮಾದೇಗೌಡ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ

ಮಳವಳ್ಳಿಯಿಂದ ಭಾರತೀನಗರಕ್ಕೆ ಆಗಮಿಸಿದ ಸಾರಿಗೆ ಬಸ್ (ಕೆಎ 57, ಎಫ್–1327) ಭಾರತೀ ಕಾಲೇಜ್ ಬಳಿ ವಿದ್ಯಾರ್ಥಿಗಳನ್ನು ಇಳಿಸಿ ಮಂಡ್ಯದ ಕಡೆಗೆ ತೆರಳುತ್ತಿತ್ತು. ಭಾರತೀನಗರದ ಸಿದ್ದಲಿಂಗೇಶ್ವರ ಮೆಡಿಕಲ್ಸ್ ಸ್ಟೋರ್ಸ್ ಬಳಿಗೆ ಬರುತ್ತಿದ್ದಂತೆ ಬಸ್ ಬ್ರೇಕ್ ವಿಫಲವಾಗಿದ್ದು, ವೃತ್ತದಲ್ಲಿದ್ದ ಆಲಭುಜನಹಳ್ಳಿ ಬೋರೇಗೌಡ ಎಂಬುವರ ಕಾರಿಗೆ ಡಿಕ್ಕಿ ಹೊಡೆದು, ನಂತರ ಕಬ್ಬನ್ನು ಸಾಗಿಸುತ್ತಿದ್ದ ಗಾಡಿಗೆ ಡಿಕ್ಕಿ ಹೊಡೆದಿದೆ. ನಂತರ ಮುಂದಕ್ಕೆ ಸಾಗಿ ಇಬ್ಬರು ಮಕ್ಕಳನ್ನು ಶಾಲೆಗೆ ಕರೆದೊಯ್ಯುತ್ತಿದ್ದ ಕರಡಕೆರೆ ಗ್ರಾಮದ ರಾಜಣ್ಣರ ಬೈಕ್‌ಗೆ ಡಿಕ್ಕಿ ಹೊಡಿದಿದೆ.



ಅಪಘಾತದ ರಭಸಕ್ಕೆ ಬೈಕ್ ಬಸ್‌ನಡಿ ಸಿಲುಕಿ ಸುಮಾರು 15 ಅಡಿಗೂ ಹೆಚ್ಚು ದೂರ ಎಳೆದೋಯ್ದಿದೆ. ಈ ಅಪಘಾತದಿಂದ ಮದ್ದೂರು ಮಳವಳ್ಳಿ ಹೆದಾರಿಯ ರಸ್ತೆ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ತಕ್ಷಣವೇ ಪೊಲೀಸರು ಸ್ಥಳಕ್ಕೆ ಧಾವಿಸಿ ಅಪಘಾತಗೊಂಡ ವಾಹನಗಳನ್ನು ತೆರುವುಗೊಳಿಸಿದರು.

ಸಾರಿಗೆ ಬಸ್ ಚಾಲಕ ಶ್ರೀಧರ್ ಮೂರ್ತಿ ಬಸ್ ಬಿಟ್ಟು ಠಾಣೆಗೆ ಹೋಗಿ ಶರಣಾಗಿದ್ದು, ಕೆ.ಎಂ.ದೊಡ್ಡಿ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸರ್ವಿಸ್ ರಸ್ತೆ ವಿಚಾರವಾಗಿ ರೈತರೊಂದಿಗೆ ಸಮಾಲೋಚನೆ


ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ರೈತರೊಂದಿಗೆ ಸಭೆ ನಡೆಸಿದರು

ಶ್ರೀರಂಗಪಟ್ಟಣ,ಸೆ.20–ಶ್ರೀರಂಗಪಟ್ಟಣ – ಕುಶಾಲನಗರ ರಾಷ್ಟ್ರೀಯ ಹೆದ್ದಾರಿ 275 ರಲ್ಲಿ ಸರ್ವಿಸ್ ರಸ್ತೆ ವಿಚಾರವಾಗಿ ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ರೈತರೊಂದಿಗೆ ಸಭೆ ನಡೆಸಿದರು

ತಾಲೂಕಿನಬೆಳಗೊಳ ಗ್ರಾಮದ ಆಂಜನೇಯಸ್ವಾಮಿ ಸಮುದಾಯ ಭವನದಲ್ಲಿ ಸೇರಿದ್ದ ನೂರಾರು ರೈತರೊಂದಿಗೆ ಸಭೆ ನಡೆಸಿ ಮನವಿ ಆಲಿಸಿದರು. ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ 2019ರಲ್ಲಿ ರಾಷ್ಟ್ರೀಯ ಹೆದ್ದಾರಿಅಧಿಕಾರಿಗಳು,ಅಂದಿನ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸ್ಥಳೀಯ ರೈತರೊಂದಿಗೆ ಸಭೆ ನಡೆಸಿ ಸರ್ವಿಸ್ ರಸ್ತೆ ನಿರ್ಮಾಣಕ್ಕೆ ಕ್ರಿಯಾಯೋಜನೆ ರೂಪಿಸದಿರುವುದರಿಂದ ಈಗ ಹೆದ್ದಾರಿಯಿಂದ ಜಮೀನು ಎರಡು ಭಾಗವಾಗಿ, ಹಲವೆಡೆ ಎತ್ತರದಲ್ಲಿ ಹಾದು ಹೋಗುವುದರಿಂದ ಜಮೀನಿಗೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ರೈತರಿಂದ ಭೂಮಿ ಪಡೆಯುವ ವೇಳೆ ಜಿಲ್ಲಾ ಹಾಗೂ ಸ್ಥಳೀಯ ಅಧಿಕಾರಿಗಳು ಏನನ್ನೂ ಕೇಳದೆ ಭೂಮಿ ಪಡೆದು, ಇದೀಗ ರೈತರ ಸಮಸ್ಯೆ ಕೇಳದಿರುವುದು ವಿಷಾದನೀಯ ಕುಮಾರಸ್ವಾಮಿ ಒತ್ತಾಯದ ಮೇರೆಗೆ ಸರ್ವೀಸ್ ರಸ್ತೆಗೆ ಅಗತ್ಯವಿರುವ ಭೂಮಿ ಪಡೆಯಲು ಅಗತ್ಯ ಹಣ ಬಿಡುಗಡೆ ಮಾಡಿಕೊಡುವ ಭರವಸೆ ಕೇಂದ್ರ ಸಚಿವ ಗಡ್ಕರಿ ನೀಡಿದ್ದಾರೆ ಎಂದರು.

ಸಭೆಯಲ್ಲಿ ಬಿ.ವಿ ಲೋಕೇಶ್, ವಿಷಕಂಠೇಗೌಡ, ಶ್ರೀನಿ ವಾಸೇಗೌಡ, ಬಿ.ಟಿ. ಸ್ವಾಮಿ, ಸುನೀಲ್ ಕುಮಾರ್, ಆನಂದೂರು ಸ್ವಾಮಿ, ಪಾಲಹಳ್ಳಿ ರಮೇಶ್ ಬಾಬು, ಸತ್ಯ ರಾಜ್, ಚಂದನ್, ಭರತ್ ಕುಮಾರ್ ಸೇರಿ ದಂತೆ ಬೊಮ್ಮೂರು ಅಗ್ರಹಾರ, ಪಾಲಹಳ್ಳಿ, ಕಾರೇಕುರ, ಕೆಂಪಲಿಂಗಾಪುರ, ಬೆಳಗೊಳ, ಮಜ್ಜಿಗೆಪುರ, ಹುಲಿಕೆರೆ, ಹೊಸ ಉಂಡವಾಡಿ ರೈತರು ಸಭೆಯಲ್ಲಿದ್ದರು.

ಶಿಕ್ಷಣ ಗ್ಯಾರಂಟಿ ಯೋಜನೆಗೆ ಆಗ್ರಹ

ಶ್ರೀರಂಗಪಟ್ಟಣ, ಸೆ.20–ಎಲ್ಲ ವರ್ಗದ ಮಕ್ಕಳು ಉನ್ನತ ಶಿಕ್ಷಣದವರೆಗೆ ಉಚಿತವಾಗಿ ಶಿಕ್ಷಣ ಪಡೆಯಲು ಶಿಕ್ಷಣ ಗ್ಯಾರಂಟಿ ಯೋಜನೆ ಜಾರಿಗೆ ತರುವಂತೆ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಪಟ್ಟಣದಲ್ಲಿ ಎನ್.ಶಂಕರೇಗೌಡ ಚಾರಿಟೆಬಲ್ ಟ್ರಸ್ಟ್ ವತಿಯಿಂದ, ಎಂಬಿಬಿಎಸ್‌ಗೆ ಉಚಿತ ಪ್ರವೇಶ ಪಡೆದಿರುವ ಸತೀಶ್ ಎಂಬವರ ಮಗ ಸ್ಕಂದ ಅವರಿಗೆ ಲ್ಯಾಪ್‌ಟಾಪ್ ವಿತರಿಸಿ ಮಾತನಾಡಿದ ಅವರು, ಈಚಿನ ವರ್ಷಗಳಲ್ಲಿ ಉತ್ತಮ ಶಿಕ್ಷಣ ಪಡೆಯುವುದು ಗಗನಕುಸುಮವಾಗಿದೆ. ಪೋಷಕರು ಲಕ್ಷಗಟ್ಟಲೆ ಶುಲ್ಕಕ್ಕಾಗಿ ಸಾಲ ಮಾಡಿರುವ ಉದಾಹರಣೆಗಳೂ ಇವೆ. ಈ ಹೊರೆ ತಗ್ಗಿಸಬೇಕಾದರೆ ಸರ್ಕಾರ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ಉಚಿತ ಶಿಕ್ಷಣ ನೀಡುವಂಥ ಕಾರ್ಯಕ್ರಮ ರೂಪಿಸಬೇಕು ಕೌಶಲ್ಯ ಆಧಾರಿತ ಶಿಕ್ಷಣ ವ್ಯವಸ್ಥೆ ಜಾರಿಯಾಗಬೇಕು. ಉದ್ಯೋಗ ಗ್ಯಾರಂಟಿ ನೀಡುವ ಮೂಲಕ ಸರ್ಕಾರ ತನ್ನ ಬದ್ಧತೆ ಪ್ರದರ್ಶಿಸಬೇಕು ಎಂದು ಹೇಳಿದರು.


ಎಂಬಿಬಿಎಸ್‌ಗೆ ಉಚಿತ ಪ್ರವೇಶ ಪಡೆದ ಸತೀಶ್‌ಗೆ ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ ಲ್ಯಾಪ್‌ಟಾಪ್ ನೀಡಿದರು

ಬಿಜೆಪಿ ನಗರ ಘಟಕದ ಅಧ್ಯಕ್ಷ ಜಿ.ಇ. ಸುಧಾಕರ್, ಪುರಸಭೆ ಸದಸ್ಯರಾದ ಗಂಜಾಂ ಶಿವು, ಕೃಷ್ಣಪ್ಪ, ಎಸ್.ಟಿ.ರಾಜು, ಎಂ. ಶ್ರೀನಿವಾಸ್, ಎಸ್.ಪ್ರಕಾಶ್, ಮಾಜಿ ಸದಸ್ಯರಾದ ವಿಶ್ವನಾಥ್, ಎಚ್.ಎಸ್. ಪುಟ್ಟರಾಮು, ಮುಖಂಡರಾದ ಉಮೇಶ ಕುಮಾರ್, ಎಂ.ಜೆ. ಪುಟ್ಟರಾಜು, ಪ್ರಭಾಕರ್, ಎಸ್.ರಘು, ವೆಂಕಟೇಶ್, ಸುಭಾಷ್, ಶಿವು, ಹರ್ಷ, ಪ್ರೇಮ್, ಸನತ್, ಶಂಕರ್, ಮದನ್, ಚೇತನ್, ಧನಂಜಯ, ದಿವಾಕರ್, ಅಭಿಜಿತ್, ಆನಂದ್, ಭೈರವ, ಪವನ್, ವಾಸು, ರವಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಭಾರತೀನಗರದಲ್ಲಿ ಸ್ವಚ್ಛತಾ ಹೀ–ಸೇವಾ ಕಾರ್ಯಕ್ರಮಕ್ಕೆ ಚಾಲನೆ


ಭಾರತೀನಗರ ಗ್ರಾ.ಪಂ ವತಿಯಿಂದ ಅ.2 ರವರೆಗೆ ಹಮ್ಮಿಕೊಂಡಿರುವ ಸ್ವಚ್ಛತಾ ಹೀ–ಸೇವಾ ಕಾರ್ಯಕ್ರಮದ ಅಂಗವಾಗಿ ಭಾರತೀನಗರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಂಡಿರುವ ಸ್ವಚ್ಛತಾ ಕಾರ್ಯಕ್ರಮದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎನ್.ಸುಧಾ ಅವರು ಪೌರಕಾರ್ಮಿಕರಿಗೆ, ಗ್ರಾ.ಪಂ ಸಿಬ್ಬಂದಿಗಳಿಗೆ ಹಾಗೂ ಸದಸ್ಯರಿಗೆ ಸ್ವಚ್ಛತೆ, ಪರಿಸರ ಮತ್ತು ಆರೋಗ್ಯದ ಬಗ್ಗೆ ಪ್ರತಿಜ್ಞಾವಿಧಿ ಬೋಧಿಸಿದರು

ಟಿಎಪಿಸಿಎಂಎಸ್ ಚುನಾವಣೆ: 41 ನಾಮಪತ್ರ ಸಲ್ಲಿಕೆ

ಕೆ.ಆರ್.ಪೇಟೆ, ಸೆ.20–ತಾಲೂಕು ಟಿಎಪಿಸಿಎಂಎಸ್ ಸಂಸ್ಥೆಯ ನಿರ್ದೇಶಕರ ಆಯ್ಕೆಗೆ ಇದೇ 28ರಂದು ಚುನಾವಣೆ ನಡೆಯಲಿದೆ. ನಾಮಪತ್ರ ಸಲ್ಲಿಸಲು ಕಡೆಯ ದಿನ 10 ನಾಮಪತ್ರಗಳು ಸಲ್ಲಿಕೆಯಾಗಿದ್ದು, 14 ಸ್ಥಾನಕ್ಕೆ ಬರೋಬ್ಬರಿ 41 ನಾಮಪತ್ರಗಳು ಸಲ್ಲಿಕೆಯಾಗಿವೆ ಎಂದು ಚುನಾವಣಾಧಿಕಾರಿಯಾಗಿರುವ ತಹಸೀಲ್ದಾರ್ ಡಾ.ಎಸ್.ಯು. ಅಶೋಕ್ ತಿಳಿಸಿದ್ದಾರೆ.

ಚುನಾವಣೆಗೆ ಶುಕ್ರವಾರ ಮತ್ತು ಶನಿವಾರ ನಾಮಪತ್ರಗಳ ಸುರಿಮಳೆಯೇ ನಡೆಯಿತು. ಕಾಂಗ್ರೆಸ್ ಅಧಿಕಾರದಲ್ಲಿರುವ ಕಾರಣ ಭಾರೀ ಪ್ರತಿಷ್ಠೆಯ ಕಣವಾಗಿದೆ. ಅದೇ ರೀತಿ ಜಿಲ್ಲೆಯಲ್ಲಿ ಏಕೈಕ ಜೆಡಿಎಸ್ ಶಾಸಕ ಕೆ.ಆರ್.ಪೇಟೆಯ ಹೆಚ್.ಟಿ.ಮಂಜು ಅವರಿಗೂ ತಮ್ಮ ಶಕ್ತಿ ಪ್ರದರ್ಶನ ಮಾಡಲು ಚುನಾವಣೆಯ ಗೆಲುವು ಭಾರಿ ಪ್ರತಿಷ್ಠೆಯ ಕಣವಾಗಿದೆ.

ಜಿ.ಪಂ. ಮಾಜಿ ಉಪಾಧ್ಯಕ್ಷ ಬ್ಯಾಲದಕೆರೆ ಪಾಪೇಗೌಡ ನಿಧನ



ಮಂಡ್ಯ, ಸೆ. 20–ಜಿ.ಪಂ.ಮಾಜಿ ಉಪಾಧ್ಯಕ್ಷ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಬ್ಯಾಲದಕೆರೆ ಪಾಪೇಗೌಡ (90) ಅವರು ಶನಿವಾರ ಹೃದಯಾಘಾತದಿಂದ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಪುತ್ರ ಅಶೋಕ್, ಪುತ್ರಿ, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ 3 ಗಂಟೆಗೆ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಗುವುದೆಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ : ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಮಾಜಿ ಸಚಿವರಾದ ಡಾ.ನಾರಾಯಣಗೌಡ, ಸಿ.ಎಸ್. ಪುಟ್ಟರಾಜು, ಆದಿಚುಂಚನ ಗಿರಿಯ ಹೇಮಗಿರಿ ಶಾಖಾ ಮಠದ ಗೌರವ ಕಾರ್ಯದರ್ಶಿ ಡಾ.ಜೆ.ಎನ್. ರಾಮಕೃಷ್ಣೇಗೌಡ, ಶಾಸಕ ಹೆಚ್.ಟಿ.ಮಂಜು, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಬಿ.ಪ್ರಕಾಶ್, ಎಂ.ಪುಟ್ಟಸ್ವಾಮಿಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್. ದೇವರಾಜು, ಕೆಪಿಸಿಸಿ ಸದಸ್ಯ ಕಿಕ್ಕೇರಿ ಸುರೇಶ್, ಪುರಸಭೆ ಹಿರಿಯ ಸದಸ್ಯರಾದ ಡಿ.ಪ್ರೇಮ್ ಕುಮಾರ್, ಕೆ.ಆರ್.ರವೀಂದ್ರಬಾಬು, ಪುರಸಭೆ ಮಾಜಿ ಅಧ್ಯಕ್ಷರಾದ ಕೆ.ಬಿ.ಮಹೇಶ್, ಕೆ.ಸಿ.ವಾಸು, ಕೆ.ಎಚ್.ರಾಮಕೃಷ್ಣ ಮಾಸ್ಟರ್, ಕೆ.ಎಸ್.ರಾಮೇಗೌಡ ಮತ್ತಿತರರು ತೀವ್ರ ಸಂತಾಪ ಸೂಚಿಸಿದ್ದಾರೆ.

ಸಣ್ಣೈದೇಗೌಡ ನಿಧನ



ಪಾಂಡವಪುರ, ಸೆ.20–ತಾಲೂಕಿನ ಚಿಕ್ಕಾಡೆ ಗ್ರಾಮದ ಸಣ್ಣೈದೇಗೌಡ(86) ಅವರು ಶನಿವಾರ ಬೆಳಿಗ್ಗೆ ನಿಧನ ಹೊಂದಿದರು. ಮೃತರು ಪತ್ನಿ, ನಾಲ್ವರು ಪುತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಿಕ್ಕಾಡೆ ಗ್ರಾಮದ ಅವರ ಸ್ವಂತ ಜಮೀನಿನಲ್ಲಿ ನಡೆಯಿತು.

ಒಂದನೇ ಪುಟದಿಂದ

ಒಕ್ಕಲಿಗರ ಒಮ್ಮತ

ಆದರೆ, ಅದಕ್ಕೂ ಮೊದಲು 'ಒಕ್ಕಲಿಗ' ಎಂದೇ ನಮೂದಿಸಿ. ಇಲ್ಲಿ ತಪ್ಪು ಮಾಡಿದರೆ, ಮುಂದೆ ನಮ್ಮ ಮಕ್ಕಳು ಸಂಕಷ್ಟಕ್ಕೆ ಸಿಲುಕುತ್ತಾರೆ. ನಾವು ಇಲ್ಲಿ ಸರಿಯಾಗಿ ಹೆಜ್ಜೆ ಇಟ್ಟು ಒಂದಾಗಿ ಹೋದರೆ ಸಮುದಾಯದ ಶಕ್ತಿ ತೋರಿಸಿದಂತಾಗುತ್ತದೆ. ಸಮುದಾಯ ಬಲಾಢ್ಯವಾಗಿದೆ ಎಂದರೆ, ನಮ್ಮ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಸೇರಿದಂತೆ ಉಳಿದ ಸವಲತ್ತುಗಳನ್ನು ದೊರ ಕಿಸಿಕೊಳ್ಳಬಹುದು ಎಂದು ನಾಯಕರು ಹೇಳಿದರು.

ಹಿಂದಿನ ಕಾಂತರಾಜ್ ವರದಿಯಲ್ಲಿ ಅನೇಕ ಲೋಪಗಳಿದ್ದವು, ನಮ್ಮ ಸಮುದಾಯವನ್ನು ಕೇವಲ 50 ಲಕ್ಷ ಜನ ಸಂಖ್ಯೆಗೆ ಸೀಮಿತಗೊಳಿಸಲಾಗಿತ್ತು ವಾಸ್ತವದಲ್ಲಿ ನಾವು 1.10 ಕೋಟಿಗಿಂತ ಹೆಚ್ಚಿದ್ದೇವೆ. ಸರ್ಕಾರ ಕೂಡ ಪ್ರಮಾಣಿಕ ಮತ್ತು ನೈಜ ಸಮೀಕ್ಷೆ ಕೈಗೊಳ್ಳಬೇಕು. ಲೋಪಗಳು ಉಂಟಾಗಿ ವ್ಯತ್ಯಾಸವಾದರೆ ಸಮಾಜ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ ಎಂದು ಎಚ್ಚರಿಸಿದ್ದಾರೆ.

ಸಮೀಕ್ಷೆ ಸಂದರ್ಭದಲ್ಲಿ ಒಕ್ಕಲಿಗ ಸಮುದಾಯದವರು ಜಾತಿ ಕಾಲಂ 9, 10, 11ರಲ್ಲಿ ಏನೇ ಇದ್ದರೂ ಒಕ್ಕಲಿಗ ಎಂದೇ ಬರೆಸಬೇಕು, ಒಕ್ಕಲಿಗ ಜನಾಂಗದ ಕೋಡ್ 1541 ನಮೂದಿಸಬೇಕು, ಅಗತ್ಯವಿದ್ದರೆ ಮಾತ್ರ ತಮ್ಮ ತಮ್ಮ ಉಪ ಪಂಗಡಗಳನ್ನು ಬರೆಸಬೇಕು ಎಂದರು.

ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕಾಂತರಾಜು ಅವಧಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಶೇ.30ರಿಂದ 40ರಷ್ಟು ಸಮೀಕ್ಷೆ ಆಗಿರಲಿಲ್ಲ. ಹಾಗಾಗಿ ಆ ವರದಿ ಬಗ್ಗೆ ವಿರೋಧ ವ್ಯಕ್ತವಾಗಿತ್ತು. ಜನರ ಭಾವನೆಗೆ ಸರ್ಕಾರ ಸ್ಪಂದಿಸಿ ಹೊಸದಾಗಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ಅವಕಾಶ ಕಲ್ಪಿಸಿರುವುದನ್ನು ಸ್ವಾಗತಿಸುತ್ತೇವೆ.

ಒಕ್ಕಲಿಗರ ಜಾತಿ ಜೊತೆಗೆ ವಿವಿಧ ಧರ್ಮ, ಜಾತಿಗಳನ್ನು ಸೇರಿಸಿರುವುದು ಅಸಮಾಧಾನ, ವೈರುಧ್ಯಕ್ಕೆ ಕಾರಣವಾಗಿದೆ, ಜಾತಿಗಣತಿ ಬಗ್ಗೆ ಮಠದ ಭಕ್ತರು ಹಾಗೂ ಸಮುದಾಯದವರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಎಲ್ಲಾ ಜನಪ್ರತಿನಿಧಿಗಳಿಗೆ ಈ ವಿಚಾರವನ್ನು ಮನದಟ್ಟು ಮಾಡಲಾಗಿದೆ.

ಕೇಂದ್ರದ್ದೇ ಅಧಿಕೃತ: ರಾಜ್ಯ ಸರ್ಕಾರಕ್ಕೆ ಜನಗಣತಿ ಮಾಡುವ ಅಧಿಕಾರವಿಲ್ಲ. ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ಮಾತ್ರ ಸಮೀಕ್ಷೆ ಮಾಡಬೇಕು ಎಂಬುದು ತಮಗಿರುವ ಮಾಹಿತಿ. ಕೇಂದ್ರ ಸರ್ಕಾರ ಜನಗಣತಿ ನಡೆಸಲಿದ್ದು ಅದು ಅಧಿಕೃತವಾಗಲಿದೆ ಎಂದರು. ಸಮುದಾಯದ ಜನಪ್ರತಿನಿಧಿಗಳಿಗೆ ಸರ್ಕಾರದಲ್ಲಿ ಸಮುದಾಯದ ದನಿಯಾಗುವಂತೆ ನಿರ್ದೇಶನ ಕೊಡಲಾಗಿದೆ. ಅದಕ್ಕೆ ಸೂಕ್ತ ಪ್ರತಿಕ್ರಿಯೆಯೂ ವ್ಯಕ್ತವಾಗುತ್ತದೆ ಎಂಬ ವಿಶ್ವಾಸವಿದೆ ಎಂದರು.

ಗೊಂದಲ ಸರಿಯಲ್ಲ: ಸ್ಫಟಿಕಪುರಿ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಮಾತನಾಡಿ, ಹೊಸ ಹೊಸ ಜಾತಿಗಳನ್ನು ಸೃಷ್ಟಿಸಿ ಗೊಂದಲ ಮೂಡಿಸಿರುವುದು ಸರಿಯಲ್ಲ ಎಂದರು. ಹಿಂದುಳಿದ ವರ್ಗಗಳ ಆಯೋಗ ಬಿಡುಗಡೆ ಮಾಡಿರುವ ಪಟ್ಟಿಯಲ್ಲಿ ಹೊಸ ಜಾತಿಯ ಹೆಸರುಗಳು ಪ್ರಕಟವಾಗಿವೆ. ಅಲ್ಲದೆ, ಒಕ್ಕಲಿಗ ಸಮುದಾಯದ ಜೊತೆ ಧರ್ಮದ ಹೆಸರು ತಳುಕು ಹಾಕಲಾಗಿದೆ, ಇದಕ್ಕೆ ನಮ್ಮ ತೀವ್ರ ಆಕ್ಷೇಪವಿದೆ. ಯಾವುದೇ ಜಾತಿ, ಧರ್ಮ ಪ್ರಕಟವಾಗಬೇಕಾದರೆ ಆಯೋಗಕ್ಕೆ ಅರ್ಜಿ ಸಲ್ಲಿಸಿ, ಆಯೋಗದಲ್ಲಿ ಚರ್ಚಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು. ಅದನ್ನು ಗೆಜೆಟ್‌ನಲ್ಲಿ ಪ್ರಕಟಿಸಬೇಕು, ಈ ರೀತಿಯ ಯಾವ ಪ್ರಕ್ರಿಯೆಗಳೂ ನಡೆದಿಲ್ಲ. ಸಾವಿರಾರು ಅಹವಾಲು, ಆಕ್ಷೇಪಗಳನ್ನು ಆಯೋಗಕ್ಕೆ ಸಲ್ಲಿಸಲಾಗಿದ್ದರೂ ಸಮಂಜಸ ಉತ್ತರ ನೀಡದೇ ಏಕಪಕ್ಷೀಯವಾಗಿ ತರಾತುರಿಯಲ್ಲಿ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ. ನಮ್ಮ ಜನಾಂಗದವರು ಮುಗ್ಧರು, ಅನಕ್ಷರಸ್ಥರಿದ್ದು, ಅವರಲ್ಲಿ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ. ಎಲ್ಲರ ಅಭಿಪ್ರಾಯವನ್ನು ಆಯೋಗ ಗೌರವಿಸಬೇಕು ಎಂದರು.

ಇದಕ್ಕೂ ಮೊದಲು ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ಸಚಿವರು, ಸಂಸದರು, ಶಾಸಕರು ಹಾಗೂ ಮುಖಂಡರನ್ನು ಒಳಗೊಂಡ ಸಭೆಯಲ್ಲಿ ಸಮೀಕ್ಷಾ ವೇಳೆ ಒಕ್ಕಲಿಗ ಎಂದೇ ನಮೂದಿಸುವ ತೀರ್ಮಾನ ಕೈಗೊಳ್ಳಲಾಯಿತು.

ಜಾತಿ ಗಣತಿ ಮಹತ್ವವನ್ನು ಸಮಾಜದ ಬಂಧುಗಳಿಗೆ ತಿಳಿಸಿ, ಅವರೂ ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಒಕ್ಕಲಿಗ ಎಂದೇ ಬರೆಸುವಂತೆ ರಾಜಕಾರಣಿಗಳು, ಸಂಘಟನೆಗಳು ಮತ್ತು ಮುಖಂಡರು ಪ್ರಮುಖ ಪಾತ್ರ ವಹಿಸಬೇಕೆಂಬ ನಿರ್ಣಯ ಕೈಗೊಳ್ಳಲಾಯಿತು. ರಾಜ್ಯ ಒಕ್ಕಲಿಗರ ಸಂಘ ಸಂಪೂರ್ಣ ಹೊಣೆ ಹೊತ್ತು, ಸಮಾಜದ ಮನೆ–ಮನೆಗೂ ಇಂದಿನ ಮಾಹಿತಿ ತಲುಪಿಸುವಂತೆ ಸಭೆಯಲ್ಲಿ ಭಾಗವಹಿಸಿದ ಮಠಾಧೀಶರು ಸೂಚಿಸಿದರು.

ಡಿಕೆಶಿ–ಹೆಚ್‌ಡಿಕೆ ಸಮಾಗಮ

ಒಕ್ಕಲಿಗ ಸಮುದಾಯಕ್ಕೆ ಸೇರಿದ ಸಚಿವರು, ಶಾಸಕರು, ಸಂಸದರು ಹಾಗೂ ಮುಖಂಡರ ಸಭೆಯನ್ನು ಆದಿಚುಂಚನಗಿರಿ ಮಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ ಆಯೋಜಿಸಿದ್ದರು. ಸ್ವಾಮೀಜಿ ಕರೆದ ಸಭೆಗೆ ಕುಮಾರಸ್ವಾಮಿ, ಶಿವಕುಮಾರ್ ಅಲ್ಲದೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಸಚಿವರಾದ ಚಲುವರಾಯಸ್ವಾಮಿ, ಡಾ.ಸುಧಾಕರ್ ಸೇರಿದಂತೆ ಸಮಾಜದ ಬಹುತೇಕ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಅನಾರೋಗ್ಯ ಕಾರಣದಿಂದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಸಭೆಗೆ ಹಾಜರಾಗಿರಲಿಲ್ಲ. ಸಿದ್ದರಾಮಯ್ಯ ಬಣದಲ್ಲಿ ಗುರುತಿಸಿಕೊಂಡಿರುವ ಸಚಿವರಾದ ಕೃಷ್ಣಬೈರೇಗೌಡ ಹಾಗೂ ಕೆ.ವೆಂಕಟೇಶ್ ಅವರುಗಳೂ ಮಠದ ಸಭೆಗೆ ಗೈರುಹಾಜರಾಗಿದ್ದರು. ಸಭೆಯಲ್ಲಿ ಭಾಗಿಯಾಗಿದ್ದರೂ ಕುಮಾರಸ್ವಾಮಿ ಹಾಗೂ ಶಿವಕುಮಾರ್ ಒಬ್ಬರನ್ನೊಬ್ಬರು ಮುಖ ಕೊಟ್ಟು ನೋಡುವ, ಇಲ್ಲವೇ ಮಾತನಾಡಿಸುವ ಗೋಜಿಗೆ ಹೋಗಲಿಲ್ಲ. ಸ್ವಾಮೀಜಿ ಬಲಭಾಗದಲ್ಲಿ ಕುಮಾರಸ್ವಾಮಿ, ಸದಾನಂದಗೌಡ, ಅಶೋಕ್, ಅಶ್ವತ್ಥನಾರಾಯಣ, ನಿಖಿಲ್ ಕುಮಾರಸ್ವಾಮಿ ಕುಳಿತಿದ್ದರೆ, ಸ್ವಾಮೀಜಿ ಎಡಭಾಗದಲ್ಲಿ ಶಿವಕುಮಾರ್, ಚಲುವರಾಯಸ್ವಾಮಿ, ಡಾ.ಸುಧಾಕರ್ ಕುಳಿತಿದ್ದರು.

ತಾತ್ಕಾಲಿಕ ವೇಳಾಪಟ್ಟಿ ಪ್ರಕಟ

ಮಾರ್ಚ್ 17ರಂದು ಪರೀಕ್ಷೆಗಳು ಮುಕ್ತಾಯಗೊಳ್ಳಲಿವೆ. ದ್ವಿತೀಯ ಪಿಯುಸಿ ಪರೀಕ್ಷೆ–2ರ ತಾತ್ಕಾಲಿಕ ವೇಳಾಪಟ್ಟಿ ಪ್ರಕಾರ, 2026ರ ಏಪ್ರಿಲ್ 25ರಂದು ಪರೀಕ್ಷೆ ಶುರುವಾಗಿ, ಮೇ 9ರಂದು ಕೊನೆಗೊಳ್ಳಲಿದೆ.

ದ್ವಿತೀಯ ಪಿಯುಸಿ ಪರೀಕ್ಷೆಯ ನಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆ 2026ರ ಮಾರ್ಚ್ 18ರಂದು ಆರಂಭವಾಗಿ ಏಪ್ರಿಲ್ 1ರಂದು ಕೊನೆಗೊಳ್ಳಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ತಾತ್ಕಾಲಿಕ ವೇಳಾಪಟ್ಟಿಯಂತೆ ಮೇ 18ರಂದು ಪರೀಕ್ಷೆ ಆರಂಭವಾಗಿ ಮೇ 25 ರಂದು ಕೊನೆಗೊಳ್ಳಲಿದೆ.

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯ ಜಾಲತಾಣ www.kseab.karnataka.gov.in ವೇಳಾಪಟ್ಟಿಯನ್ನು ಪ್ರಕಟಿಸಲಾಗಿದ್ದು ಈ ತಾತ್ಕಾಲಿಕ ವೇಳಾಪಟ್ಟಿಗೆ ವಿದ್ಯಾರ್ಥಿಗಳು, ಪೋಷಕರು ಮತ್ತು ಸಾರ್ವಜನಿಕರಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಸೆಪ್ಟೆಂಬರ್ 20ರಿಂದ ಅಕ್ಟೋಬರ್ 9ರವರೆಗೆ ಕಾಲಾವಕಾಶ ನೀಡಿದೆ. ಆಕ್ಷೇಪಣೆಗಳನ್ನು ಇ–ಮೇಲ್ ಮೂಲಕ chairpersonkseeb@gmail.comಗೆ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಮಾನ ಅವಕಾಶಕ್ಕೆ ಸಮೀಕ್ಷೆ

ಎಂದರಲ್ಲದೆ, ಸಮೀಕ್ಷೆಗೆ ಯಾವುದೇ ಸಚಿವರು ವಿರೋಧ ವ್ಯಕ್ತಪಡಿಸಿಲ್ಲ. ಸಮಾಜದಲ್ಲಿ ಸಮಾನತೆ ತರಲು ಬಡವರಿಗೆ ಸರ್ಕಾರಿ ಯೋಜನೆಗಳಲ್ಲಿ ಆದ್ಯತೆ ನೀಡಬೇಕಾಗುತ್ತದೆ ಎಂದರು.

ಸಮೀಕ್ಷೆಯ ನಿರ್ಧಾರವನ್ನು ಮರುಪರಿಶೀಲಿಸಲು ಸೂಚನೆ ನೀಡುವಂತೆ ರಾಜ್ಯಪಾಲರಿಗೆ ಬಿಜೆಪಿಯವರು ಮನವಿ ಸಲ್ಲಿಸಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಸಮೀಕ್ಷೆಯ ವಿಚಾರದಲ್ಲಿ ಬಿಜೆಪಿಯು ರಾಜಕೀಯ ಮಾಡುತ್ತಿದೆ. ಸಮೀಕ್ಷೆಯ ವಿಚಾರದಲ್ಲಿ ಜಾತಿ ಒಡೆಯುವ ಪ್ರಶ್ನೆಯೇ ಇಲ್ಲ ಎಂದರು.

ಆಳಂದದ ಮತಗಳ್ಳತನ ಬಗ್ಗೆ ಎಸ್‌ಐಟಿ ತನಿಖೆ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ಮತಗಳ್ಳತನದ ಬಗ್ಗೆ ಮಾಡಿರುವ ಆರೋಪದ ಕುರಿತ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಹುಲ್ ಗಾಂಧಿಯವರು ಅಳಂದ ಕ್ಷೇತ್ರದಲ್ಲಿ ಸುಮಾರು 6000 ಮತದಾರರ ಹೆಸರನ್ನು ಕೈಬಿಟ್ಟಿರುವ ಮತಗಳ್ಳತನದ ವಿಚಾರ ವನ್ನು ಉಲ್ಲೇಖಿಸಿದ್ದು, ಇದು ಸತ್ಯವಾಗಿದೆ. ಆಳಂದದಲ್ಲಿರುವ ಮತಗಳ್ಳತನ ಪ್ರಕರಣದ ಬಗ್ಗೆ ಎಸ್‌ಐಟಿ ತನಿಖೆ ನಡೆಯಲಿದೆ ಎಂದರು.

ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸಲು ಬಿಜೆಪಿ ಶಿಫಾರಸ್ಸು ಮಾಡಿತ್ತು: ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸುವ ಬಗ್ಗೆ ಪ್ರತಿಕ್ರಯಿಸಿ, ಕುರುಬ ಸಮಾಜವನ್ನು ಎಸ್‌ಟಿಗೆ ಸೇರಿಸುವ ಶಿಫಾರಸ್ಸನ್ನು ಹಿಂದಿನ ಬಿಜೆಪಿ ಸರ್ಕಾರವೇ ಮಾಡಿತ್ತು. ಆದರೆ ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರ ವಾಪಸ್ಸು ಕಳಿಸಿದ್ದು, ಅದಕ್ಕೆ ವಿವರಣೆಯನ್ನು ಸರ್ಕಾರ ನೀಡಲಿದೆ. ಯಾವುದೇ ಸಮುದಾಯವನ್ನು ಎಸ್‌ಟಿಗೆ ಸೇರಿಸುವ ನಿರ್ಧಾರವನ್ನು ಕೇಂದ್ರ ಸರ್ಕಾರವೇ ತೆಗೆದುಕೊಳ್ಳುತ್ತದೆ ಎಂದರು.

ಕ್ರಿಶ್ಚಿಯನ್ ಧರ್ಮದಡಿ ವಿವಿಧ ಜಾತಿಗಳ ಉಲ್ಲೇಖ ಕೈಬಿಡಲಾಗಿದೆ

ಗದಗ, ಸೆ.20– ಕ್ರಿಶ್ಚಿಯನ್ ಧರ್ಮದಡಿ ವಿವಿಧ ಜಾತಿಗಳ ಉಲ್ಲೇಖವನ್ನು ತೋರಿಸುವ ಕಾಲಂ ಅನ್ನು ತೆಗೆದುಹಾಕಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ಬಿಜೆಪಿ ಈ ವಿಷಯದಲ್ಲಿ 'ರಾಜಕೀಯ ಮಾಡುತ್ತಿದೆ' ಎಂದು ಆರೋಪಿಸಿದರು. ಉಪಜಾತಿ ವರ್ಗದಲ್ಲಿ 'ಕ್ರಿಶ್ಚಿಯನ್' ಧರ್ಮದಡಿ ವಿವಿಧ ಜಾತಿಗಳನ್ನು ಉಲ್ಲೇಖದ ಗೊಂದಲದ ಬಗ್ಗೆ ಪ್ರತಿಕ್ರಿಯಿಸಿದ ಸಿಎಂ ಸಿದ್ದರಾಮಯ್ಯ, ಈಗ ಅದನ್ನು ತೆಗೆದುಹಾಕ ಲಾಗಿದೆ ಎಂದರು. ಅದನ್ನು ತೆಗೆದುಹಾಕಿದ್ದು ನಾನಲ್ಲ. ಹಿಂದುಳಿದ ವರ್ಗಗಳ ಆಯೋಗ. ಆಯೋಗವು ಶಾಸನಬದ್ಧ ಸಂಸ್ಥೆಯಾಗಿದ್ದು, ಸಮೀಕ್ಷೆ ನಡೆಸಲು ಮಾರ್ಗಸೂಚಿಗಳನ್ನಷ್ಟೇ ಸರ್ಕಾರ ನೀಡಿದೆ. 1,75,000 ಶಿಕ್ಷಕರನ್ನು ಸಮೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿದ್ದಾರೆ. ಒಬ್ಬ ಶಿಕ್ಷಕರು ತಲಾ 150 ಮನೆಗಳಿಂದ ಮಾಹಿತಿ ಸಂಗ್ರಹಿಸಲಿದ್ದು, ಈ ಸಮೀಕ್ಷಾ ಕಾರ್ಯ 15 ದಿನಗಳ ಕಾಲ ನಡೆಯಲಿದೆ. ಸಮೀಕ್ಷೆಯಲ್ಲಿ ಧರ್ಮ, ಜಾತಿ, ಉಪಜಾತಿ, ಶಿಕ್ಷಣ, ಉದ್ಯೋಗ ಸೇರಿದಂತೆ ಹಲವು ಮಾಹಿತಿಗಳನ್ನು ಕಲೆಹಾಕಲಿದ್ದಾರೆ ಎಂದರು.

ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಇಂದು ಸಿದ್ದರಾಮಯ್ಯ ಮೈಸೂರು ಪ್ರವಾಸ



ಮೈಸೂರು, ಸೆ.20(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಉದ್ಘಾಟನೆ ಸೇರಿದಂತೆ ಇತರೆ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಸೆಪ್ಟೆಂಬರ್ 21) ಮೈಸೂರಿಗೆ ಆಗಮಿಸಲಿದ್ದಾರೆ.


ನಾಳೆ ಸಂಜೆ 4 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಟು, 4.25 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ನಾಡಿದ್ದು (ಸೆಪ್ಟೆಂಬರ್ 22) 10.10 ಗಂಟೆಗೆ ಚಾಮುಂಡಿಬೆಟ್ಟದಲ್ಲಿ ನಡೆಯುವ ಮೈಸೂರು ದಸರಾ ಉದ್ಘಾಟನಾ ಸಮಾರಂಭದಲ್ಲಿ ಸಿದ್ದರಾಮಯ್ಯ ಪಾಲ್ಗೊಳ್ಳುವರು. ಮಧ್ಯಾಹ್ನ 12.30 ಗಂಟೆಗೆ ಕುಪ್ಪಣ್ಣ ಪಾರ್ಕ್ (ನಿಶಾದ್ ಬಾಗ್)ನಲ್ಲಿ ಆರಂಭವಾಗುವ ದಸರಾ ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸುವರು. ಸಂಜೆ 4 ಗಂಟೆಗೆ ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಸರಾ ಕುಸ್ತಿ ಪಂದ್ಯಾವಳಿಯನ್ನು ಉದ್ಘಾಟನೆ ಮಾಡಲಿದ್ದಾರೆ.

ಮೈಸೂರು ಅರಮನೆಯಲ್ಲಿ ಸಂಜೆ 5 ಗಂಟೆಗೆ ನಡೆಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ, ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡುವರು. ನಂತರ ಸಂಜೆ 5.30 ಗಂಟೆಗೆ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆಯುವ ರಾಜ್ಯ ದಸರಾ ಸಿಎಂ ಕಪ್ ಕ್ರೀಡಾಕೂಟಕ್ಕೆ ಸಿದ್ದರಾಮಯ್ಯ ಚಾಲನೆ ನೀಡುವರು.

ತರುವಾಯ ರಾತ್ರಿ 7 ಗಂಟೆಗೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದಲ್ಲಿ ಆರಂಭವಾಗುವ ದಸರಾ ವಸ್ತು ಪ್ರದರ್ಶನವನ್ನು ಉದ್ಘಾಟಿಸುವರು. ಮೈಸೂರು ದಸರಾದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ನಂತರ ಸಿದ್ದರಾಮಯ್ಯ ಸೋಮವಾರ ರಾತ್ರಿ 9 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ಬೆಂಗಳೂರಿಗೆ ತೆರಳುವರು.

ಪ್ರಧಾನಿ ಮೋದಿ ದೇಶದ ಪ್ರತಿಷ್ಠೆ ಹೆಚ್ಚಿಸಿದ್ದಾರೆ

- ಮಾಜಿ ಮೇಯರ್ ಸಂದೇಶ್ ಸ್ವಾಮಿ ಗುಣಗಾನ
- ಕ್ಯಾತಮಾರನಹಳ್ಳಿಯಲ್ಲಿ ಮೋದಿ ಹುಟ್ಟುಹಬ್ಬ ಆಚರಣೆ


ಮೈಸೂರಿನ ಕ್ಯಾತಮಾರನ ಹಳ್ಳಿಯಲ್ಲಿ ನಡೆದ ಪ್ರಧಾನಿ ಮೋದಿ ಹುಟ್ಟುಹಬ್ಬ ಆಚರಣೆ ವೇಳೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಹಾಗೂ ಮುಖಂಡರು ಗಿಡ ನೆಟ್ಟು, ನೀರೆರೆದರು.

ಮೈಸೂರು,ಸೆ.20–ವಿಶ್ವ ಮಟ್ಟದಲ್ಲಿ ಭಾರತದ ಕೀರ್ತಿ ಹೆಚ್ಚುವಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಕೊಡುಗೆ ಅಪಾರವಾಗಿದೆ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ ಹೇಳಿದ್ದಾರೆ.

ಮೈಸೂರಿನ ಕ್ಯಾತಮಾರನಹಳ್ಳಿಯ ನರೇಂದ್ರ ಮೋದಿ ಸೇವಾ ಟ್ರಸ್ಟ್, ಶ್ರೀ ಮಲೆ ಮಹದೇಶ್ವರ ಸಮಿತಿ ಹಾಗೂ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಸಹಯೋಗದಲ್ಲಿ ಆಯೋಜಿಸಿದ್ದ ಪ್ರಧಾನಿ ಮೋದಿಯವರ ಹುಟ್ಟುಹಬ್ಬ ಆಚರಣೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಭಾರತವು ಅನೇಕ ಪ್ರಧಾನ ಮಂತ್ರಿಗಳ ಆಡಳಿತ ನೋಡಿದೆ. ಎಲ್ಲರೂ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಆದರೆ ಮೋದಿ ಅವರು ಪ್ರಧಾನಿಯಾದ ನಂತರ ಭಾರತ ಪ್ರಗತಿ ಪಥದಲ್ಲಿ ವೇಗವಾಗಿ ಸಾಗಿದೆ. ಜಗತ್ತಿನ ಹಿರಿಯಣ್ಣ ಎನ್ನಿಸಿಕೊಂಡಿದ್ದ ಅಮೇರಿಕಾವೂ ಇಂದು ಭಾರತದತ್ತ ತಿರುಗಿ ನೋಡುವಂತಾಗಿದೆ. ಆರ್ಥಿಕತೆಯಲ್ಲೂ ಮಹತ್ವದ ಸಾಧನೆಯಾಗಿದೆ. ಭಾರತ ಅಭಿವೃದ್ಧಿ ರಾಷ್ಟ್ರಗಳ ಸಾಲಿನತ್ತ ಮುನ್ನುಗ್ಗುತ್ತಿದೆ ಎಂದರು.

ಪ್ರಧಾನಿ ಮೋದಿ ಅವರು ತಮ್ಮ 11 ವರ್ಷಗಳ ಆಡಳಿತದಲ್ಲಿ ಸಾಕಷ್ಟು ಯೋಜನೆಗಳನ್ನು ನೀಡಿದ್ದಾರೆ. ಭಾರತದ ಸಂಸ್ಕೃತಿಯ ಮಹತ್ವವನ್ನು ಜಗತ್ತಿಗೇ ಸಾರುತ್ತಿದ್ದಾರೆ. ಆಧುನಿಕ ಹಾಗೂ ತಾಂತ್ರಿಕ ಕ್ಷೇತ್ರಗಳ ಅಭಿವೃದ್ಧಿಗೆ ಹಲವು ಹೊಸ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಜನಪ್ರಿಯ ನಾಯಕ ಮೋದಿ ಅವರ ನೇತೃತ್ವದಲ್ಲಿ ನಮ್ಮ ದೇಶ ಮತ್ತಷ್ಟು ಅಭಿವೃದ್ಧಿ ಕಾಣುವ ವಿಶ್ವಾಸ ದೇಶದ ಜನರಲ್ಲಿದೆ ಎಂದು ಹೇಳಿದರು.

ಮೈಸೂರು ದಸರಾ ಮಹೋತ್ಸವ-2025

ಕಿರುನಾಟಕ ಮುಖೇನ ಸ್ವಚ್ಛತೆ ಜಾಗೃತಿ

ದಸರಾ ಸ್ವಚ್ಛತಾ ಕಾರ್ಯಕ್ಕೆ ಚಾಲನೆ

● 15 ದಿನಗಳ ಅವಧಿಗೆ ಹೆಚ್ಚುವರಿ 500 ಕಾರ್ಮಿಕರ ನಿಯೋಜನೆ ● ಹಗಲು-ರಾತ್ರಿ ಪಾಳಿಯಲ್ಲಿ ಸ್ವಚ್ಛತಾ ಕಾರ್ಯ



ಸ್ವಚ್ಛತಾ ಕಾರ್ಯಕ್ಕೆ ಬಳಸುವ ವಾಹನಗಳಿಗೆ ಹಸಿರುನಿಶಾನೆ ತೋರಿಸಿ, ದಸರಾ ಸ್ವಚ್ಛತಾ ಕಾರ್ಯಕ್ಕೆ ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಚಾಲನೆ ನೀಡಿದರು.

ಮೈಸೂರು,ಸೆ20(ಪಿಎಂ)- ದಸರಾ ಮಹೋತ್ಸವ 2025ರ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆ ಹಾಗೂ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ವತಿಯಿಂದ ದಸರಾ ಸ್ವಚ್ಛತಾ ಕಾರ್ಯಕ್ಕೆ ಶನಿವಾರ ಚಾಲನೆ ನೀಡಲಾಯಿತು.

ಮೈಸೂರು ಅರಮನೆ ಉತ್ತರದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸ್ವಚ್ಛತೆ ಕುರಿತು ಅರಿವು ಮೂಡಿಸುವ ಕಿರುನಾಟಕ ಪ್ರದರ್ಶನದೊಂದಿಗೆ ಚಾಲನೆ ನೀಡಲಾಯಿತು.

15 ದಿನಗಳ ಅವಧಿಗೆ ಸ್ವಚ್ಛತೆ ಕಾರ್ಯ ನಿರ್ವಹಿಸಲು ಹೆಚ್ಚುವರಿಯಾಗಿ 500 ಮಂದಿ ಕಾರ್ಮಿಕರನ್ನು ನೇಮಿಸಿ ಕೊಂಡಿದ್ದು (500 ಕಾರ್ಮಿಕರನ್ನು 4 ಪ್ಯಾಕೇಜ್‌ಗಳಲ್ಲಿ ವಿಂಗಡಿಸಲಾಗಿದೆ). ನಗರದ ಪ್ರಮುಖ ರಸ್ತೆಗಳಲ್ಲಿ ಹಗಲು ಹಾಗೂ ರಾತ್ರಿ ಪಾಳಿಯಲ್ಲಿ ಸ್ವಚ್ಛತಾ ಕಾರ್ಯ ನಡೆಯಲಿದೆ. ಜೊತೆಗೆ ದಸರಾ ಕಾರ್ಯಕ್ರಮಗಳು ನಡೆಯುವ ಸ್ಥಳಗಳಲ್ಲಿಯೂ ಸ್ವಚ್ಛತಾ ಕಾರ್ಯ ನಿರಂತರವಾಗಿ ನಡೆಯಲಿದೆ.

ಕಾರ್ಯಕ್ರಮದಲ್ಲಿ 'ನೀವು ಭಾರತದ ಅತ್ಯಂತ ಸ್ವಚ್ಛ ನಗರಗಳಲ್ಲಿ ಒಂದನ್ನು ಪ್ರವೇಶಿಸುತ್ತಿದ್ದೀರಿ-ಅದನ್ನು ಸ್ವಚ್ಛವಾಗಿಡಿ ಮತ್ತು ಹಸಿರಾಗಿಡಿ' ಎಂಬ ಪೋಸ್ಟರ್ ಅನ್ನು ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಉಪ ವಿಶೇಷಾಧಿಕಾರಿಯೂ ಆದ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಬಿಡುಗಡೆ ಮಾಡಿದರು. ಬಳಿಕ ಸ್ವಚ್ಛತಾ ಕಾರ್ಯಕ್ಕೆ ಬಳಸುವ ವಾಹನಗಳಿಗೆ ಹಸಿರು ನಿಶಾನೆ ತೋರಿಸಿ ದಸರಾ ಸ್ವಚ್ಛತಾ ಕಾರ್ಯಕ್ಕೆ ಚಾಲನೆ ನೀಡಿದರು.

ಸ್ವಚ್ಛತೆ ಕಾರ್ಯ ಜೊತೆ ಅರಿವು: ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಸ್ವಚ್ಛತೆ ಮತ್ತು ವ್ಯವಸ್ಥೆ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಮೈಸೂರು ಮಹಾನಗರ ಪಾಲಿಕೆ ಉಪಆಯುಕ್ತ (ಆಡಳಿತ) ಡಾ.ಎಂ.ದಾಸೇಗೌಡ, ಈ ಬಾರಿಯ ದಸರಾದಲ್ಲಿ ಸ್ವಚ್ಛತೆ ಕಾರ್ಯ ಹಾಗೂ ಸ್ವಚ್ಛತೆ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ಎರಡೂ ಜೊತೆಯಲ್ಲಿ ನಡೆಯಲಿವೆ ಎಂದು ತಿಳಿಸಿದರು.

ಇಡೀ ಮೈಸೂರಿನಲ್ಲಿ ಮುಖ್ಯ ಸ್ಥಳಗಳನ್ನು ಗುರುತಿಸಿದ್ದು, ಆ ಎಲ್ಲೆಡೆಯೂ ನಿರಂತರವಾಗಿ ಸ್ವಚ್ಛತೆಗೆ ಕ್ರಮ ವಹಿಸಲಾಗುತ್ತಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೇ, ದೇಶ-ವಿದೇಶಗಳಿಂದ ಸಾಕಷ್ಟು ಜನ ದಸರಾ ಹಿನ್ನೆಲೆಯಲ್ಲಿ ಮೈಸೂರಿಗೆ ಭೇಟಿ ನೀಡಲಿದ್ದಾರೆ. ಅವರಿಗೆಲ್ಲಾ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು ಮುಖ್ಯವಾಗುತ್ತದೆ. ಈ ಬಾರಿ ಸ್ವಚ್ಛತಾ ಸರ್ವೇಕ್ಷಣೆಯಲ್ಲಿಯೂ ಮೈಸೂರು ಸ್ಥಾನ ಪಡೆದ ಹಿನ್ನೆಲೆಯಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಪಾಲಿಕೆಯ ಪೌರಕಾರ್ಮಿಕರ ಜೊತೆಗೆ ಹೆಚ್ಚುವರಿ 500 ಕಾರ್ಮಿಕರು ಸೇರಿದಂತೆ 2 ಸಾವಿರ ಕಾರ್ಮಿಕರು ಸ್ವಚ್ಛತಾ ಕೆಲಸ ಮಾಡಲಿದ್ದಾರೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ 150 ಮಂದಿ ಸ್ವಚ್ಛತಾ ಕಾರ್ಯದ ಬಗ್ಗೆ ಮೇಲ್ವಿಚಾರಣೆ ನಡೆಸಲಿದ್ದೇವೆ. ನಗರದ ಸ್ವಚ್ಛತೆಗೆ ಪಾಲಿಕೆ ಕಟಿಬದ್ಧವಾಗಿ ಕಾರ್ಯ ನಿರ್ವಹಿಸಲಿದೆ ಎಂದರು.

ಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರ ಮೃತ್ಯುಂಜಯ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, 1,765 ಪಾಲಿಕೆ ಪೌರಕಾರ್ಮಿಕರು ಬೆಳಗಿನ ಅವಧಿಯಲ್ಲಿ ಬೆಳಗ್ಗೆ 6ರಿಂದ 2ರವರೆಗೆ ಕಾರ್ಯ ನಿರ್ವಹಿಸಲಿದ್ದಾರೆ. ಹೊರಗುತ್ತಿಗೆ ಆಧಾರದಲ್ಲಿ ತೆಗೆದುಕೊಂಡಿರುವ ಹೆಚ್ಚುವರಿ 500 ಕಾರ್ಮಿಕರ ಪೈಕಿ ಮಧ್ಯಾಹ್ನ 2ರಿಂದ ರಾತ್ರಿ 10ರವರೆಗೆ 150 ಕಾರ್ಮಿಕರು ಕೆಲಸ ಮಾಡಲಿದ್ದು, ಉಳಿದ ಕಾರ್ಮಿಕರು ರಾತ್ರಿ 10ರಿಂದ ಬೆಳಗ್ಗೆ 6ರವರೆಗೆ ಕೆಲಸ ನಿರ್ವಹಿಸಲಿದ್ದಾರೆ. ದಸರಾ ಕಾರ್ಯಕ್ರಮ ನಡೆಯುವ ಎಲ್ಲೆಡೆಯೂ ಸ್ವಚ್ಛತೆ ಕೆಲಸ ಮಾಡಲಿದ್ದಾರೆ. ಯುವ ದಸರಾ ಸ್ಥಳದಲ್ಲೂ ನಮ್ಮ ಕಾರ್ಮಿಕರು ಕೆಲಸ ಮಾಡಲಿದ್ದಾರೆ. ಸ್ವಯಂ ಸೇವಕರ ಮೂಲಕ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳು ನಡೆಯಲಿವೆ ಎಂದು ಮಾಹಿತಿ ನೀಡಿದರು.

ಸಮರ್ಪಕ ಸ್ವಚ್ಛತಾ ಕಾರ್ಯಕ್ಕೆ ಸೂಚನೆ: ಉದ್ಘಾಟನೆ ಬಳಿಕ ಗುತ್ತಿಗೆದಾರರ ಜೊತೆಗೆ ಮಾತನಾಡಿದ ನಗರ ಪಾಲಿಕೆ ಆಯುಕ್ತರು, ದಸರಾ ಮುಗಿರುವವರೆಗೂ ನಗರದ ಸ್ವಚ್ಛತೆಗಾಗಿ ಹೆಚ್ಚು ಶ್ರಮಿಸಬೇಕು. ಯಾವುದೇ ಕಾರಣಕ್ಕೂ ಕಾರ್ಮಿಕರು ಗೈರಾಗುವಂತಿಲ್ಲ. ಕಳೆದ ಬಾರಿ ಸ್ವಚ್ಛತಾ ಕಾರ್ಯದಲ್ಲಿ ಉಂಟಾದ ತೊಡಕು ಮರುಕಳಿಸಬಾರದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಕಿರುನಾಟಕ ಪ್ರದರ್ಶನ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಹಾಕಿದ್ದ ವೇದಿಕೆಯಲ್ಲಿ ಸ್ವಚ್ಛತೆ ಬಗ್ಗೆ ಕಿರುನಾಟಕ ಪ್ರದರ್ಶಿಸಿದ ಎಕ್ಸೆಲ್ ಪಬ್ಲಿಕ್ ಶಾಲೆ ಶಿಕ್ಷಕ ಹಾಗೂ ವಿದ್ಯಾರ್ಥಿ ವೃಂದವು, ಸ್ವಚ್ಛತೆ ಕಾಯ್ದುಕೊಳ್ಳುವ ಕುರಿತು ಸಂದೇಶ ಸಾರಿತು. ಹಾದಿಬೀದಿಯಲ್ಲಿ ಕಸ ಹಾಕುವುದರಿಂದ ಉಂಟಾಗುವ ದುಷ್ಪರಿಣಾಮಗಳು, ಸಾರ್ವಜನಿಕರು ಸ್ವಚ್ಛತೆ ಕಾಪಾಡಲು ಸಹಕರಿಸದೇ ಇದ್ದರೆ ಪೌರಕಾರ್ಮಿಕರು ಎದುರಿಸುವ ಸವಾಲುಗಳನ್ನು ನಾಟಕದಲ್ಲಿ ಅನಾವರಣಗೊಳಿಸಲಾಯಿತು. ಅಂಬಾರಿ ಹೊತ್ತ ಅಭಿಮನ್ಯು ಆನೆಯ ಚಿತ್ತಾರವನ್ನು ರಂಗೋಲಿಯಲ್ಲಿ ಮೂಡಿಸಿದ್ದು ನೆರೆದವರ ಗಮನ ಸೆಳೆಯಿತು. ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಾಜರಿದ್ದರು.



ಎಕ್ಸೆಲ್ ಪಬ್ಲಿಕ್ ಶಾಲೆ ಶಿಕ್ಷಕ ಹಾಗೂ ವಿದ್ಯಾರ್ಥಿ ತಂಡವು ಸ್ವಚ್ಛತೆ ಕುರಿತು ಕಿರುನಾಟಕ ಪ್ರದರ್ಶಿಸಿತು.

ಮೈಸೂರಲ್ಲಿ ಜೆಮಿನಿ ಸರ್ಕಸ್ ಆರಂಭ



ಜೆಮಿನಿ ಸರ್ಕಸ್‌ಗೆ ಶಾಸಕ ತನ್ವೀರ್ ಸೇಠ್ ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು, ಸೆ.20(ವಿವಿಹೆಚ್)- ಜನರಿಗೆ ಮನರಂಜನೆ, ಧೈರ್ಯ, ಉತ್ಸಾಹ ಮತ್ತು ಶಕ್ತಿ ತುಂಬುವ ಪ್ರೇರಣಾ ಕೆಲಸಗಳನ್ನು ಸರ್ಕಸ್ ಮಾಡುತ್ತದೆ ಎಂದು ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಹೇಳಿದರು.

ಮೈಸೂರಿನ ಮೃಗಾಲಯದ ಹಿಂಭಾಗ ಕಾರಂಜಿಕೆರೆ ಬಳಿಯ ಕುದುರೆ ಉದ್ಯಾನವನದಲ್ಲಿ ಶನಿವಾರ ದಸರಾ ಜೆಮಿನಿ ಸರ್ಕಸ್ ಉದ್ಘಾಟಿಸಿ ಅವರು ಮಾತನಾಡಿದರು.

ಅತ್ಯಂತ ಸಂತೋಷದಿಂದ ಸರ್ಕಸ್‌ಗೆ ಚಾಲನೆ ನೀಡಿದ್ದೇನೆ. ರಾಜ್ಯ ಸರ್ಕಸ್ ಆಯೋಜಕರ ಸಂಘದ ಉಪಾಧ್ಯಕ್ಷನಾಗಿ ಹೇಳುವುದಾದರೆ ಇಂದಿಗೂ ಇಂತಹ ಪ್ರದರ್ಶನಗಳು ಸಾಕಷ್ಟು ಸವಾಲುಗಳನ್ನು ಎದುರಿಸುತ್ತಿವೆ. ಈ ಹಿಂದೆ ಪ್ರಾಣಿಗಳನ್ನು ಸರ್ಕಸ್‌ನಲ್ಲಿ ಬಳಸಲಾಗುತ್ತಿತ್ತು. ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಪ್ರಾಣಿಗಳ ಬಳಕೆ ನಿಷೇಧವಾಗಿದೆ. ಇದರಿಂದ ಮನುಷ್ಯರು ಕಠಿಣ ವ್ಯಾಯಾಮಗಳ ಮೂಲಕ ತಮ್ಮ ಪ್ರಾಣದ ಹಂಗನ್ನು ತೊರೆದು ಪ್ರದರ್ಶನಗಳನ್ನು ಮಾಡುತ್ತಿದ್ದಾರೆ ಎಂದರು.

ಇಂತಹ ಕಾರ್ಯಕ್ರಮ ದಸರಾ ಸಂದರ್ಭದಲ್ಲಿ ಮೈಸೂರು ನಗರಲ್ಲಿ ಆಯೋಜನೆಯಾಗಿರುವುದು ಸಂತಸದ ಸಂಗತಿ. ಜನರಿಗೆ ಹೆಚ್ಚಿನ ಮನರಂಜನೆ ನೀಡುವ ಉದ್ದೇಶದಿಂದ ಸರ್ಕಸ್ ನಡೆಯುತ್ತಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.



ಜೆಮಿನಿ ಸರ್ಕಸ್‌ಗೆ ಪ್ರೇಕ್ಷಕ ಖುಷ್: ಜೆಮಿನಿ ಸರ್ಕಸ್‌ನಲ್ಲಿ ಕಲಾವಿದರು ವಿವಿಧ ಆಕರ್ಷಕ ಸಾಹಸ ಪ್ರದರ್ಶನಗಳ ನೀಡುವ ಮೂಲಕ ಪ್ರೇಕ್ಷಕರ ಎದೆ ಝಲ್ ಎನ್ನುವಂತಿವೆ. ಎತ್ತರದ ಉಯ್ಯಾಲೆಯಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರುವುದು, ಇದರೊಂದಿಗೆ ಕ್ಲೌನ್ ಚೇರ್, ಚೈನೀಸ್ ಶೇಕಿಂಗ್ ಲ್ಯಾಡರ್, ರಷ್ಯನ್ ವೇಯ್ಟ್ ಲಿಫ್ಟಿಂಗ್, ಕಾಮಿಕ್ ಜಗ್ಲಿಂಗ್, ನೃತ್ಯ, ಸೈಕಲ್ ಡ್ರಿಫ್ಟ್, ಗ್ರೂಪ್ ಸೈಕಲ್, ಮೋಟಾರ್ ಬೈಕ್ ಸಾಹಸ ಪ್ರದರ್ಶನ ಕಪ್ಪೆ ರೂಪಧಾರಿಯಿಂದ ವಿವಿಧ ಬಗೆಯ ಯೋಗಾಸನಗಳು, ಆಫ್ರಿಕಾ ಕಲಾವಿದರ ಸಾಹಸ ಪ್ರದರ್ಶನಕ್ಕೆ ನೆರೆದಿದ್ದ ಪ್ರೇಕ್ಷಕ ಸಮೂಹ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿತು.

ಈ ವೇಳೆ ಜೆಮಿನಿ ಸರ್ಕಸ್‌ನ ಮ್ಯಾನೇಜರ್ ಸುರೇಶ್, ಪ್ರೋಮೋಟರ್ ಪ್ರೇಮನಾಥ್, ಸರ್ಕಸ್ ಫ್ಯಾನ್ಸ್ ಅಸೋಷಿಯೇಶನ್ ಅಧ್ಯಕ್ಷ ನಾಗೇಶ್, ಜೆಮಿನಿ ಸರ್ಕಸ್‌ನ ಕಲಾವಿದರು ಉಪಸ್ಥಿತರಿದ್ದರು.

> ಇಂದಿನಿಂದ(ಸೆ.20) 40 ದಿನಗಳ ವರೆಗೆ ಸರ್ಕಸ್ ನಡೆಯಲಿದ್ದು, ಪ್ರತಿದಿನ ಮಧ್ಯಾಹ್ನ 1 ಗಂಟೆಗೆ, ಸಂಜೆ 4 ಗಂಟೆಗೆ ಮತ್ತು ಸಂಜೆ 7 ಗಂಟೆಗೆ ದಿನದಲ್ಲಿ ಮೂರು ಪ್ರದರ್ಶನವಿರಲಿದೆ. ಟಿಕೆಟ್ ದರ 150 ರೂ., 250 ರೂ., 300 ರೂ. ಮತ್ತು 400 ರೂ. ಗಳಾಗಿವೆ. ಜೊತೆಗೆ ಮುಂಗಡವಾಗಿ ಬುಕ್‌ಮೈಶೋ ಮೂಲಕ ಆನ್‌ಲೈನ್‌ನಲ್ಲಿ ಟಿಕೆಟ್ ಕಾಯ್ದಿರಿಸಬಹುದಾಗಿದೆ. ಇನ್ನು ಸರ್ಕಸ್ ಆವರಣದಲ್ಲಿ ಮೊದಲ ಬಾರಿಗೆ ಝೀಬ್ರಾ, ಜಿಂಕೆ, ಜಿರಾಫೆ, ನೀರಾನೆ, ಕಾಂಗರೂ ಮತ್ತು ಸಿಂಹದ ಪ್ರತಿಕೃತಿಗಳ ರೋಬೋಟ್‌ಗಳು ಹೆಚ್ಚಿನ ಆಕರ್ಷಣೆಯಾಗಿವೆ.

ದಸರಾ ವೇಳೆ ಹೊರರಾಜ್ಯದ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯ್ತಿ; ಸರ್ಕಾರ ಆದೇಶ



ಮೈಸೂರು, ಸೆ.20(ಎಂಟಿವೈ)- ದಸರಾ ಮಹೋತ್ಸವದ ವೇಳೆ ಹೊರರಾಜ್ಯದ ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಸೆ.22ರಿಂದ ಅ.2ರವರೆಗೆ ಮೈಸೂರು ನಗರ ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕು ಪ್ರವೇಶಿಸುವ ಹೊರರಾಜ್ಯದ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಿ ಆದೇಶಿಸಿದೆ.

ನವರಾತ್ರಿ ವೇಳೆ ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುವ ಮೈಸೂರು ನಗರದ ಸೌಂದರ್ಯ ಹಾಗೂ ದಸರಾ ಮಹೋತ್ಸವ ಕಾರ್ಯಕ್ರಮವನ್ನು ವೀಕ್ಷಿಸಲು ಬರುವ ಅನ್ಯ ರಾಜ್ಯದ ಪ್ರವಾಸಿಗರ ಸಂಖ್ಯೆ ಹೆಚ್ಚಾಗುವುದರಿಂದ ರಾಜ್ಯ ಸರ್ಕಾರ 11 ದಿನಗಳ ಕಾಲ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಲು ನಿರ್ಧರಿಸಿದೆ. ಈ ಸಂಬಂಧ ಸರ್ಕಾರದ ಅಧೀನ ಕಾರ್ಯದರ್ಶಿ ವಿ.ಎಸ್.ಪುಷ್ಪ ಅಧಿಸೂಚನೆ ಹೊರಡಿಸಿದ್ದು, ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ 1957 (ಕರ್ನಾಟಕ ಕಾಯ್ದೆ 35/1957) ಕಲಂ 16(1)ರ ಅಡಿಯಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಹೊರರಾಜ್ಯಗಳಲ್ಲಿ ನೋಂದಾಯಿಸಲ್ಪಟ್ಟ ಪ್ರವಾಸಿ ವಾಹನಗಳು ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 88ರ ಸಬ್ ಸೆಕ್ಷನ್(9)ರ ಕೇಂದ್ರ ಕಾಯ್ದೆ 59/88ರ ಅನುಸಾರ ವಿಶೇಷ ರಹದಾರಿ ಪಡೆದು ಸೆ.22ರಿಂದ ಅ.2ರವರೆಗೆ ಒಟ್ಟು 11 ದಿನಗಳ ಕಾಲ ಮೈಸೂರು ಹಾಗೂ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಜಲಾಶಯ ವೀಕ್ಷಣೆಗೆ ತೆರಿಗೆ ವಿನಾಯಿತಿ ನೀಡಲು ನಿರ್ಧರಿಸಿ, ಆದೇಶ ಹೊರಡಿಸಿದೆ. ಸರ್ಕಾರದ ಈ ಆದೇಶ ಪ್ರವಾಸಿ ವಾಹನಗಳಿಗೆ ಮಾತ್ರ ಅನ್ವಯವಾಗಲಿದ್ದು, ವಾಣಿಜ್ಯ ಉದ್ದೇಶದ ಸರಕು ವಾಹನಗಳಿಗೆ ಅನ್ವಯಿಸುವುದಿಲ್ಲ.



> ದಸರಾ ಹಿನ್ನೆಲೆಯಲ್ಲಿ ಹೊರ ರಾಜ್ಯದ ಪ್ರವಾಸಿ ವಾಹನಗಳಿಗೆ ಸೆ.22ರಿಂದ ಅ.2ರವರೆಗೆ ತೆರಿಗೆ ವಿನಾಯಿತಿ ನೀಡಿರುವುದು ಶ್ಲಾಘನೀಯ. ಪ್ರವಾಸಿಗರನ್ನು ಸೆಳೆಯುವ ನಿಟ್ಟಿನಲ್ಲಿ ತೆರಿಗೆ ವಿನಾಯಿತಿ ನೆರವಾಗಲಿದೆ. ದಸರಾ ಮುಗಿದ ಒಂದು ವಾರದವರೆಗೂ ವಿನಾಯಿತಿ ವಿಸ್ತರಿಸಿದ್ದರೆ, ಇನ್ನಷ್ಟು ಸಂಖ್ಯೆಯ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿದ್ದರು. ಇದರಿಂದ ಮೈಸೂರು ಹಾಗೂ ಮಂಡ್ಯ ಜಿಲ್ಲೆಯಲ್ಲಿ ಪ್ರವಾಸೋದ್ಯಮ ನಂಬಿಕೊಂಡಿರುವವರಿಗೆ ನೆರವಾಗುತ್ತಿತ್ತು.
> - ಸಿ.ನಾರಾಯಣಗೌಡ, ಅಧ್ಯಕ್ಷ, ಹೋಟೆಲ್ ಮಾಲೀಕರ ಸಂಘ

ಮೈಸೂರು ವಿವಿ ವತಿಯಿಂದ ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ಫಲ-ಪುಷ್ಪ ಪ್ರದರ್ಶನ



ಮೈಸೂರು, ಸೆ.20(ಎಂಟಿವೈ)- ಮೈಸೂರು ವಿಶ್ವವಿದ್ಯಾನಿಲಯ ಕುಕ್ಕರಹಳ್ಳಿ ಕೆರೆಯ ಪೂರ್ವ ಮತ್ತು ಪಶ್ಚಿಮ ಗೇಟ್ ಬಳಿ ಸೆ.24ರಿಂದ ಅ.2ರವರೆಗೆ 20ನೇ ವರ್ಷದ ದಸರಾ ಫಲ-ಪುಷ್ಪಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವತಿಯಿಂದ ಆಯೋಜಿಸಿರುವ ಈ ಫಲ-ಪುಷ್ಪ ಪ್ರದರ್ಶನವನ್ನು ಸೆ.24 ರಂದು ಸಂಜೆ 5.30ಕ್ಕೆ ಕುಲಪತಿ ಪ್ರೊ.ಎನ್.ಕೆ ಲೋಕನಾಥ್ ಉದ್ಘಾಟಿಸಲಿದ್ದಾರೆ. ಕುಲಸಚಿವರಾದ ಎಂ.ಕೆ.ಸವಿತಾ (ಆಡಳಿತ), ಪ್ರೊ.ಎನ್.ನಾಗರಾಜು (ಪರೀಕ್ಷಾಂಗ), ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಮಾನಸಗಂಗೋತ್ರಿಯ ತೋಟಗಾರಿಕಾ ವಿಭಾಗದ ಹೆಚ್ಚುವರಿ ಸಹಾಯಕ ನಿರ್ದೇಶಕ ಚಲುವೇಶ ಎನ್., ತೋಟಗಾರಿಕಾ ವಿಭಾಗದ ಸಹಾಯಕ ತೋಟಗಾರಿಕಾ ಅಧಿಕಾರಿಗಳಾದ ಮಹದೇವ ಜಿ.ಎಂ, ತೋಟಗಾರಿಕೆಗೆ ವಿಭಾಗದ ಸಹಾ ಯಕ ನಿರ್ದೇಶಕ ನರೇಂದ್ರ ಕೆ. ಉಪಸ್ಥಿತರಿರುವರು.

ಮಹಿಳಾ ದಸರಾ ಪ್ರಯುಕ್ತ ರಂಗೋಲಿ ಚಿತ್ತಾರ ಸ್ಪರ್ಧೆ

ಮೈಸೂರು,ಸೆ.20- ಮಹಿಳಾ ಮತ್ತು ಮಕ್ಕಳ ದಸರಾ-2025ರ ಉಪಸಮಿತಿಯು ವತಿಯಿಂದ ಮಹಿಳಾ ದಸರಾ-2025ರ ಅಂಗವಾಗಿ ಸೆಪ್ಟೆಂಬರ್ 23 ರಂದು ಬೆಳಗ್ಗೆ 7 ಗಂಟೆಗೆ ಅಂಬಾ ವಿಲಾಸ ಅರಮನೆ ಮುಂಭಾಗ 'ರಂಗೋಲಿ ಚಿತ್ತಾರ' ಸ್ಪರ್ಧೆಯನ್ನು ಏರ್ಪಡಿಸಲಾಗಿದ್ದು, ಆಸಕ್ತ ಸಾರ್ವಜನಿಕ ಮಹಿಳೆಯರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೈಸೂರು ನಗರದ ಮೇಲ್ವಿಚಾರಕಿಯರಾದ ತಾರಾ ಅವರ ಮೊ.ಸಂ: 7795033652 ಹಾಗೂ ಅನುಪಮ ಅವರ ಮೊ.ಸಂ: 9611591791 ಅನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ.23ರಂದು 'ಪಂಚಕಾವ್ಯದೌತಣ'

● ಪ್ರಭಾತ, ಪ್ರಚುರ, ಪ್ರಜ್ವಲ, ಪ್ರತಿಭಾ, ಪ್ರಬುದ್ಧ ವಿನೂತನ ಕವಿ ವಿಚಾರಧಾರೆ
● ಕವಿಗೋಷ್ಠಿ ಉಪ ಸಮಿತಿ ಕಾರ್ಯಾಧ್ಯಕ್ಷೆ ಪ್ರೊ. ಲೋಲಾಕ್ಷಿ ಮಾಹಿತಿ



ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದಲ್ಲಿ ದಸರಾ ಕವಿಗೋಷ್ಠಿ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು

ಮೈಸೂರು, ಸೆ.20(ಎಂಟಿವೈ)- ನಾಡಹಬ್ಬ ದಸರಾ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ 'ಪಂಚಕಾವ್ಯದೌತಣ' ದಸರಾ ಕವಿಗೋಷ್ಠಿ ಆಯೋಜಿಸಲಾಗಿದೆ ಎಂದು ದಸರಾ ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ.ಲೋಲಾಕ್ಷಿ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಯಲು ರಂಗಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ದಸರಾ ಕವಿಗೋಷ್ಠಿಯನ್ನು ಐದು ಪ್ರಕಾರಗಳಲ್ಲಿ ನಡೆಸಲಾಗುತ್ತಿದೆ. ಪಂಚಕಾವ್ಯದೌತಣ ಶೀರ್ಷಿಕೆಯಲ್ಲಿ ಕವಿಗೋಷ್ಠಿ ನಡೆಸಲಾಗುತ್ತಿದೆ. ಸೆ.23ರಂದು ಬೆಳಗ್ಗೆ 10.30ಕ್ಕೆ ಬಯಲು ರಂಗಮಂದಿರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಸ್ಥಿತಿಯಲ್ಲಿ ಕವಿ ಡಾ.ಅರವಿಂದ ಮಾಲಗತ್ತಿ ದಸರಾ ಕವಿಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಬಯಲು ರಂಗಮಂದಿರದಲ್ಲಿ ದಸರಾ ಕವಿಗೋಷ್ಠಿ ಉದ್ಘಾಟನಾ ಸಮಾರಂಭ ಮುಗಿದ ನಂತರ ಸೆ.27ರವರೆಗೆ ಕುವೆಂಪು ಕನ್ನಡ ಅಧ್ಯಯನ ಕೇಂದ್ರದ ಬಿ.ಎಂ.ಶ್ರೀ ಸಭಾಂಗಣದಲ್ಲಿ ಕವಿಗೋಷ್ಠಿ ನಡೆಯಲಿದೆ. ಸೆ.23ರಂದು ಮೊದಲ ದಿನ ಜರುಗುವ 'ಪ್ರಭಾತ' ಕವಿಗೋಷ್ಠಿಯಲ್ಲಿ ಮೈಸೂರು ವಿಭಾಗದ ಪ್ರಾದೇಶಿಕ ಜಿಲ್ಲೆಗಳಾದ ಮೈಸೂರು, ಹಾಸನ, ಮಂಡ್ಯ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳ ಪ್ರತಿಭಾವಂತ ಮಕ್ಕಳು, ಮಹಿಳೆಯರು, ಹಿರಿಯ ಕವಿಗಳು, ಯುವಕವಿಗಳ ಭಾವ ಸಮ್ಮಿಲನ, ನವರಸಗಳ ಆಸ್ವಾದನ ಗೋಷ್ಠಿಯಾಗಿ ಮೂಡಿಬರಲಿದೆ ಎಂದು ತಿಳಿಸಿದರು.

ಸೆ.24ರಂದು ಬೆಳಗ್ಗೆ 10.30ಕ್ಕೆ ಗೀತ ರಚನೆಕಾರ ಜೋಗಿ ಪ್ರೇಮ್, 'ಪ್ರಚುರ' ಕವಿಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ಈ ಗೋಷ್ಠಿಯಲ್ಲಿ ಅನಾಥಾಶ್ರಮ, ವಿಶೇಷಚೇತನ, ಲಿಂಗತ್ವ ಅಲ್ಪಸಂಖ್ಯಾತರು, ಪೌರಕಾರ್ಮಿಕರು ಸೇರಿದಂತೆ ನೇಪಥ್ಯಕ್ಕೆ ಸರಿದಿದ್ದ ಕವಿಗಳು ಕನ್ನಡ ಅಸ್ತಿತ್ವ ಕುರಿತು ಕವನ ವಾಚಿಸಲಿದ್ದಾರೆ.

ಸೆ.25ರಂದು ಬೆಳಗ್ಗೆ 10.30ಕ್ಕೆ 'ಪ್ರಜ್ವಲ' ಗೋಷ್ಠಿಯನ್ನು ಗೀತ ರಚನೆಕಾರ ಪ್ರಮೋದ ಮರವಂತೆ ಉದ್ಘಾಟಿಸಲಿದ್ದಾರೆ. ಈ ಗೋಷ್ಠಿ ಚುಟುಕ ಕವನಗಳ ಜುಗಲ್‌ಬಂದಿಯಾಗಿದ್ದು, ವಿಡಂಬನಾತ್ಮಕ ಹಾಸ್ಯವನ್ನು ಐದು ವಿಷಯಗಳೊಂದಿಗೆ ಐದು ಸುತ್ತುಗಳಲ್ಲಿ ಕವಿಗಳು ಹಾಸ್ಯದೌತಣವನ್ನು ಉಣಬಡಿಸಲಿದ್ದಾರೆ ಎಂದು ತಿಳಿಸಿದರು.

ಸೆ.26ರಂದು ಬೆಳಗ್ಗೆ 10.30ಕ್ಕೆ 'ಪ್ರತಿಭಾ' ಕವಿಗೋಷ್ಠಿಯನ್ನು ಜಾನಪದ ತಜ್ಞ ಪ್ರೊ.ನಂಜಯ್ಯ ಹೊಂಗನೂರು ಉದ್ಘಾಟಿಸಲಿದ್ದಾರೆ. ಜಾನಪದ, ತತ್ವಪದಗಳ ಕಾವ್ಯ ವಾಚನ ಮತ್ತು ಗಾಯನ ಇರಲಿದ್ದು, ಕಂಸಾಳೆ, ತಂಬೂರಿ, ಬಸುರಿ ಬಯಕೆ ಪದ, ಜರಿವ ಪದ, ಸರಸ-ಸಲ್ಲಾಪ ಒಗಟು ಪದ, ಗೀಗೀ ಪದ, ಸೋಬಾನೆ ಪದ, ಅಣಕು ಪದ, ಪಾಡ್ದನ ಸೇರಿದಂತೆ ತತ್ವಪದಗಳ ಅನುಭವ ಈ ಗೋಷ್ಠಿಯಲ್ಲಿ ಹರಿದುಬರಲಿದೆ.

ಸೆ.27ರಂದು ಬೆಳಗ್ಗೆ 10.30ಕ್ಕೆ 'ಪ್ರಬುದ್ಧ' ಕವಿಗೋಷ್ಠಿಯನ್ನು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಉದ್ಘಾಟಿಸಲಿದ್ದಾರೆ. ಈ ಗೋಷ್ಠಿಯಲ್ಲಿ 31 ಜಿಲ್ಲೆಗಳಿಂದ ಕವಿಗಳನ್ನು ಆಹ್ವಾನಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ದಸರಾ ಕವಿಗೋಷ್ಠಿ ಉಪಸಮಿತಿಯ ಉಪವಿಶೇಷಾಧಿಕಾರಿ ಜಿ.ಸೋಮಶೇಖರ್, ಸಮಿತಿ ಸದಸ್ಯರುಗಳಾದ ನಾಗರಾಜ್ ಭೈರಿ, ಪ್ರೋ. ಜ್ಯೋತಿ, ಪ್ರೊ.ನವಿತಾ ತಿಮ್ಮಯ್ಯ, ಪ್ರೊ.ಗೀತಾ, ಪ್ರೊ.ಸಪ್ನ, ಪ್ರೊ.ಶುಭಾ, ಲಿಂಗರಾಜು, ನಿವೃತ್ತ ಇನ್‌ಸ್ಪೆಕ್ಟರ್ ಸಿದ್ದರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಫಲ-ಪುಷ್ಪ ಪ್ರದರ್ಶನಕ್ಕೆ ಅಂತಿಮ ಸಿದ್ಧತೆ; ಗುಲಾಬಿಯಲ್ಲಿ ಮೂಡಲಿದೆ ಗಾಂಧಿ ಮಂಟಪ!



ಗಾಜಿನ ಮನೆಯಲ್ಲಿ ದಂಡಿ ಮಾರ್ಚ್ ಆಕೃತಿ ಹಾಗೂ ಗಾಂಧಿ ಮಂಟಪದ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಮೈಸೂರು, ಸೆ.20(ಎಂಟಿವೈ)- ದಸರಾ ಫಲ-ಪುಷ್ಪ ಪ್ರದರ್ಶನಕ್ಕೆ ಹಾರ್ಡಿಂಗ್ ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಹೂವಿನ ಕುಂಡಗಳ ಜೋಡಣಾ ಕಾರ್ಯ ಅಂತಿಮ ಹಂತಕ್ಕೆ ತಲುಪಿದ್ದು, ಗಾಜಿನ ಮನೆಯಲ್ಲಿ ಲಕ್ಷಾಂತರ ಹೂವಿನಿಂದ ಕನ್ಯಾಕುಮಾರಿಯ ಗಾಂಧಿ ಮಂಟಪದ ಆಕೃತಿ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ತೋಟಗಾರಿಕಾ ಇಲಾಖೆ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ತೋಟಗಾರಿಕಾ ಸಂಘದ ಸಂಯುಕ್ತಾಶ್ರಯದಲ್ಲಿ ಸೆ.22ರಿಂದ ಅ.2ರವರೆಗೆ ಕುಪ್ಪಣ್ಣ ಪಾರ್ಕ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದ್ದು, ಅಂದು ಮಧ್ಯಾಹ್ನ 12 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ.

ಈ ಬಾರಿಯ ಜಂಬೂಸವಾರಿ, ಗಾಂಧಿ ಜಯಂತಿ(ಅ.2) ದಿನವೇ ನಡೆಯುತ್ತಿರುವುದರಿಂದ ಫಲಪುಷ್ಪ ಪ್ರದರ್ಶನದಲ್ಲಿ ಗಾಂಧಿ ತತ್ವ ಸಂದೇಶ ಮೇಳೈಸಲಿದೆ. ಅದಕ್ಕಾಗಿ ಸುಮಾರು 3 ಲಕ್ಷ ಗುಲಾಬಿಯಿಂದ ಕನ್ಯಾಕುಮಾರಿ ಯಲ್ಲಿರುವ ಗಾಂಧಿ ಮಂಟಪ ನಿರ್ಮಿಸಲಾಗುತ್ತಿದ್ದು, ಅದರ ಮುಂದೆ ಚರಕದಲ್ಲಿ ನೂಲು ನೇಯುವ ಭಂಗಿಯಲ್ಲಿ ಮಹಾತ್ಮಗಾಂಧೀಜಿ ಅವರ ಆಕೃತಿ ನಿರ್ಮಿಸಲಾಗುತ್ತಿದೆ. ಅಲ್ಲದೆ, ಗಾಂಧಿ ಮಂಟಪದ ಹಿಂಭಾಗ ದಂಡಿ ಮಾರ್ಚ್ ಆಕೃತಿಯನ್ನು ನಿರ್ಮಿಸಲಾಗುತ್ತಿದೆ.

ಇದರೊಂದಿಗೆ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಪಂಚ ಗ್ಯಾರಂಟಿ ಯೋಜನೆಗಳ ಆಕೃತಿಗಳು, ಆಪರೇಷನ್ ಸಿಂಧೂರ್ ಆಕೃತಿ, ಕರ್ನಲ್ ಸೋಫಿಯಾ ಖುರೇಷಿ, ವ್ಯೋಮಿಕ್ ಸಿಂಗ್ ಅವರ ಆಕೃತಿ, ಆರ್ಮಿ ಟ್ರಕ್, ಏರ್ ಜೆಟ್, ಯುದ್ಧ ನೌಕೆಯ ಆಕೃತಿಗಳನ್ನು ನಿರ್ಮಿಸಲಾಗುತ್ತಿದೆ. ಅಂಬಾರಿ ಹೊತ್ತ ಆನೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಕೃತಿ, ನವದುರ್ಗೆಯರು ಆಕೃತಿ, ಭೂಮಿ ರಕ್ಷಿಸುವ ಸಂದೇಶ (ಸೇವ್ ಅರ್ಥ್) ಆಕೃತಿ ಸೇರಿದಂತೆ ವಿವಿಧ ಆಕೃತಿಗಳು ಹೂವಿನಿಂದ ನಿರ್ಮಾಣ ಮಾಡಲಾಗುತ್ತಿದೆ.

ನಾಳೆಯಿಂದ ರಾಜ್ಯಾದ್ಯಂತ ಜಾತಿಗಣತಿ

ಕೊಡವರು ಧರ್ಮ 'ಹಿಂದೂ', ಜಾತಿ 'ಕೊಡವ' ಎಂದು ಬರೆಸಿ

ಧರ್ಮ-ಜಾತಿ ಎರಡನ್ನೂ ಕೊಡವ ಎಂದು ಬರೆಸಲು ಕೆಲವರು ಕರೆ ನೀಡಿರುವುದಕ್ಕೆ ಆಕ್ಷೇಪ



ಕೊಡವ ಸಮಾಜಗಳ ಪ್ರಮುಖರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ತಲಕಾವೇರಿಯಲ್ಲಿ ಕುಲದೇವತೆ ಕಾವೇರಿ ತೀರ್ಥ ರೂಪಿಣಿಯಾಗಿ ದರ್ಶನ ನೀಡುವ ದಿನದ ಆಚರಣೆಗಳು ಹಿಂದೂ ಸಂಪ್ರದಾಯದಂತೆಯೇ ನಡೆಯುತ್ತದೆ. ಪುತ್ತರಿ ಹಬ್ಬದಂದು ಈಶ್ವರ, ಇಗ್ಗುತ್ತಪ್ಪ ದೇವರನ್ನು ಕರೆಯುತ್ತೇವೆ ಮತ್ತು ಹಿಂದೂ ಪದ್ಧತಿಯಂತೆಯೇ ಆಚರಿಸುತ್ತೇವೆ. ಊರ್ ಮಂದ್‌ನಲ್ಲಿ ಬೋಳಕಾಟ್ ಮತ್ತು ಕೋಲಾಟ್ ನಡೆಸುವ ಸಂದರ್ಭ ಮಂದ್ ಅನ್ನು ತೆರೆಯುವಾಗ ಅಯ್ಯಪ್ಪನನ್ನು ಬೇಡುತ್ತೇವೆ. ಕೊಡವರು ತಾವಿರುವ ಪ್ರದೇಶಕ್ಕನುಗುಣವಾಗಿ ಮಹಾದೇವ, ಭಗವತಿ ಈಶ್ವರ ಹಾಗೂ ಇಗ್ಗುತ್ತಪ್ಪ ದೇವರನ್ನು ಬೇಡುತ್ತಾರೆ. ಇದೆಲ್ಲವೂ ಹಿಂದೂ ಸಂಪ್ರದಾಯಕ್ಕೆ ಪೂರಕವಾಗಿದ್ದು, ಕೊಡವರು ಹಿಂದೂಗಳೇ ಆಗಿದ್ದಾರೆ. ಆದರೆ ರಾಜ್ಯದಲ್ಲಿ ಜನಗಣತಿಯ ಮೂಲಕ ಹಿಂದೂ ಸಮಾಜವನ್ನು ಒಡೆಯುವ ದೊಡ್ಡ ಷಡ್ಯಂತ್ರ ನಡೆಯುತ್ತಿದೆ ಎಂದು ಆರೋಪಿಸಿದರು. ಸಮೀಕ್ಷೆ ಸಂದರ್ಭ ಕೊಡವರು ಯಾವುದೇ ಗೊಂದಲಕ್ಕೆ ಒಳಗಾಗಬಾರದು. ಧರ್ಮವನ್ನು ಹಿಂದೂ ಎಂದು ಮತ್ತು ಜಾತಿಯನ್ನು ಕೊಡವ ಎಂದು ನಮೂದಿಸಬೇಕು. ಹಿಂದೂ ಧರ್ಮದ ರಕ್ಷಣೆಗೆ ಒಗ್ಗಟ್ಟನ್ನು ಕಾಪಾಡಬೇಕು. – ಮನು ಮುತ್ತಪ್ಪ.

ಮಡಿಕೇರಿ, ಸೆ.20– ರಾಜ್ಯ ಸರಕಾರದ ಮೂಲಕ ನಡೆಯಲಿರುವ ಜಾತಿ ಜನಗಣತಿ ಸಂದರ್ಭ ಕೊಡವರು 'ಧರ್ಮವನ್ನು ಹಿಂದೂ' ಮತ್ತು ಜಾತಿಯನ್ನು 'ಕೊಡವ' ಎಂದು ಯಾವುದೇ ಗೊಂದಲವಿಲ್ಲದೆ ನಮೂದಿಸುವಂತೆ ವಿವಿಧ ಕೊಡವ ಸಮಾಜಗಳ ಪ್ರಮುಖರು ಮನವಿ ಮಾಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ, ನಾಪೋಕ್ಲು ಕೊಡವ ಸಮಾಜದ ಮಾಜಿ ಅಧ್ಯಕ್ಷ ಅಪ್ಪ ಚೆಟ್ಟೋಳಂಡ ಮನು ಮುತ್ತಪ್ಪ ಜಾತಿ ಹಾಗೂ ಧರ್ಮ ಎರಡನ್ನೂ ಕೊಡವ ಎಂದು ನಮೂದಿಸುವಂತೆ ಕೆಲವರು ಕರೆ ನೀಡಿರುವುದು ವಿಷಾದನೀಯ ಮತ್ತು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೊಡವರು ಸಾಮರಸ್ಯದಿಂದ ಬದುಕು ಸಾಗಿಸುತ್ತಿದ್ದಾರೆ. ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕೊಡವ ಜನಾಂಗ ವಿಶಿಷ್ಟವಾದ ಭವ್ಯ ಸಂಸ್ಕೃತಿಯನ್ನು ಹೊಂದಿದೆ. ಕೊಡವ ಸಂಸ್ಕೃತಿ ಹಿಂದೂ ಧರ್ಮದೊಂದಿಗೆ ಹೊಂದಿಕೊಂಡಿದೆ. ಕೊಡವರು ನಾಗನಸ್ಥಾನ, ಅಯ್ಯಪ್ಪ ಬನ ಮತ್ತು ಊರಿನಲ್ಲಿ ಭಗವತಿಯನ್ನು ಹಿಂದೂ ಸಂಪ್ರದಾಯದ ಪ್ರಕಾರವೇ ಪೂಜಿಸುತ್ತಾರೆ. ಪ್ರತಿವರ್ಷ ಭಗವತಿ ಉತ್ಸವ ಹಿಂದು ಸಂಪ್ರದಾಯದಂತೆಯೇ ನಡೆಯುತ್ತದೆ. ಭಗವತಿ ದೇವಾಲಯಗಳಲ್ಲಿ ಕೊಡವರೇ ತಕ್ಕ ಮುಖ್ಯಸ್ಥರಾಗಿರುತ್ತಾರೆ.

ಮಡಿಕೇರಿ ಕೊಡವ ಸಮಾಜದ ಮಾಜಿ ಅಧ್ಯಕ್ಷ ಕೆ.ಎಸ್.ದೇವಯ್ಯ ಮಾತನಾಡಿ ಕೊಡವರೆಲ್ಲರೂ ಹಿಂದೂ ಧರ್ಮವನ್ನೇ ಪಾಲಿಸುತ್ತಿದ್ದಾರೆ. ನಮ್ಮ ಜನರನ್ನು ಒಡೆಯುವ ಪ್ರಯತ್ನ ನಡೆಯುತ್ತಿದೆ ಎಂದು ಅಭಿಪ್ರಾಯಪಟ್ಟರು. ಭಗವತಿ ದೇವಿಯ ಆರಾಧನೆ ಕೊಡವರೆಲ್ಲರ ಕರ್ತವ್ಯವಾಗಿದೆ. ದೇವರ ಕಾಡಿನಲ್ಲಿ ಕಲ್ಲಿನ ರೂಪದಲ್ಲಿ ಅಯ್ಯಪ್ಪನನ್ನು ಆರಾಧಿಸಲಾಗುವುದು. ಆದ್ದರಿಂದ ಕೊಡವರೆಲ್ಲರೂ ಹಿಂದೂ ಸಂಪ್ರದಾಯಕ್ಕೆ ಬದ್ಧರಾಗಿದ್ದಾರೆ ಎಂದರು.

ಕೊಡವ ಸಮಾಜದ ಪ್ರಮುಖ ಮಾಚಿಮಾಡ ರವೀಂದ್ರ ಮಾತನಾಡಿ, ಕೊಡವರಿಗು ಹಾಗೂ ಹಿಂದೂ ಧರ್ಮಕ್ಕೂ ಸುಮಾರು 10 ಸಾವಿರ ವರ್ಷಗಳ ನಂಟಿದೆ. ಆದರೆ ರಾಜ್ಯ ಸರ್ಕಾರ ಜಾತಿ ಜನಗಣತಿಯ ಮೂಲಕ ಹಿಂದೂ ಸಮಾಜವನ್ನು ಸಣ್ಣ ಸಣ್ಣ ಜಾತಿಗಳನ್ನಾಗಿ ಒಡೆಯುವ ಪ್ರಯತ್ನ ಮಾಡುತ್ತಿದೆ. ಆ ಮೂಲಕ ಮತ ಪಡೆಯುವ ಹುನ್ನಾರ ನಡೆಯುತ್ತಿದೆ ಎಂದು ಆರೋಪಿಸಿದರು. ಸಂವಿಧಾನದಲ್ಲಿ ಕೂಡ 7 ಧರ್ಮಗಳನ್ನು ಮಾತ್ರ ಉಲ್ಲೇಖಿಸಲಾಗಿದೆ, ಕೊಡವ ಧರ್ಮ ಎನ್ನುವುದು ಇಲ್ಲ. ಕೊಡವ ಭಾಷಿಕ ಜನಾಂಗಗಳ ಒಕ್ಕೂಟ ಕೂಡ ಧರ್ಮವನ್ನು ಹಿಂದೂ ಎಂದು ನಮೂದಿಸಲು ಮುಂದಾಗಿರುವುದು ಸ್ವಾಗತಾರ್ಹ ಕ್ರಮವಾಗಿದೆ. ಕೊಡವರು ಯಾವುದೇ ಕಾರಣಕ್ಕೂ ಗೊಂದಲಕ್ಕೆ ಒಳಗಾಗುವುದು ಬೇಡ. ರಾಜ್ಯ ಸರ್ಕಾರದ ಈ ಸಮೀಕ್ಷೆಯಿಂದ ಏನೂ ಪ್ರಯೋಜನವಿಲ್ಲ ಎಂದು ಟೀಕಿಸಿದರು.

ಕೊಡವ ಸಮಾಜಗಳ ಒಕ್ಕೂಟದ ಗೌರವ ಕಾರ್ಯದರ್ಶಿ ವಾಟೇರಿರ ಶಂಕರಿ ಪೂವಯ್ಯ ಮಾತನಾಡಿ, ಕೊಡವರು ಹಿಂದೂ ಧರ್ಮದ ಆಚರಣೆಗೆ ಬದ್ಧರಾಗಿರುವುದರಿಂದ ಸಮೀಕ್ಷೆಯಲ್ಲಿ ಹಿಂದೂ ಧರ್ಮವೆಂದು ನಮೂದಿಸಬೇಕು. ಕೊಡವರು ಹಿಂದೂ ಧರ್ಮವನ್ನೇ ಪಾಲಿಸುವ ಮೂಲಕ ತಮ್ಮ ಮಕ್ಕಳನ್ನು ಹಿಂದೂಗಳನ್ನಾಗಿ ಉಳಿಸಿ ಬೆಳೆಸುವಂತೆ ಕರೆ ನೀಡಿದರು.

ದೇಶ ತಕ್ಕರಾದ ಬೊಳ್ಳೆರ ವಿನಯ್ ಅಪ್ಪಯ್ಯ ಮಾತನಾಡಿ, ಹಿಂದೂಗಳಿಗಿರುವುದು ಒಂದೇ ಭೂಮಿ, ಕೊಡವರೆಲ್ಲರೂ ಹಿಂದೂಗಳೇ ಆಗಿದ್ದಾರೆ. ಸಮೀಕ್ಷೆಯ ಹೆಸರಿನಲ್ಲಿ ಎಡರಂಗ ಷಡ್ಯಂತ್ರ ನಡೆಸುತ್ತಿದೆ ಎಂದು ಆರೋಪಿಸಿದರು.

ಅಮ್ಮಕೊಡವ ಟ್ರಸ್ಟ್‌ನ ಅಧ್ಯಕ್ಷ ಎಂ.ಬಿ. ದೇವಯ್ಯ ಮಾತನಾಡಿ ಕೊಡವರು ಹಿಂದೂಗಳು ಎಂದು ಪ್ರತಿಪಾದಿಸಿದರು.

ಬ್ಯೂಟಿ ಪಾರ್ಲರ್ ಹೆಸರಿನಲ್ಲಿ ವೇಶ್ಯಾವಾಟಿಕೆ

ನಾಲ್ವರ ಬಂಧನ; ನಾಲ್ವರು ಮಹಿಳೆಯರು ರಕ್ಷಣೆ



ಪಿ.ಪಿ.ಪ್ರದೀಪನ್ ಕಲೇಶ್ ಕುಮಾರ್ ಶಾಜಿ ಎ.ಪೊನ್ನಣ್ಣ

ಮಡಿಕೇರಿ, ಸೆ.20– ವಿರಾಜಪೇಟೆಯ ಗಾಂಧಿನಗರದಲ್ಲಿ ಮನೆಯೊಂದನ್ನು ಬಾಡಿಗೆಗೆ ಪಡೆದು ಬ್ಯೂಟಿ ಪಾರ್ಲರ್ ಮತ್ತು ಸ್ಪಾ ಹೆಸರಿನಲ್ಲಿ ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಕೆ ಮಾಡಲಾಗುತ್ತಿದ್ದ ಖಚಿತ ಮಾಹಿತಿ ಮೇರೆಗೆ ನಗರ ಪೊಲೀಸರು ದಾಳಿ ನಡೆಸಿ ನಾಲ್ವರನ್ನು ಬಂಧಿಸಿದ್ದಾರೆ.

ಕೇರಳ ಕಣ್ಣೂರು ಜಿಲ್ಲೆಯ ಪಿ.ಪಿ. ಪ್ರದೀಪನ್(48), ಕಲ್ಲೇಶ್ ಕುಮಾರ್(45), ಶಾಜಿ(38) ಮತ್ತು ವಿರಾಜಪೇಟೆ ಅಮ್ಮತ್ತಿ ನಿವಾಸಿ ನೆಲ್ಲಮಕ್ಕಡ ಎ.ಪೊನ್ನಣ್ಣ(48) ಬಂಧಿತ ಆರೋಪಿಗಳಾಗಿದ್ದಾರೆ.

ದಾಳಿ ವೇಳೆ ಸ್ಥಳದಲ್ಲಿದ್ದ ನಾಲ್ವರು ಮಹಿಳೆಯರನ್ನು ರಕ್ಷಿಸಿ ಮಹಿಳಾ ಸಾಂತ್ವನ ಕೇಂದ್ರಕ್ಕೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣದಲ್ಲಿ ಶಾಮೀಲಾಗಿರುವ ಇತರರ ಬಂಧನಕ್ಕೆ ಬಲೆ ಬೀಸಲಾಗಿದೆ.

ಆರೋಪಿಗಳ ವಿರುದ್ಧ ವಿರಾಜಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವಿರಾಜಪೇಟೆ ಡಿವೈಎಸ್‌ಪಿ ಮಹೇಶ್ ಕುಮಾರ್, ವಿರಾಜಪೇಟೆ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ ಠಾಣಾಧಿಕಾರಿ ಎನ್.ಜೆ ಲತಾ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ. ಘಟನೆ ಕುರಿತು ಪ್ರತಿಕ್ರಿಯಿಸಿರುವ ಪುರಸಭೆ ಸದಸ್ಯೆ ಜೂನ ಸುನೀತಾ ಕೆಲವು ದಿನಗಳಿಂದ ಕೇರಳ ರಾಜ್ಯದ ನೋಂದಣಿ ವಾಹನಗಳ ಸಂಖ್ಯೆ ಹೆಚ್ಚಾಗಿತ್ತು. ಪೊಲೀಸರ ಕಾರ್ಯಾಚರಣೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು ಮುಂದೆ ಈ ರೀತಿಯ ಪಾರ್ಲರ್‌ಗಳ ಬಗ್ಗೆ ಪೊಲೀಸರು ಕ್ರಮ ಕೈಗೊಳ್ಳಬೇಕು. ಪುರಸಭೆಯಿಂದ ಈ ರೀತಿಯ ಪಾರ್ಲರ್‌ಗಳಿಗೆ ಅನುಮತಿ ನೀಡಬಾರದು ಎಂದು ಆಗ್ರಹಿಸಿದ್ದಾರೆ. ಪುರಸಭೆ ಅಧ್ಯಕ್ಷೆ ಎಂ.ಕೆ.ದೇಚಮ್ಮ ಪ್ರತಿಕ್ರಿಯಿಸಿ ಈ ಘಟನೆ ನಡೆಸಿರುವ ವ್ಯಕ್ತಿಗಳ ವಿರುದ್ಧ ಪೊಲೀಸರು ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.


ನಾಳೆ ಕರಗ ಉತ್ಸವ

ಮಡಿಕೇರಿ: ನಗರದ ಇತಿಹಾಸ ಪ್ರಸಿದ್ಧ 4 ಶಕ್ತಿ ದೇವತೆಗಳ ಕರಗಗಳನ್ನು ಸೆ.22 ರಂದು ಸಂಜೆ 5 ಗಂಟೆಗೆ ಮಹದೇವಪೇಟೆಯ ಪಂಪಿನ ಕೆರೆ ಬಳಿ ನಗರ ದಸರಾ ಸಮಿತಿಯಿಂದ ಸಾಂಪ್ರದಾಯಿಕ ಪೂಜೆಯನ್ನರ್ಪಿಸಿ ನಗರ ಪ್ರದಕ್ಷಿಣೆಗೆ ಕರಗಗಳನ್ನು ಬರಮಾಡಿಕೊಳ್ಳಲಾಗುವುದು. ಸಾರ್ವಜನಿಕರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ವರ್ಷದ ದಸರಾ ಉತ್ಸವವನ್ನು ಯಶಸ್ವಿಯಾಗಿ ನಡೆಸಲು ಸಹಕಾರ ನೀಡುವಂತೆ ಕೋರಲಾಗಿದೆ.

ಸೆ.22, 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಆಯುಷ್ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ 10ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯು 'ಜನರಿಗಾಗಿ ಮತ್ತು ಜಗತ್ತಿಗಾಗಿ ಆಯುರ್ವೇದ' ಎಂಬ ಘೋಷವಾಕ್ಯದೊಂದಿಗೆ ಸೆ.22 ರಂದು ಬೆಳಗ್ಗೆ 10 ಗಂಟೆಗೆ ಜಿಲ್ಲಾ ಸರ್ಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ನಡೆಯಲಿದೆ.

ಶರನ್ನವರಾತ್ರಿ ಅಂಗವಾಗಿ ವಿಶೇಷ ಅಲಂಕಾರ ಪೂಜೆ



ಮಡಿಕೇರಿ, ಸೆ.20– ತಾಳತ್ತಮನೆಯ ಶ್ರೀ ದುರ್ಗಾ ಭಗವತಿ ದೇವಾಲಯದಲ್ಲಿ ಶರನ್ನವರಾತ್ರಿ ಅಂಗವಾಗಿ ಸೆ.22ರಿಂದ ಅ.2ರವರೆಗೆ ವಿಶೇಷ ಅಲಂಕಾರ ಪೂಜೆ ನಡೆಯಲಿದೆ. ಪ್ರತೀ ದಿನ ಬೆಳಿಗ್ಗೆ 9.30 ಗಂಟೆಗೆ ಅಲಂಕಾರ ಪೂಜೆ ಜರುಗಲಿದೆ.

ಸೆ.30ರಂದು ದುರ್ಗಾಷ್ಟಮಿಯ ಅಂಗವಾಗಿ ಬೆಳಿಗ್ಗೆ 9.30 ಗಂಟೆಗೆ ಗಣಪತಿ ಹೋಮ, ಶ್ರೀ ದುರ್ಗಾ ಹವನ ನಡೆಯಲಿದೆ. ಮಧ್ಯಾಹ್ನ ಅನ್ನ ಸಂತರ್ಪಣೆ ನೆರವೇರಲಿದ್ದು, ಸಂಜೆ 7 ಗಂಟೆಗೆ ವಿಶೇಷ ದುರ್ಗಾ ಪೂಜೆ ಜರುಗಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ದೇವಾಲಯದ ಆಡಳಿತ ಮಂಡಳಿ ಕೋರಿದೆ.

ಕೊಡವ ಹಾಕಿ ಅಕಾಡೆಮಿಗೆ ಚುನಾವಣೆ ನಡೆಯಲಿ

ಅವಿರೋಧ ಆಯ್ಕೆಯಾಗಬೇಕೆಂಬುದು ಸರಿಯಲ್ಲ



ಸುದ್ದಿಗೋಷ್ಠಿಯಲ್ಲಿ ಮಚ್ಚಾರಂಡ ಪ್ರವೀಣ್ ತಿಮ್ಮಯ್ಯ ಮಾತನಾಡಿದರು.

ಮಡಿಕೇರಿ, ಸೆ.20– ಕೊಡವ ಹಾಕಿ ಅಕಾಡೆಮಿ ಆಡಳಿತ ಮಂಡಳಿಗೆ ಅವಿರೋಧ ಆಯ್ಕೆ ನಡೆಯಬೇಕೆನ್ನುವ ಕೂಗು ಸರಿಯಲ್ಲ. ಯಾವುದೇ ಸಂಸ್ಥೆಯಲ್ಲೂ ಕಾರಣವಿಲ್ಲದೆ ಬದಲಾವಣೆಯ ಕೂಗು ಬರುವುದಿಲ್ಲ ಎಂದು ಅಕಾಡೆಮಿಯ ಅಧ್ಯಕ್ಷ ಸೇರಿದಂತೆ ವಿವಿಧ ಸ್ಥಾನಾಕಾಂಕ್ಷಿಗಳು ಸ್ಪಷ್ಟಪಡಿಸಿದರಲ್ಲದೇ ಚುನಾವಣೆ ನಡೆಯಲಿ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿರುವ ಮಚ್ಚಾರಂಡ ಪ್ರವೀಣ್ ತಿಮ್ಮಯ್ಯ ಮಾತನಾಡಿ, ಕೊಡವ ಹಾಕಿ ಅಕಾಡೆಮಿಯನ್ನು ಸ್ಥಾಪಿಸಿದ ದಿ.ಪಾಂಡಂಡ ಕುಟ್ಟಪ್ಪ ಅವರು ಮಹಾಸಭೆಯ ಒಪ್ಪಿಗೆ ಮೇರೆ ಬೈಲಾ ರಚಿಸಿ, ಅನುಮೋದನೆ ಪಡೆದು ಸಹಕಾರ ಕಾಯ್ದೆ ಅನ್ವಯ ನೋಂದಣಿ ಮಾಡಿರುತ್ತಾರೆ. ಈ ಬೈಲಾ ಅನುಸಾರ ಅಕಾಡೆಮಿಯ ಅಧ್ಯಕ್ಷ ಮತ್ತು ಪದಾಧಿಕಾರಿಗಳ ಆಯ್ಕೆ 3 ವರ್ಷಗಳಿಗೊಮ್ಮೆ ನಡೆಸಬೇಕಾಗುತ್ತದೆ ಅದರಂತೆ ಇದೀಗ ಚುನಾವಣೆಯನ್ನು ಘೋಷಿಸಲಾಗಿದ್ದು ಚುನಾವಣೆ ನಡೆಯಲಿ ಎಂದು ತಿಳಿಸಿದರು.

ಈಗಾಗಲೆ ಚುನಾವಣೆ ಘೋಷಣೆಯಾಗಿದ್ದು ಮೇಕೇರಿರ ರವಿ ಪೆಮ್ಮಯ್ಯ ಹಾಗೂ ಪಾಂಡಂಡ ಕುಟ್ಟಪ್ಪ ಅವರ ಮಗ ಬೋಪಣ್ಣ ಅವರ ಗುಂಪು ಕಣಕ್ಕಿಳಿದಿದೆ. ಈ ಹಂತದಲ್ಲಿ ಜಿಲ್ಲೆಯ ಕೆಲ ಕೊಡವ ಮುಖಂಡರು ಚುನಾವಣೆ ಇಲ್ಲದೆ ಒಂದು ತಂಡವನ್ನು ರಚಿಸಿ ಅವಿರೋಧ ಆಯ್ಕೆ ನಡೆಸುವಂತೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅದರಂತೆ ಮೇಕೇರಿರ ರವಿ ಪೆಮ್ಮಯ್ಯ ಅವರು ಹಾಗೂ ಅವರ ತಂಡದ ಸದಸ್ಯರಾದ ನಾವು ಅಖಿಲ ಕೊಡವ ಸಮಾಜದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಸಮ್ಮುಖದಲ್ಲಿ ಸಭೆ ನಡೆಸಿ ಹೊಂದಾಣಿಕೆಗೆ ಒಪ್ಪಿಗೆಯನ್ನು ಸೂಚಿಸಿದ್ದೆವು. ಅದೇ ಪಾಂಡಂಡ ಬೋಪಣ್ಣ ಕಡೆಯವರು ಹಾಲಿ ಇರುವ ಆಡಳಿತ ಮಂಡಳಿಯಲ್ಲಿ ಹೆಚ್ಚಿನ ಬದಲಾವಣೆ ಮಾಡದೆ ನಮ್ಮ ತಂಡಕ್ಕೆ ಕೇವಲ 2 ಸ್ಥಾನಗಳನ್ನು ನೀಡುವ ನಿಲುವನ್ನು ತಳೆದಿದ್ದು ಇದನ್ನು ನಾವು ತಿರಸ್ಕರಿಸಿ ಚುನಾವಣೆಗೆ ಸ್ಪರ್ಧಿಸಲು ತೀರ್ಮಾನಿಸಿದ್ದಾಗಿ ಸ್ಪಷ್ಟಪಡಿಸಿದರು.

ಕೊಡವ ಹಾಕಿ ಅಕಾಡೆಮಿಯ 15 ಸ್ಥಾನಗಳಿಗೆ ಇದೇ ಸೆ.28ರಂದು ವಿರಾಜಪೇಟೆಯ ತ್ರಿವೇಣಿ ಶಾಲೆಯಲ್ಲಿ ಚುನಾವಣೆ ನಡೆಯಲಿದೆ. ಇದರಲ್ಲಿ ಕೊಡವ ಹಾಕಿ ಹಬ್ಬದಲ್ಲಿ ಪಾಲ್ಗೊಂಡ ಹಾಕಿ ತಂಡಗಳ ಕುಟುಂಬದ ಪ್ರತಿನಿಧಿಗಳಾಗಿ 415 ಮಂದಿ ಮತದಾರರಾಗಿ ಪಾಲ್ಗೊಳ್ಳಲಿದ್ದಾರೆ. ನಮ್ಮ ತಂಡ ಚುನಾವಣೆಗೆ ಸ್ಪರ್ಧಿಸುತ್ತಿರುವುದು ಜಿಲ್ಲೆಯಲ್ಲಿ ಹಾಕಿ ಕ್ರೀಡೆಯ ಮತ್ತಷ್ಟು ಬೆಳವಣಿಗೆಯ ಚಿಂತನೆಯಿಂದ ಎಂದು ಸ್ಪಷ್ಟಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಕೊಡವ ಹಾಕಿ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಮೇಕೇರಿರ ರವಿ ಪೆಮ್ಮಯ್ಯ, ಗೌರವ ಕಾರ್ಯದರ್ಶಿಯಾಗಿ ಸ್ಪರ್ಧಿಸಿರುವ ಬುಟ್ಟಿಯಂಡ ಚಂಗಪ್ಪ, ಮಡಿಕೇರಿ ತಾಲೂಕು ಉಪಾಧ್ಯಕ್ಷ ಸ್ಥಾನದ ಸ್ಪರ್ಧಿ ಮಾದಂಡ ಪೆಮ್ಮಯ್ಯ, ಸೋಮವಾರಪೇಟೆ ತಾಲೂಕು ಉಪಾಧ್ಯಕ್ಷ ಸ್ಥಾನದ ಸ್ಪರ್ಧಿ ಕಲ್ಮಾಡಂಡ ತರುಣ್ ತಮ್ಮಯ್ಯ ಉಪಸ್ಥಿತರಿದ್ದರು.

ಸಂಘದ ಅಭಿವೃದ್ಧಿಗೆ ಸಹಕರಿಸಲು ಸಲಹೆ



ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘದ ವಾರ್ಷಿಕ ಸಭೆ ನಡೆಯಿತು.

ಚಾಮರಾಜನಗರ, ಸೆ.20– ವರ್ಷದಿಂದ ವರ್ಷಕ್ಕೆ ಸಂಘವು ಅಭಿವೃದ್ಧಿ ಹೊಂದಲು ಸಂಘದ ಪ್ರತಿಯೊಬ್ಬ ಸದಸ್ಯರು ಸಹಕರಿಸಬೇಕು ಎಂದು ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಚಂದ್ರಶೇಖರ್ ಎಚ್.ಪಾಟೀಲ್ ಸಲಹೆ ನೀಡಿದರು.

ನಗರದ ಭ್ರಮರಾಂಭ ಬಡಾವಣೆಯಲ್ಲಿರುವ ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘದ ಕಚೇರಿಯಲ್ಲಿ ನಡೆದ ಸಂಘದ 6ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಜಿಲ್ಲೆಯಲ್ಲಿ ಸ್ನೇಹ ಜ್ಯೋತಿ ಮಹಿಳಾ ಸೌಹಾರ್ದ ಸಂಘ ನಿಯಮಿತವು ಉತ್ತಮವಾದ ಹೆಸರು ಪಡೆದುಕೊಂಡಿದ್ದು, ಸಮಾಜಕ್ಕೆ ತನ್ನದೇ ಸೇವೆಯನ್ನು ಸಲ್ಲಿಸುತ್ತಿದೆ. ಸಂಘದ ಸೇವಾ ಕಾರ್ಯದಲ್ಲಿ ಸದಸ್ಯರು ಮತ್ತಷ್ಟು ತೊಡಗಿಸಿಕೊಂಡು ಸಂಘದ ಅಭಿವೃದ್ಧಿಗೆ ಹೆಚ್ಚಿನ ಸಹಕಾರ ನೀಡಬೇಕು ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಸಂಘವು ಸುಮಾರು 52 ಲಕ್ಷ ರೂ.ಗಳ ವಹಿವಾಟನ್ನು ಯಶಸ್ವಿಯಾಗಿ ನಡೆಸಿದ್ದು, ಮುಂದಿನ ವರ್ಷಗಳಲ್ಲಿ ಇನ್ನೂ ಹೆಚ್ಚಿನ ವಹಿವಾಟು ನಡೆಸಬೇಕು. ಈ ಮಟ್ಟಕ್ಕೆ ಸಂಘವನ್ನು ತೆಗೆದುಕೊಂಡು ಹೋಗಲು ಎಲ್ಲರೂ ಶ್ರಮಿಸಬೇಕು ಎಂದು ಸಲಹೆ ನೀಡಿದರು.

ನಂತರ ಸಂಘದ ಅಧ್ಯಕ್ಷೆ ಸಿ. ಮಂಜುಳಾ ಮಾತನಾಡಿ, ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಹಕಾರಿ ಸಂಘ ನಿಯಮಿತವು ನಡೆದು ಬಂದ ಹಾದಿ ಮತ್ತು ಮುಂದಿನ ವರ್ಷಕ್ಕೆ ಯಶಸ್ವಿಗೊಳಿಸಬೇಕಾದ ಕಾರ್ಯಕ್ರಮಗಳ ಬಗ್ಗೆ ಸಭೆಯಲ್ಲಿ ಮಾಹಿತಿ ನೀಡಿದರು.

ಬಳಿಕ ನಿರ್ದೇಶಕರಾದ ಎ. ಅರ್ಪಿತಾ ಮಾತನಾಡಿ, ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಸಂಘವನ್ನು ಮತ್ತಷ್ಟು ಅಭಿವೃದ್ಧಿ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ಸಂಘದ ಎಲ್ಲಾ ನಿರ್ದೇಶಕರು ಮುಂದಾಗಬೇಕು. ಮುಂದಿನ ವರ್ಷ ಈ ಬಾರಿಗಿಂತಲೂ ಹೆಚ್ಚಿನ ವಹಿವಾಟು ನಡೆಸಲು ಎಲ್ಲರೂ ಒಗ್ಗೂಡಿ ಶ್ರಮಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಸ್ನೇಹಜ್ಯೋತಿ ಮಹಿಳಾ ಸೌಹಾರ್ದ ಸಂಘ ನಿಯಮಿತ ಉಪಾಧ್ಯಕ್ಷರಾದ ನಿಂಗರಾಜಮ್ಮ, ಚಿತ್ರಕಲಾ ಸೇರಿದಂತೆ ಸಂಘದ ಎಲ್ಲಾ ನಿರ್ದೇಶಕರು, ಷೇರುದಾರರು ಹಾಗೂ ಇತರರು ಪಾಲ್ಗೊಂಡಿದ್ದರು.

ಸಂಘದ ಸರ್ವತೋಮುಖ ಅಭಿವೃದ್ಧಿಗೆ ಸಹಕಾರ ನೀಡಿ : ಶಾಸಕ ಪುಟ್ಟರಂಗಶೆಟ್ಟಿ



ದೊಡ್ಡರಾಯಪೇಟೆ ಪಿಎಸಿಸಿಎಸ್ ಕಚೇರಿ ಆವರಣದಲ್ಲಿ ನಡೆದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ದೊಡ್ಡರಾಯಪೇಟೆ ಪಿಎಸಿಸಿಎಸ್ ನಿರ್ದೇಶಕರೂ ಆದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿದರು.

ಚಾಮರಾಜನಗರ. ಸೆ.20– ಸಹಕಾರ ಸಂಘಗಳ ನಿರ್ದೇಶಕರು, ಸದಸ್ಯರು ಸಹಕಾರ ತತ್ವದಡಿ ಕಾರ್ಯ ನಿರ್ವಹಿಸಿದಾಗ ಸಂಘಗಳು ಅಭಿವೃದ್ಧಿಪಥದತ್ತ ಸಾಗಲಿವೆ ಎಂದು ಎಂಸಿಡಿಸಿಸಿ ಹಾಗೂ ದೊಡ್ಡರಾಯಪೇಟೆ ಪಿಎಸಿಸಿಎಸ್ ನಿರ್ದೇಶಕರಾದ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ದೊಡ್ಡರಾಯಪೇಟೆ ಗ್ರಾಮದಲ್ಲಿ ಶುಕ್ರವಾರ ದೊಡ್ಡರಾಯಪೇಟೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಕಚೇರಿ ಆವರಣದಲ್ಲಿ ಸಂಘದ 2024–25 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಸಹಕಾರ ಸಂಘಗಳು ಬಡವರು, ರೈತರ ಪರ ಸ್ಥಾಪಿತವಾಗಿದ್ದು, ಸಂಘದ ಸದಸ್ಯರು ಒಗ್ಗಟ್ಟು ಪ್ರದರ್ಶಿಸಿ, ಸಂಘಗಳನ್ನು ಬಲಪಡಿಸಬೇಕು, ಸಹಕಾರ ಸಂಘದಿಂದ ಸಾಲ ಪಡೆದವರು ಸಕಾಲಕ್ಕೆ ಸಂಘಕ್ಕೆ ಸಾಲ ಪಾವತಿಸುವ ಸಂಬಂಧ ರೈತರಿಗೆ ನಿರ್ದೇಶಕರು ಹಾಗೂ ಸದಸ್ಯರು ತಿಳುವಳಿಕೆ ಮೂಡಿಸಬೇಕು, ಸಹಕಾರ ಸಂಘವನ್ನು ಜಿಲ್ಲೆಯಲ್ಲೇ ಮಾದರಿ ಸಂಘ ಮಾಡುವುದರತ್ತ ತಾವು ಕಾರ್ಯಪ್ರವೃತ್ತರಾಗಬೇಕು ಎಂದರು.

ದೊಡ್ಡರಾಯಪೇಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ 75 ವರ್ಷದ ಹಿಂದಿನದ್ದಾಗಿದೆ. ಅದನ್ನು ಕೆಡವಿ ಕೋಟಿ ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಿಸಲಾಗುವುದು, ಈಗಾಗಲೇ 50 ಲಕ್ಷ ರೂ.ಮಂಜೂರಾಗಿದ್ದು, ಕಾಮಗಾರಿ ಆರಂಭಿಸಲು ವಾರದೊಳಗೆ ಗುದ್ದಲಿ ಪೂಜೆ ನೆರವೇರಿಸಲಾಗುವುದು ಎಂದರು.

ಸಂಘದ ಅಧ್ಯಕ್ಷ ಡಿ.ಸೋಮಣ್ಣ ಮಾತನಾಡಿ, ನಮ್ಮ ಸಹಕಾರ ಸಂಘ ಪ್ರಸಕ್ತ ಸಾಲಿನಲ್ಲಿ 87222.59 ಸಾವಿರ ರೂ.ಗಳ ನಿವ್ವಳ ಲಾಭಗಳಿಸಿದೆ ಎಂದರು.

ಸಂಘದ ಸಿಇಒ ಮಹದೇವಯ್ಯ 2024–25 ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷ ಎಚ್.ಎಸ್.ಮಹದೇವಯ್ಯ, ನಿರ್ದೇಶಕರಾದ ಎಚ್.ಎಸ್.ಮಹದೇವಪ್ಪ, ಆರ್.ಮಹದೇವಸ್ವಾಮಿ, ಪಾಪಣ್ಣ, ಮಹದೇವ, ನಾಗರಾಜು, ಪುಟ್ಟಮ್ಮ, ದಾಕ್ಷಾಯಿಣಿ, ಡಿ.ಸೋಮಣ್ಣ, ಎಂಸಿಡಿಸಿಸಿ ಬ್ಯಾಂಕ್ ಮೇಲ್ವಿಚಾರಕ ಟಿ.ಮಂಜು, ಕೃಷಿಪತ್ತಿನ ಸಹಕಾರ ಮಾಜಿ ಅಧ್ಯಕ್ಷ ಎಂ.ಪಿ.ಶಂಕರ್, ನಿರ್ದೇಶಕ ಕೂಡ್ಲೂರು ಶಿವಣ್ಣ, ಮಹೇವಯ್ಯ, ಗ್ರಾಪಂ ಸದಸ್ಯರಾದ ಸಿದ್ದರಾಜು, ನಾಗೇಂದ್ರ, ಗ್ರಾಪಂ ಮಾಜಿ ಅಧ್ಯಕ್ಷ ಲಿಂಗರಾಜು, ಬಸವರಾಜು, ರವಿಗೌಡ, ಸಂಘದ ಸದಸ್ಯರು, ರೈತ ಮುಖಂಡರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಯಳಂದೂರಲ್ಲಿ ಉಚಿತ ಅರೋಗ್ಯ ತಪಾಸಣಾ ಶಿಬಿರ



ಉಚಿತ ಅರೋಗ್ಯ ತಪಾಸಣಾ ಶಿಬಿರದಲ್ಲಿ ಯೋಜನಾಧಿಕಾರಿ ಆನಂದ ಮಾತನಾಡಿದರು.

ಯಳಂದೂರು, ಸೆ.20– ಸಮೀಪದ ಕಾಗಲವಾಡಿ ಗ್ರಾಮದಲ್ಲಿ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿಯಲ್ಲಿ ಸ್ಪಂದನ ಆಸ್ಪತ್ರೆ ಮೈಸೂರು ಇವರ ಸಹಯೋಗದೊಂದಿಗೆ ಉಚಿತ ಅರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಭದ್ರಮ್ಮ ಮಾತನಾಡಿ ಧರ್ಮಸ್ಥಳ ಸಂಘದಿಂದ ಇದೇ ರೀತಿ ನಮ್ಮ ಎಲ್ಲಾ ಗ್ರಾಮಗಳಲ್ಲಿ ಆರೋಗ್ಯ ತಪಾಸಣೆಯ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ನಡೆಯಬೇಕು. ಹಾಗೆ ಎಲ್ಲಾ ಗ್ರಾಮಗಲ್ಲಿ ಆರೋಗ್ಯದ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದರು.

ತಾಲೂಕಿನ ಯೋಜನಾಧಿಕಾರಿಗಳಾದ ಆನಂದರವರು ಪ್ರಾಸ್ತಾವಿಕವಾಗಿ ಮಾತನಾಡಿ ಮುಂದಿನ ದಿನಗಳಲ್ಲಿ ಎಲ್ಲಾ ಸಹಕಾರದೊಂದಿಗೆ ಆರೋಗ್ಯ ತಾಪಸಣಾ ಮತ್ತು ಆರೋಗ್ಯದ ಬಗ್ಗೆ ಮತ್ತು ಮಹಿಳೆಯರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವ ಮಾಹಿತಿ ನೀಡುವ ಕಾರ್ಯಕ್ರಮಗಳನ್ನು ಸ್ಪಂದನ ಆಸ್ಪತ್ರೆಯೊಂದಿಗೆ ಕೈ ಜೋಡಿಸಿ ನಡೆಸಲಾಗುವುದು ಎಂದು ತಿಳಿಸಿದರು.

ನಂತರ ಸ್ಪಂದನ ಅಸ್ಪತ್ರೆಯ ವೈದ್ಯಾಧಿಕಾರಿಗಳಾದ ಅವಿನಾಶ್ ಮಾತನಾಡಿ ಮಹಿಳೆಯರು ಅರೋಗ್ಯದ ಬಗ್ಗೆ ಹೆಚ್ಚು ಗಮನ ಹರಿಸಬೇಕು, ಮನೆಯಲ್ಲಿ ಶೌಚಾಲಯ ಮತ್ತು ಸ್ನಾನದ ಮನೆಗಳನ್ನು ಸ್ವಚತೆಯಾಗಿ ಇಡುವುದು ಮತ್ತು ಮಕ್ಕಳಿಗೆ ತಾಯಿಯೆ ಮೊದಲ ಗುರು ಇದ್ದಾಗೆ ಆದ್ದರಿಂದ ನೀವು ಮಕ್ಕಳಿಗೆ ನಿಮ್ಮ ಮನೆಗಳಲ್ಲಿ ಸ್ವಚತೆಯ ಬಗ್ಗೆ ತಿಳಿಸಿಕೊಡಿ ಆದನ್ನು ಕಾಪಾಡಿಕೊಳ್ಳಬೇಕು ಎಂದು ಹಲವು ಸಲಹೆ ಸೂಚನೆಗಳನ್ನು ತಿಳಿಸಿದರು.

ಊರಿನ ಮುಖಂಡರು ಈ ಕಾರ್ಯಕ್ರಮದ ಬಗ್ಗೆ ಉತ್ತಮ ಅಭಿಪ್ರಾಯ ವ್ಯಕ್ತಪಡಿಸಿದರು ಕಾರ್ಯಕ್ರಮದಲ್ಲಿ ಊರಿನ ಮುಖಂಡರಾದ ಜಯಶಂಕರ ಮೂರ್ತಿ, ಯಜಮಾನರು ಮಹಾದೇವಯ್ಯ, ಮಾಜಿ ಗ್ರಾಪಂ ಅಧ್ಯಕ್ಷರು ಶಿವಮ್ಮ, ಊರಿನ ಮುಖಂಡರಾದ ಮರಿಸ್ವಾಮಿ, ರವಿ ಸ್ಪಂದನ ಅಸ್ಪತ್ರೆಯ ಸಿಬ್ಬಂದಿಗಳು, ವಲಯದ ಮೇಲ್ವಿಚಾರಕರು ಶಿವಕುಮಾರ್ ಜ್ಞಾನ ವಿಕಾಸ ಸಮನ್ವಯಾಧಿಕಾರಿ ವಿನುತಾ ವಲಯದ ಸೇವಾ ಪ್ರತಿನಿಧಿಗಳು, ನಾಲ್ಕು ಗ್ರಾಮದ ಸದಸ್ಯರು ಉಪಸ್ಥಿತರಿದ್ದರು

ಕೊಡಸೋಗೆಯಲ್ಲಿ ರಾಜೇಂದ್ರ ಶ್ರೀಗಳಿಗೆ ನುಡಿನಮನ



ಕೊಡಸೋಗೆ ಗ್ರಾಮದ ಜೆ.ಎಸ್.ಎಸ್ ಪ್ರೌಢಶಾಲೆಯಲ್ಲಿ ರಾಜೇಂದ್ರ ಶ್ರೀಗಳವರ ನುಡಿನಮನ ಕಾರ್ಯಕ್ರಮ ನಡೆಯಿತು.

ಗುಂಡ್ಲುಪೇಟೆ, ಸೆ.20– ತಾಲೂಕಿನ ಕೊಡಸೋಗೆ ಗ್ರಾಮದ ಜೆ.ಎಸ್.ಎಸ್ ಪ್ರೌಢಶಾಲೆಯಲ್ಲಿ ರಾಜೇಂದ್ರ ಶ್ರೀಗಳವರ ನುಡಿನಮನ ಕಾರ್ಯಕ್ರಮ ನಡೆಯಿತು.

ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಅತಿಥಿ ಗಣ್ಯರು, ಮುಖ್ಯ ಶಿಕ್ಷಕರು, ಗ್ರಾಮದ ಮುಖಂಡರು ಪುಷ್ಪ ನಮನವನ್ನು ಸಲ್ಲಿಸಿದ ನಂತರ ಸುತ್ತೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಶಿಕ್ಷಕ, ಹವ್ಯಾಸಿ ಬರಹಗಾರ ಎನ್.ಪಿ.ಪರಶಿವಮೂರ್ತಿ ಅವರು ನುಡಿನಮನ ಸಲ್ಲಿಸುತ್ತಾ "ಸಮಾಜದ ಅಭ್ಯುದಯಕ್ಕಾಗಿ ಶ್ರೀಗಂಧದ ಕೊರಡಿನಂತೆ ತೇಯ್ದವರು" ರಾಜೇಂದ್ರ ಶ್ರೀಗಳು.

ಶ್ರೀಗಳವರು ಲೋಕ ಕಾರುಣ್ಯದ ನಿಧಿ, ಸುರಧೇನು ವಾತ್ಸಲ್ಯ ಹೃದಯಿಗಳು, ಉದಾರತೆಯ ಗಣಿ, ಸರಳತೆಯ ಸಾಕಾರಮೂರ್ತಿ, ಕಾವಿಗೆ ಗೌರವವನ್ನು ತಂದು ಕೊಟ್ಟವರು ಎಂದರು.

ಘಟದಿಂದ ಮಠವೇ ಹೊರತು ಮಠದಿಂದ ಘಟವಲ್ಲ ಎಂಬುದನ್ನು ಅಕ್ಷರಶಃ ಸಾಧಿಸಿ ತೋರಿಸಿದವರು. ಅಂದು ತ್ರಿವಿಧ ದಾಸೋಹದಲ್ಲಿ ಮಾಡಿದಂತಹ ಸಾಧನೆಯಿಂದ ಇಂದು ಲಕ್ಷಾಂತರ ವಿದ್ಯಾರ್ಥಿಗಳ ಮನೆ ಮನಗಳಲ್ಲಿ ದಿವ್ಯ ಜ್ಯೋತಿಯಾಗಿ ಬೆಳಗುತ್ತಿದ್ದಾರೆ. ಅವರು ಅಂದು ನೆಟ್ಟಂತಹ ತ್ರಿವಿಧ ದಾಸೋಹದ (ಅನ್ನ, ಅಕ್ಷರ, ಆಶ್ರಯ) ಬೀಜ ಇಂದು ಹೆಮ್ಮರವಾಗಿ ವಿಶ್ವಾದ್ಯಂತ ಪಸರಿಸಿ ಅದರ ನೆರಳಿನಲ್ಲಿ ಬದುಕನ್ನು ಕಟ್ಟಿಕೊಂಡಿದ್ದಾರೆ ಎಂದರು.

ಅ.ಭಾ.ವೀ ಮಹಾಸಭಾ ಜಿಲ್ಲಾ ಅಧ್ಯಕ್ಷ ಕೆ.ಎಂ ಬಸವಣ್ಣನವರು ಮಾತನಾಡುತ್ತಾ ಸುತ್ತೂರು ಮಠಕ್ಕೂ ಗುಂಡ್ಲುಪೇಟೆ ತಾಲೂಕಿಗೂ ಅವಿನಾಭಾವ ಸಂಬಂಧವಿದೆ. ರಾಜೇಂದ್ರ ಶ್ರೀಗಳವರು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟಿದ್ದರು ಎಂದು ಹೇಳಿದರು.

ಈ ಕಾರ್ಯಕ್ರಮದ ಸಾನ್ನಿಧ್ಯವನ್ನು ಬೊಮ್ಮಲಾಪುರದ ಶ್ರೀ ಶಿವಕುಮಾರ ಸ್ವಾಮಿಗಳು ವಹಿಸಿದ್ದರು. ನೌಕರ ವೃಂದ, ಮುಖಂಡರಾದ ಎಂ.ನಾಗಮಲ್ಲಪ್ಪ, ಕೆ.ಎಲ್.ಮಹದೇವಸ್ವಾಮಿ, ರಮೇಶ್, ಜಯಚಂದ್ರ, ಪೋಷಕ ವರ್ಗದವರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದ ನಂತರ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು.

ಸೆ.24, ಮೈಸೂರಲ್ಲಿ ರಾಜ್ಯಮಟ್ಟದ ಸೈಕ್ಲಿಂಗ್ ಸ್ಪರ್ಧೆ

ಚಾಮರಾಜನಗರ: ರಾಜ್ಯಮಟ್ಟದ ಸೈಕ್ಲಿಂಗ್ ಸ್ಪರ್ಧೆಯನ್ನು ಸೆ.24ರಂದು ಬೆಳಿಗ್ಗೆ 6 ಗಂಟೆಗೆ ಸಂಘಟಿಸಲಾಗುತ್ತಿದ್ದು, ಚಾಮರಾಜನಗರ ಜಿಲ್ಲೆಯಿಂದ ಭಾಗವಹಿಸುವ ಸೈಕ್ಲಿಂಗ್ ಕ್ರೀಡಾಪಟುಗಳು ಸೆ.23ರಂದು ಮಧ್ಯಾಹ್ನದೊಳಗೆ ಸೈಕಲ್‌ನೊಂದಿಗೆ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು. ಪುರುಷರಿಗೆ 60 ಕಿ.ಮೀ ಹಾಗೂ ಮಹಿಳೆಯರಿಗೆ 40 ಕಿ.ಮೀ ಸೈಕ್ಲಿಂಗ್ ಸ್ಪರ್ಧೆ ನಡೆಯಲಿದೆ. ಮಾಹಿತಿಗಾಗಿ ಮೊ.ಸಂ.:9449959064, 9448234883, 8884851538 ಸಂಪರ್ಕಿಸಿ.

'ಸುಜ್ಞಾನ ನಿಧಿ' ಶಿಷ್ಯ ವೇತನ ವಿತರಣೆ

ಚಾಮರಾಜನಗರ, ಸೆ.20– ಗುಂಡ್ಲುಪೇಟೆ ತಾಲೂಕಿನ ತೆರಕಣಾಂಬಿ ಸಮುದಾಯಭವನದಲ್ಲಿ ಸುಜ್ಞಾನ ನಿಧಿ ಶಿಷ್ಯ ವೇತನ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳಿಗೆ ಮಂಜೂರಾತಿ ಪತ್ರ ವಿತರಣಾ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸುವ ಮೂಲಕ ತೆರಕಣಾಂಬಿ ಠಾಣೆ ಉಪನಿರೀಕ್ಷಕ ಮಹೇಶ್, ಗುಂಡ್ಲುಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ ವಿದ್ಯಾರ್ಥಿಗಳಿಗೆ ಮಂಜೂರಾತಿ ಪತ್ರ ವಿತರಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಇದೇ ವೇಳೆ ತಾಲೂಕಿನಲ್ಲಿ 8 ಸರ್ಕಾರಿ ಶಾಲೆಗಳಿಗೆ ಗೌರವ ಶಿಕ್ಷಕರು ಆಯ್ಕೆಯಾಗಿದ್ದು ಈ ಸಂದರ್ಭದಲ್ಲಿ ಅವರನ್ನು ಅಭಿನಂದಿಸಲಾಯಿತು

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯಕ್ರಮಗಳ ಕುರಿತು ಜಿಲ್ಲಾ ನಿರ್ದೇಶಕ ಎ.ದಿನೇಶ್ ಮಾಹಿತಿ ನೀಡಿದರು. ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಪ್ರಸಾದ್ ಹಾಜರಿದ್ದರು.



ಸುಜ್ಞಾನ ನಿಧಿ ಶಿಷ್ಯ ವೇತನ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳಿಗೆ ಮಂಜೂರಾತಿ ಪತ್ರವನ್ನು ಗುಂಡ್ಲುಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿ ಸ್ವಾಮಿ ವಿತರಣೆ ಮಾಡಿದರು.

ಮೈಸೂರು ಮಿತ್ರ
ಭಾನುವಾರ 21-09-2025
ಪುಟ 9

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ದಸರಾ ಸಂಭ್ರಮ

“ಮೈಸೂರನ್ನು ಹಾಗೂ ಅದ್ಧೂರಿಯಾಗಿ ನಡೆಯುವ ದಸರಾವನ್ನು ಪ್ರೀತಿಸುವುದಕ್ಕೆ ಇರುವ ಕಾರಣಗಳಿಗೆ ಲೆಕ್ಕವಿಲ್ಲ. ಅರಮನೆಯ ನಗರ ನಮ್ಮೂರು, ಪಾರಂಪರಿಕ ಕಟ್ಟಡಗಳ ಬೀಡು ಈ ಮೈಸೂರು, ಸಾವಿರ ವರ್ಷಗಳ ಇತಿಹಾಸ ಇರುವ ನಗರ. ಹೆಸರಾಂತ ಕವಿಗಳು, ಬುದ್ಧಿಜೀವಿಗಳು, ರಾಜಕೀಯ ಧುರೀಣರು ಹುಟ್ಟಿದ ಸ್ಥಳ. ಸಂಸ್ಕೃತಿ ಆವರಿಸಿಕೊಂಡಿರುವ ಮೈಸೂರಿನಲ್ಲಿ ಕಲೆ, ಸಾಹಿತ್ಯಕ್ಕಾಗಿ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಕವಿಗಳು ಕುವೆಂಪುವಿನಿಂದ ಇಲ್ಲಿಯವರೆಗೂ ಮಹಾಪಡೆಯೇ ಇದೆ. ನಿತ್ಯವೂ ಒಂದಿಲ್ಲೊಂದು ಸಾಹಿತ್ಯ ಕಾರ್ಯಕ್ರಮ ನಡೆಯುತ್ತಿರುತ್ತದೆ. ದಸರಾ ಕವಿಗೋಷ್ಠಿ ಸಾಹಿತ್ಯಾಸಕ್ತರಿಗೆ ಇನ್ನೂ ಅದ್ಭುತ.







ಮಿರ್ಲೆ ಚಂದ್ರಶೇಖರ್
ಮೊ. 99161 29654

ನಾಡ ಹಬ್ಬ ದಸರಾ ಬಂತೆಂದರೆ ಮೈಸೂರು ನಗರವು ರಾಜ್ಯ ಹಾಗೂ ದೇಶ ವಿದೇಶಗಳ ಪ್ರವಾಸಿಗರನ್ನು ಸೆಳೆಯುತ್ತದೆ. ವರ್ಷದಿಂದ ವರ್ಷಕ್ಕೆ ಪ್ರವಾಸಿಗರ ಸಂಖ್ಯೆ ಏರುತ್ತಲೇ ಇದೆ. ಬರಲಾಗದಿದ್ದವರಿಗೆ ಕುಳಿತಲ್ಲೇ ಎಲ್ಲವನ್ನೂ ನೋಡಿ ಕಣ್ತುಂಬಿಕೊಳ್ಳಲು ಸಹಕರಿಸುವ ನಿಟ್ಟಿನಲ್ಲಿ ಸುದ್ದಿ ವಾಹಿನಿಗಳು, ಪತ್ರಿಕೆಗಳು, ಯುಟ್ಯೂಬ್, ಇನ್ಸ್ಟಾಗ್ರಾಮ್ ಹಾಗೂ ಫೇಸ್‌ಬುಕ್‌ಗಳಲ್ಲಿ ಕ್ಷಣಕ್ಷಣದ ದಸರಾ ಸಂಭ್ರಮದ ಮಾಹಿತಿಗಳನ್ನು ಆಸಕ್ತರು ಹರಿಯಬಿಡುತ್ತಾರೆ. ದಸರಾ ಪ್ರಾರಂಭವಾಗಿ ಕೊನೆಗೊಳ್ಳಲು ಸಿದ್ದತೆಯನ್ನು ಒಳಗೊಂಡಂತೆ ವರ್ಷದಲ್ಲಿ ಒಂದು ತಿಂಗಳು ಇದಕ್ಕೆಂದೇ ಜಿಲ್ಲಾಡಳಿತ ಒಳಗೊಂಡಂತೆ ಹಲವಾರು ಇಲಾಖೆಗಳು ಹಾಗೂ ಬಣ್ಣ ಬಳಿಯುವ, ಚಪ್ಪರ ಹಾಕುವ, ವಿದ್ಯುತ್ ದೀಪಗಳನ್ನು ಅಳವಡಿಸುವ, ಹೂವುಗಳಿಂದ ವಿಶೇಷ ಮಾದರಿಗಳನ್ನು ಸಿದ್ದಪಡಿಸುವ..., ಇತ್ಯಾದಿ ಕ್ಷೇತ್ರಗಳ ಅನುಭವ ಇರುವ ನುರಿತ ಕೆಲಸಗಾರರು ಮೈಸೂರು ನಗರವನ್ನು ಶೃಂಗರಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ವಿಶೇಷ ಗಣ್ಯರಿಂದ ಚಾಮುಂಡಿಬೆಟ್ಟದಲ್ಲಿನ ದೇವಾಲಯದ ಚಾಮುಂ ಡೇಶ್ವರಿ ದೇವಿಯ ಸಮ್ಮುಖದಲ್ಲಿ ವಿಘ್ನಗಳು ನಡೆಯದ ಹಾಗೆ ಮತ್ತು ನಾಡಿಗೆ ಸಮೃದ್ಧಿಯನ್ನು ನೀಡುವಂತೆ ಬೇಡಿ ದಸರಾ ಉದ್ಘಾಟನೆಗೊಳ್ಳುವ ಹೊತ್ತಿಗೆ ಮೈಸೂರು ಸ್ವರ್ಗಲೋಕವನ್ನು ಮೀರಿಸಿದ ವೈಭವವನ್ನು ಪಡೆದಿರುತ್ತದೆ.

ದಸರಾ ಹಬ್ಬವು ಸುಗಮವಾಗಿ ನಡೆಯುವುದಕ್ಕೆ ಅಗತ್ಯವಾದ ರಕ್ಷಣೆ ಕೊಡುವಲ್ಲಿ ಹಗಲಿರುಳು ಶ್ರಮಿಸುತ್ತದೆ, ಬಿಗಿ ಪೊಲೀಸ್ ಬಂದುಬಸ್ತಿಗಾಗಿ ಪ್ರತೀ ವರ್ಷದಂತೆ ಅತೀ ಹೆಚ್ಚು ಸಂಖ್ಯೆಯ ಸಿಬ್ಬಂದಿಗಳನ್ನು ನಿಯೋಜಿಸಿಕೊಂಡಿರುತ್ತದೆ. ಪೊಲೀಸರೇ ಅಗಾಧವಾದ ಸಂಖ್ಯೆಯಲ್ಲಿ ಇರುತ್ತದೆಯೆಂದರೆ ಮೈಸೂರಿಗೆ ಬಂದು ಹೋಗುವ ಪ್ರವಾಸಿಗರ ಸಂಖ್ಯೆ ಎಷ್ಟಿರಬಹುದೆಂದು ಊಹಿಸಿಕೊಳ್ಳಿ.

ದಸರಾ ಆಚರಣೆಯ ಒಂದು ತಿಂಗಳು ಮೈಸೂರು ಮೈಕೊಡವಿ ನಿಂತುಬಿಡುತ್ತದೆ. ನಗರವನ್ನು ಶೃಂಗರಿಸುವ ಕೆಲಸಗಳು ಭರದಿಂದ ಸಾಗಿ ಬಹುತೇಕ ಪೂರ್ಣಗೊಂಡಿದೆ. ಇಡೀ ನಗರವೇ ಒಂದು ಭವ್ಯ ಬಂಗಲೆಯಂತೆ ಪರಿವರ್ತನೆಗೊಂಡು ದುರಸ್ಥಿ ಕಾಮಗಾರಿಗಳು, ಸುಣ್ಣ-ಬಣ್ಣ ಬಳಿ ಯುವುದು ಎಲ್ಲೆಡೆ ಯುದ್ದೋಪಾದಿಯಲ್ಲಿ ನಡೆಯುತ್ತಿರುತ್ತದೆ. ಶೃಂಗಾರಗೊಂಡ ದೀಪಾಲಂ ಕಾರವು ದಸರಾದಲ್ಲಿ ಮುಖ್ಯ ಆಕರ್ಷಣೆಯಾಗಿರುತ್ತದೆ. ಚೆಸ್ಕಾಂ ಹಾಗೂ ಮಹಾನಗರ ಪಾಲಿಕೆ ಬಹುಶಃ ಅಷ್ಟೂ ದಿನಗಳು ನಿದ್ರಿಸುವುದಿಲ್ಲ. ಒಂದು ದಿನ ಮಲಗಿದರೆಂದರೆ ಜಗಮಗಿಸುವ ವಿದ್ಯುತ್ ದೀಪಗಳು ಇಲ್ಲವಾಗುತ್ತವೆ. ಹಾಗೆಯೇ ಸಾಮಾನ್ಯ ದಿನಗಳಿಗಿಂತ ಹಲವು ಪಟ್ಟು ಬೀಳುವ ಕಸದ ರಾಶಿಯು ನಗರದ ತುಂಬಾ ಬೆಟ್ಟಗಳಂತೆ ಬೆಳೆದು ಬಿಡುತ್ತದೆ. ಹೆಚ್ಚುವರಿ ಯಾಗಿ ಸಾವಿರಕ್ಕಿಂತಲೂ ಹೆಚ್ಚು ಪೌರ ಕಾರ್ಮಿಕರು ದಸರಾಕ್ಕಾಗಿಯೇ ದುಡಿಯುತ್ತಾರೆ. ಇವರಿಂದಾಗಿಯೇ ಸ್ವಚ್ಛನಗರಿ ಎಂಬ ಹೆಗ್ಗಳಿಕೆ ಮೈಸೂರಿನದು.

ರಾಜಮನೆತನದಿಂದ ಪ್ರಾರಂಭವಾದ ದಸರಾ ಹಬ್ಬದ ಶಾಶ್ವತ ಥೀಮ್ ಏನೆಂದರೆ Victory of Truth Over Evil ಎಂಬುದು. ಈ ಬಾರಿ ದಸರಾ 22-09-2025ರ ಸೋಮವಾರ ಉದ್ಘಾಟನೆಗೊಂಡು, ಈ ಸಲ 11 ದಿನಗಳು ನಡೆಯುವ ಸಮಾರಂಭದಲ್ಲಿ ಅಂತಿಮ ದಿನವಾದ ಗುರುವಾರ 02 ಅಕ್ಟೋಬರ್ 2025ರಂದು ಅತ್ಯಂತ ಮನಮೋಹಕ ಹಾಗೂ ಆಕರ್ಷಣೆಯ ಜಂಬೂ ಸವಾರಿ ಹಾಗೂ ಬನ್ನಿಮಂಟಪದ ಮೈದಾನದಲ್ಲಿ ನಡೆಯುವ ಪಂಜಿನ ಕವಾಯತು.

ಆನೆಗಳು ಜಂಬೂಸವಾರಿಯ ದಿನದಂದು ಅರಮನೆ ಪ್ರಾಂಗಣದಲ್ಲಿ ಗೌರವಾರ್ಥ ಸಿಡಿಸುವ ಮದ್ದಿನ ಶಬ್ದಕ್ಕೆ ಹಾಗೂ ಜನಜಂಗುಳಿಗೆ ಹೆದರದಿರಲೆಂದು ಮೂರು ದಿನಗಳು ಫಿರಂಗಿಗಳಿಂದ ಭಾರೀ ಶಬ್ದಗಳ ಸಿಡಿಮದ್ದನ್ನು ಸಿಡಿಸುವ ಮೂಲಕ ಪಳಗಿಸಿರುತ್ತಾರೆ. ಇದಕ್ಕಾಗಿ ಏಳು ಫಿರಂಗಿಗಳನ್ನು ಬಳಸಿ ಮೂರು ಸುತ್ತು ಅಂದರೆ 21 ಬಾರಿ ಸಿಡಿಸುವ ಮೂಲಕ ಆನೆಗಳ ಮನಸ್ಥಿತಿಯನ್ನು ಸದೃಢಗೊಳಿಸುತ್ತಾರೆ. ಇದರ ಜೊತೆಗೆ ನಿತ್ಯವೂ ಜಂಬೂ ಸವಾರಿ ಸಾಗುವ ಮಾರ್ಗದಲ್ಲಿ ಮರದ ಅಂಬಾರಿಯೊಂದಿಗೆ ಅಭಿಮನ್ಯುವಿನ ಸಾರಥ್ಯದಲ್ಲಿ ಎಲ್ಲಾ ಹದಿನಾಲ್ಕು ಆನೆಗಳಿಗೆ ಮುಂಜಾನೆ ಹಾಗೂ ಸಾಯಂಕಾಲ ಅರಣ್ಯ ಇಲಾಖೆಯವರು ತಾಲೀಮು ನಡೆಸುತ್ತಾರೆ. ಒಟ್ಟಿನಲ್ಲಿ ಜಂಬೂ ಸವಾರಿ ಮುಗಿಯುವವರೆಗೂ ಆನೆಗಳ ಯೋಗಕ್ಷೇಮ ಹಾಗೂ ಅವುಗಳ ತಾಲೀಮು ಕಾರ್ಯ ಅರಣ್ಯ ಇಲಾಖೆಯವರಿಗೆ ಬಹುದೊಡ್ಡ ಸವಾಲಿನ ಕೆಲಸವಾಗಿರುತ್ತದೆ. ಚಾಮುಂಡೇಶ್ವರಿಯ ಕೃಪೆಯಿಂದ ಎಲ್ಲವೂ ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ನಡೆಯುವುದು ವಿಶೇಷ.

ಹತ್ತು ದಿನಗಳು ನಗರದ ಆಯ್ದ ಮುಖ್ಯ ಸ್ಥಳಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಸಾವಿರಾರು ಕಲಾವಿದರಿಂದ ನಿರಂತರವಾಗಿ ನಡೆಯುತ್ತಿರುತ್ತದೆ. ವಿಪರ್ಯಾಸವೆಂದರೆ ಎಲ್ಲವನ್ನೂ ಒಬ್ಬ ಮನುಷ್ಯ ನೋಡಲಾಗುವುದಿಲ್ಲ. ಅರಮನೆ ಮುಂಭಾಗದಲ್ಲಿ ನಾಡಿನ ಪ್ರಸಿದ್ಧ ಕಲಾವಿದರಿಗೆ ಅವಕಾಶ ನೀಡಿರುತ್ತಾರೆ. ಉಳಿದಂತೆ ಎಲ್ಲಾ ಕಡೆ ಸ್ಥಳೀಯ ಕಲಾವಿದರುಗಳನ್ನು ಒಳಗೊಂಡಂತೆ ಹೊರಗಿನವರಿಗೂ ಅವಕಾಶವಿರುತ್ತದೆ.

ಯುವದಸರಾ, ಯುವಸಂಭ್ರಮ, ಕವಿಗೋಷ್ಠಿ, ಪೌರಾಣಿಕ ನಾಟಕಗಳು, ಕುಸ್ತಿ ಪಂದ್ಯಾವಳಿ, ರಂಗೋಲಿ ಸ್ಪರ್ಧೆ, ಫಲಪುಷ್ಪ ಪ್ರದರ್ಶನ, ಆಹಾರ ಮೇಳ, ಪುಸ್ತಕ ಪ್ರದರ್ಶನ, ಸಂಗೀತ ಕಛೇರಿಗಳು, ವಿವಿಧ ಆಟಗಳ ಸ್ಪರ್ಧೆಗಳು, ಕಾರಂಜಿ ಕೆರೆ ಬಳಿ ಸರ್ಕಸ್, ದೊಡ್ಡಕೆರೆ ಮೈದಾನದಲ್ಲಿ ವಸ್ತುಪ್ರದರ್ಶನ ಮುಂತಾದ ಹಲವು ಕಾರ್ಯಕ್ರಮಗಳು ಬೆಳಿಗ್ಗೆಯಿಂದ ಸಂಜೆವರೆಗೂ ನಡೆಯುತ್ತಿರುತ್ತದೆ. ಹತ್ತು ದಿನಗಳು ನಡೆಯುವ ಎಲ್ಲಾ ಕಾರ್ಯಕ್ರಮಗಳಲ್ಲೂ ಜನರು ತುಂಬಿರುತ್ತಾರೆ.

ಎಂತಾ ಚೆಂದವಯ್ಯಾ: ರಾತ್ರಿ ಸಮಯವಂತೂ ಜಟಕಾ ಗಾಡಿಯಲ್ಲಿ ಕುಳಿತು ಕಣ್ಣಿಗೆ ಹಬ್ಬವನ್ನುಂಟು ಮಾಡುವಷ್ಟು ಬೆಳಗುವ ದೀಪಗಳ ಅಲಂಕಾರದ ರಸ್ತೆಗಳಲ್ಲಿ ವೃತ್ತಗಳ ಬಳಸಿಕೊಂಡು ಅರಮನೆಯನ್ನು ಒಂದು ಸುತ್ತು ಬಂದರೆ ಅದರಲ್ಲಿ ಸಿಗುವ ಮಜಾ ಹೇಳುವುದಕ್ಕಿಂತ ಸ್ವತಃ ಕುಳಿತು ಅನುಭವಿಸಬೇಕು. ಅದರಲ್ಲೂ ಮಕ್ಕಳು ಬಲು ಖುಷಿಪಡುವುದು ಇನ್ನೂ ಚೆಂದ.

ಮೈಸೂರನ್ನು ಹಾಗೂ ಅದ್ದೂರಿಯಾಗಿ ನಡೆಯುವ ದಸರಾವನ್ನು ಪ್ರೀತಿಸುವುದಕ್ಕೆ ಇರುವ ಕಾರಣಗಳಿಗೆ ಲೆಕ್ಕವಿಲ್ಲ. ಅರಮನೆಯ ನಗರ ನಮ್ಮೂರು, ಪಾರಂಪರಿಕ ಕಟ್ಟಡಗಳ ಬೀಡು ಈ ಮೈಸೂರು, ಸಾವಿರ ವರ್ಷಗಳ ಇತಿಹಾಸ ಇರುವ ನಗರ. ಹೆಸರಾಂತ ಕವಿಗಳು, ಬುದ್ದಿಜೀವಿಗಳು, ರಾಜಕೀಯ ದುರೀಣರು ಹುಟ್ಟಿದ ಸ್ಥಳ. ಸಂಸ್ಕೃತಿ ಆವರಿಸಿಕೊಂಡಿರುವ ಮೈಸೂರಿನಲ್ಲಿ ಕಲೆ ಸಾಹಿತ್ಯಕ್ಕಾಗಿ ನಿರಂತರವಾಗಿ ಸೇವೆ ನೀಡುತ್ತಿರುವ ಕವಿಗಳು ಕುವೆಂಪುವಿನಿಂದ ಇಲ್ಲಿಯವರೆಗೂ ಮಹಾಪಡೆಯೇ ಇದೆ. ನಿತ್ಯವೂ ಒಂದಿಲ್ಲೊಂದು ಸಾಹಿತ್ಯ ಕಾರ್ಯಕ್ರಮಗಳು ನಡೆಯುತ್ತಿರುತ್ತದೆ. ದಸರಾ ಕವಿಗೋಷ್ಠಿ ಸಾಹಿತ್ಯಾಸಕ್ತರಿಗೆ ಇನ್ನೂ ಅದ್ಭುತ.

ಶುದ್ಧ ಗಾಳಿ: ಮೈಸೂರು ಎಲ್ಲರಿಗೂ ಒಗ್ಗುವುದು, ಗಾಳಿ, ನೀರು, ನೆಲದ ಗುಣವೇ ಅಂಥಹದ್ದು. ಇಲ್ಲೇ ಸೂರೊಂದನ್ನು ಕಟ್ಟಿಕೊಂಡು ನೆಲೆಸಲು ಇಷ್ಟಪಡದವರಿಲ್ಲ. ಉಸಿರಾಡಲು ಚಾಮುಂಡಿ ಬೆಟ್ಟವನ್ನು ಸವರಿಕೊಂಡು ಬರುವ ಶುದ್ಧಗಾಳಿ, ಕುಡಿಯಲು ಕಾವೇರಿ-ಕಪಿಲೆಯರ ಜಲಾಮೃತ, ರಾಜಮಹಾರಾಜರು ನಡೆದಾಡಿದ ಪುಣ್ಯಭೂಮಿ. ಕಣ್ಮನ ಸೆಳೆಯುವ ಪರಿಸರ, ನಾಗರಹೊಳೆ, ಬಂಡೀಪುರ ಕಾಡುಗಳು, ಪುಣ್ಯ ಸ್ಥಳಗಳಾದ ಶ್ರೀರಂಗಪಟ್ಟಣ, ಕರಿಘಟ್ಟ, ಕನ್ನಂಬಾಡಿ, ಬಲಮುರಿ, ಚುಂಚನಕಟ್ಟೆ, ಎಡತೊರೆ, ಕಪ್ಪಡಿ, ಡೋರ್ನಹಳ್ಳಿಯ ಏಸು, ಗೊಮ್ಮಟಗಿರಿ, ನಂಜನಗೂಡು, ತಿರುಮಕೂಡ್ಲು ಶಿಂಷಾ, ಸೋಮನಾಥಪುರ, ಬಿಳಿಗಿರಿರಂಗನ ಬೆಟ್ಟ, ಹಿಮವದ್‌ಗೋಪಾಲಸ್ವಾಮಿಬೆಟ್ಟ, ಚಾಮುಂಡಿ ಬೆಟ್ಟ.....ಇತ್ಯಾದಿ, ರಜಾದಿನ ವಾರಾಂತ್ಯಗಳಲ್ಲಿ ಭೇಟಿ ನೀಡುವುದೇ ಪ್ರಯಾಣಿಕರಿಗೆ ಆನಂದ.


ನಿವೃತ್ತರ ಸ್ವರ್ಗ: ನಿವೃತ್ತರ ಸ್ವರ್ಗ ಮೈಸೂರು. ಬಡಾವಣೆಗಳಿಗೆ ಒಂದರಂತೆ ಸುಸಜ್ಜಿತವಾದ ಪಾರ್ಕುಗಳು, ಮುಂಜಾನೆ ಮತ್ತು ಸಾಯಂಕಾಲ ವಾಯು ವಿಹಾರಕ್ಕಾಗಿ ಬರುವ ಗೌರವಯುತ ಜನತೆ, ವಾಯು ವಿಹಾರಕ್ಕಾಗಿ ಪಾರ್ಕುಗಳಿಗೆ ಬರುವ ಜನರಿಗೆ ಬೆಂಗಳೂರಿನ ಪಾರ್ಕುಗಳಲ್ಲಿರುವಂತೆ ಜನಜಂಗುಳಿಯ ಕಾಟವಿಲ್ಲ. ಲಲಿತಮಹಲ್ ಗ್ರೌಂಡ್, ಚಾಮುಂಡಿ ಬೆಟ್ಟ, ಲಿಂಗಾಂಬುದಿಕೆರೆ, ಕುಕ್ಕರಹಳ್ಳಿಕೆರೆ ಮತ್ತು ಕಾರಂಜಿಕೆರೆಗಳು ವಾಯುವಿಹಾರಿಗಳನ್ನು ಕೈಬೀಸಿ ಕರೆಯುತ್ತವೆ. ಬೆಳಿಗ್ಗೆದ್ದು ಈ ಸ್ಥಳಗಳಿಗೆ ವಾಕ್ ಹೋಗುವುದೇ ಒಂದು ಆನಂದ. ಇಂಥಹ ಆನಂದವನ್ನು ಅನುಭವಿಸುತ್ತಿರುವ ಮೈಸೂರಿಗರೇ ಧನ್ಯರು.

ಚಾಮುಂಡಿಬೆಟ್ಟದ ಮೇಲಿನ ಚಾಮುಂಡೇಶ್ವರಿ ದೇವಸ್ಥಾನ, ಒಂಟಿಕೊಪ್ಪಲಿನ ವೆಂಕಟರಮಣ ದೇವಸ್ಥಾನ, ಅರಮನೆ ಅಂಗಳದಲ್ಲಿರುವ ಹನ್ನೆರಡಕ್ಕಿಂತಲೂ ಹೆಚ್ಚು ದೇವಸ್ಥಾನಗಳು ಹಾಗೂ ನಗರದ ತುಂಬಾ ಇಷ್ಟೊಂದು ದೇವಸ್ಥಾನಗಳು ಇದ್ದರೂ ಸಮೀಪದ ನಂಜನಗೂಡಿನ ನಂಜುಂಡೇಶ್ವರ, ಶ್ರೀರಂಗಪಟ್ಟಣದ ರಂಗನಾಥಸ್ವಾಮಿ, ಚುಂಚನಕಟ್ಟೆಯ ಶ್ರೀಕೋದಂಡರಾಮ, ತೀ.ನರಸೀಪುರದ ಅಗಸ್ತ್ಯೇಶ್ವರ ಗುಂಜಾನರಸಿಂಹಸ್ವಾಮಿ, ಗೊಮ್ಮಟಗಿರಿಯ ಗೊಮ್ಮಟೇಶ್ವರ, ಕನ್ನಂಬಾಡಿಯ ವೇಣುಗೋಪಾಲ, ಎಡತೊರೆಯ ಅರ್ಕೇಶ್ವರ ಇತ್ಯಾದಿ ದೇವಸ್ಥಾನಗಳು ಮೈಸೂರಿನ ಜನತೆಗೆ ದೇವರನ್ನು ಪೂಜಿಸಲು ಇದ್ದರೆ ಪ್ರವಾಸಿಗರಿಗೆ ಇವು ಸುಂದರ ತಾಣಗಳು.

ಆಹಾ... ಎಂಥಾ ರುಚಿ: ದಸರಾಕ್ಕೆ ಬರುವ ಪ್ರವಾಸಿಗರಿಗೆ ನಾನಾ ಸ್ಥಳಗಳನ್ನು ನೋಡುವ ಜೊತೆಗೆ ನಾಲಿಗೆ ರುಚಿ ಮತ್ತು ಹಸಿದ ಹೊಟ್ಟೆಯನ್ನು ತಣಿಸುವುದಕ್ಕಾಗಿ ಆಗರ್ಭ ಶ್ರೀಮಂತರಿಗೆ ಸ್ಟಾರ್ ಹೊಟೇಲ್‌ಗಳು, ಇತರರಿಗೆ ನಜರ್‌ಬಾದ್‌ನಲ್ಲಿ ಇರುವ ಮೈಲಾರಿ ಹೊಟೇಲ್‌ನ ದೋಸೆ, ಮೃಗಾಲಯದ ಬಳಿ ಇರುವ ಮೈಸೂರು ರಿಫ್ರೆಷ್‌ಮೆಂಟ್, ಮಹೇಶ್‌ಪ್ರಸಾದ್, ಜಿಟಿಆರ್, ಸಂತೋಷ್ ಹೊಟೇಲ್, ಅರಮನೆ ಕೆಫೆ, ಶೃಂಗಾರ್ ಹೋಟೆಲ್, ಯುವರಾಜ, ಉಡುಪಿ ಹೊಟೇಲ್, ದೋಸೆ ಕಾರ್ನರ್, ಖಾನಾವಳಿಗಳು, ವಿಷ್ಣುಭವನ್..... ಒಂದೇ ಎರಡೇ... ಬೇಕಾದಷ್ಟು ರುಚಿರುಚಿಯಾಗಿ ಉಣಬಡಿಸುವ ಬೀದಿಬದಿಗಳಲ್ಲಿನ ಮೊಬೈಲ್ ಕ್ಯಾಂಟೀನ್‌ಗಳು.

ಮಾಂಸಹಾರಿಗಳಿಗೂ ಇಲ್ಲುಂಟು ಒಳ್ಳೆಯ ಹೊಟೇಲ್‌ಗಳು, ಬನ್ನೂರು ಸಿದ್ದೇಶ್ವರ, ಲಕ್ಷ್ಮಣ ಮೆಸ್, ಹನುಮಂತು ಹೊಟೇಲ್, ತೇಗು ಮೆಸ್, ಆರ್‌ಆರ್‌ಆರ್ ಹೊಟೇಲ್, ಬಿರಿಯಾನಿ ಪ್ಯಾರಡೈಸ್‌ಗಳು, ಸಿಂಚನ, ಎಂಪೈರ್ ಹೊಟೇಲ್. ಇವುಗಳಲ್ಲಿ ಬೆಳಿಗ್ಗೆ ತಿಂಡಿಯಿಂದ ಮಧ್ಯರಾತ್ರಿ ಊಟದವರೆಗೂ ರುಚಿರುಚಿಯಾದ ವಿವಿಧ ಐಟಂಗಳು ದೊರೆಯುವುದು.

ಬನ್ನಿ, ಸವಿಯಿರಿ: ನಮ್ಮ ಹೆಮ್ಮೆಯ ಮೈಸೂರು ನಗರದ ವಾಸಿಯಾಗಿ ನಾ ಕಂಡು, ಅನುಭವಿಸುತ್ತಿರುವ ಸುಖದ ತಾಣಗಳ ಬಗ್ಗೆ ಎಷ್ಟು ಹೇಳಿದರೂ ಸಾಲದು. ನಾನು ಮೈಸೂರಿಗನೆಂದು ಪರ ಊರಿನವರೊಂದಿಗೆ ಹೇಳಿಕೊಳ್ಳಲು ನನ್ನ ಹೃದಯ, ಮನಸ್ಸು ಆನಂದದಿಂದ ಕುಣಿಯುವುದು. ನಿಮಗೂ ಹಾಗೇ ಆಗುತ್ತದೆಯಲ್ಲವೆ?. ಹಾಗಾದರೆ ನೀವೂ ಇಲ್ಲಿನ ವೈಭೋಗವನ್ನು ಕಂಡು ಅನುಭವಿಸಲು ಕುಟುಂಬದೊಟ್ಟಿಗೆ ಬನ್ನಿ, ದಸರಾ ಆಚರಣೆಯ ದಿನಗಳಂದು ಇಲ್ಲಿಗೆ ಬಂದು ಒಂದೆರಡು ದಿನಗಳು ಇದ್ದು ಮೈಸೂರಿನ ಮಜಾ ಅನುಭವಿಸಿ ನೋಡಿ. ಆದರೆ ಒಂದು ಮನವಿ, ಪ್ರವಾಸಿಗರು ನೆಂಟರಂತೆ ಬನ್ನಿ. ಒಂದೆರಡು ದಿನವಿದ್ದು ಆತಿಥ್ಯ ಸ್ವೀಕರಿಸಿ ಸಂತೋಷದಿಂದ ಬೈ.. ಬೈ... ಹೇಳಿ. ಬಂದವರು ಇಲ್ಲೇ ಮನೆ ಮಾಡಿ ಇರುವುದು ಬೇಡ. ಏಕೆಂದರೆ ಇತ್ತೀಚಿಗೆ ಮೈಸೂರು ಅಡ್ಡಾದಿಡ್ಡಿ ಬೆಳೆಯುತ್ತಿರುವುದರಿಂದ ಟ್ರಾಫಿಕ್‌ನಲ್ಲಿ ಸಂಚರಿಸುವುದು ಕಷ್ಟವಾಗುತ್ತಿದೆ. ಉಸಿರು ಕಟ್ಟುವ ವಾತಾವರಣದಿಂದ ಮೈಸೂರು ಮತ್ತೊಂದು ಗ್ರೇಟರ್ ಬೆಂಗಳೂರು ಆಗುವುದು ಬೇಡ.



ವಾರಭವಿಷ್ಯ

21.09.2025 ರಿಂದ 27.09.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕನ್ಯಾ, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಧನುಸ್ಸು, ಕುಜ-ತುಲಾ, ಬುಧ-ಕನ್ಯಾ, ಗುರು-ಮಿಥುನ, ಶುಕ್ರ-ಸಿಂಹ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720



ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)
ನಿಮ್ಮ ಕೆಲವು ಪ್ರಮುಖ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೆಣಗಾಡುವಿರಿ. ಮನೆಯ ಸದಸ್ಯರ ಆರೋಗ್ಯದ ಕೊರತೆಯಿಂದಾಗಿ ಕುಟುಂಬದೊಂದಿಗೆ ಪ್ರವಾಸಕ್ಕೆ ಹೋಗುವ ಕಾರ್ಯಕ್ರಮ ಮುಂದೂಡಲ್ಪಡುತ್ತದೆ. ಮಕ್ಕಳು ನಿಮ್ಮ ಬಗ್ಗೆ ಅತೃಪ್ತಿಯನ್ನು ಹೊಂದುವರು. ಅಧಿಕಾರದಲ್ಲಿ ಪ್ರಗತಿ ಹೊಂದುವ ಸಾಧ್ಯತೆ ಇದೆ. ಇದು ನಿಮ್ಮಲ್ಲಿ ಅಹಂಕಾರವನ್ನು ತರುತ್ತದೆ. ತಗ್ಗಿ ಬಗ್ಗಿ ನಡೆಯಿರಿ.
ಶ್ರೀ ಸುಬ್ರಮಣ್ಯಸ್ವಾಮಿ ಆರಾಧನೆ. ಶುಭ ಸಂಖ್ಯೆ-3

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)
ವಾರದ ಆದಿಗೆ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಆಗುವುದು. ಮನೆಯ ಅಗತ್ಯ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಸೋಪಾನವಾಗುವುದು. ಕುಟುಂಬ ಸದಸ್ಯರಲ್ಲಿ ಸಂತೋಷ ಕಂಡು ಬರುವುದು. ಗುರು ಪ್ರೇರಣೆಯಿಂದ ವಿದ್ಯಾರ್ಥಿಗಳು ಮಹತ್ವವಾದುದನ್ನು ಸಾಧಿಸುವರು. ಕೃಷಿಕರಿಗೂ ಇದು ಲಾಭದಾಯಕ ವಾರ. ಕಟ್ಟಡ, ವಸ್ತು ವ್ಯಾಪಾರವೂ ಭರದಿಂದ ಸಾಗುವುದು.
ಶ್ರೀ ದೇವೀ ಪೂಜೆ. ಶುಭ ಸಂಖ್ಯೆ-7

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)
ವಾರದಾರಂಭಕ್ಕೆ ದ್ರವ್ಯ ಲಾಭ, ಮಿತ್ರ ಜನರ ಮಿಲನ ಹರ್ಷದ ವಾತಾವರಣ. ಹತ್ತಿ ವಸ್ತ್ರ ಮಾರಾಟಗಾರರಿಗೆ ಬಂಪರ್ ವ್ಯಾಪಾರ ಹಾಗೂ ಧನಲಾಭ. ವಾರ ಮಧ್ಯೆ ಮರೆವಿನಿಂದ ಕಾರ್ಯಗೇಡು. ಅನಾರೋಗ್ಯ, ವೈದ್ಯರ ದರ್ಶನ, ವ್ಯಾಕುಲತೆ ಅಧೀನರಾಗುವ ಅಗತ್ಯವಿಲ್ಲ. ಸದ್ಯದಲ್ಲೇ ನೆಮ್ಮದಿಯ ಜೀವನ ಮರು ಕಳಿಸುವುದು. ಮನೆಯಲ್ಲಿ ಸುಖ ಸಂತೋಷಗಳನ್ನು ಅನುಭವಿಸುವಿರಿ.
ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-9

ಕಟಕ (ಹೊ,ಹು,ಹೆ,ಡ,ಡಿ,ಡು)
ನಿಮ್ಮ ಆದರ್ಶಗಳೇ ನಿಮ್ಮ ಬಾಳಿಗೆ ರಕ್ಷಣೆ. ಗುರು ಹಿರಿಯರ ಕೃಪೆಗೆ ಪಾತ್ರರಾಗುವಿರಿ. ಧನ-ಧಾನ್ಯ ಲಾಭ, ಭೋಜನ ಸುಖ, ಸ್ತ್ರೀಯರೊಡನೆ ಸಲ್ಲಾಪ. ಮಾತಿನಲ್ಲಿ ಕಾಠಿಣ್ಯವನ್ನು ತೊರೆಯಬೇಕು. ವಾರ ಮಧ್ಯಾನಂತರ ದೂರ ಪ್ರಯಾಣಗಳು ಉಂಟಾಗಬಹುದು. ಡ್ರೈವಿಂಗ್‌ನಲ್ಲಿ ಜಾಗ್ರತೆ ಅವಶ್ಯಕ. ರಾತ್ರಿ ಪ್ರಯಾಣಗಳು ಕೂಡದು. ಮನೆ ದೇವರಿಗೆ ಪೂಜೆ, ಕಾಣಿಕೆ ಸಲ್ಲಿಸಿ.
ಶ್ರೀ ದುರ್ಗಾದೇವಿ ಸ್ತುತಿ. ಶುಭ ಸಂಖ್ಯೆ-4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)
ವಾರದಾರಂಭಕ್ಕೆ ನಿಮ್ಮ ಜನ್ಮ ರಾಶಿಗೆ ಬರುವ ಚಂದ್ರನಿಂದ ಹರುಷದ ವಾತಾವರಣ. ಆಸ್ತಿ ಸಂಪಾದನೆಯಲ್ಲಿ ಹಿತೈಷಿಗಳ ಸಹಕಾರಹಸ್ತ ದೊರೆಯುವುದು. ಲಾಭ ಸ್ಥಾನದಲ್ಲಿರುವ ಗುರುವಿನಿಂದ ಟೈಂ ಟೈಂಗೆ ಹಣ ಒದಗಿ ಬರುವುದು. ಯತ್ನಪಟ್ಟ ಶುಭ ಕಾರ್ಯಗಳು ಸಫಲತೆಯನ್ನು ಹೊಂದುವುದು. ಸಾಂಸಾರಿಕವಾಗಿ ತೃಪ್ತಿಕರ ಜೀವನ ಸಾಗಿದರೂ, ಅಷ್ಟಮ ಶನಿದೇವ ಮಹತ್ತರ ಕೆಲಸಗಳಲ್ಲಿ ಅಡಚಣೆ ತರುವನು.
ಶ್ರೀ ಸೂರ್ಯ ನಮಸ್ಕಾರ, ಶುಭ ಸಂಖ್ಯೆ-1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)
ಸಪ್ತಾಹದ ಆದಿಗೆ ಉತ್ತಮ ಕೆಲಸಗಳಿಂದ ಜನಾದರ ಗಳಿಸುವಿರಿ. ವ್ಯಾಪಾರ ವ್ಯವಹಾರಗಳು ಪ್ರಗತಿಯ ಹಾದಿಯಲ್ಲಿ ನಡೆಯುವುದು. ಆದರೆ ನಿಮ್ಮ ಕಾರ್ಯತಂತ್ರಗಳೇ ನಿಮಗೆ ಹೊರೆ ಎನಿಸುವುದು. ಸರ್ಕಾರಿ ಅಧಿಕಾರಿಗಳಿಗೆ ಪದ ಭ್ರಷ್ಟತೆಯ ಭೀತಿ ಕಾಡಿಸುವುದು. ವಿದ್ಯಾರ್ಥಿಗಳಿಗೆ ಪರಿಶ್ರಮವಿಲ್ಲದೆ ಪ್ರತಿಫಲ ದೊರಕದು. ಸಪ್ತಮ ಶನಿದೇವ ದಾಂಪತ್ಯದಲ್ಲಿ ವಿರಸ ಉಂಟು ಮಾಡುವನು.
ಶ್ರೀ ವಿಷ್ಣುನಾಮ ಸ್ಮರಣೆ. ಶುಭ ಸಂಖ್ಯೆ-3

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)
ಗ್ರಹಗಳು ಕಾಲಾಧೀನವಾಗಿವೆ. ಬಯಸಿದ್ದೆಲ್ಲಾ ಸಿಕ್ಕುವುದಿಲ್ಲ. ಸಿಕ್ಕಿದ್ದನ್ನೇ ಬಯಸಿಕೊಳ್ಳುವುದು ಜಾಣತನ. ಕೊಟ್ಟ ಸಾಲವನ್ನು ನಾಜೂಕಾಗಿ ವಸೂಲಿ ಮಾಡಿಕೊಳ್ಳಿ. ಗುರುಬಲವಿದೆ. ಪ್ರಾಮಾಣಿಕವಾಗಿ ಪ್ರಯತ್ನಿಸಿದ ಕಾರ್ಯಗಳು ಗುರಿ ಮುಟ್ಟುವುದು. ಸಾವಯವ ಧಾನ್ಯ ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಹಾಗೂ ಧನಲಾಭ. ಹೊಸ ವ್ಯಾಪಾರ ಆರಂಭಿಸಲು ಅಡ್ಡಿ ಇಲ್ಲ.
ಶ್ರೀ ಚಾಮುಂಡಿ ದರ್ಶನ. ಶುಭ ಸಂಖ್ಯೆ-7

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)
ಈ ಸಪ್ತಾಹದಲ್ಲಿ ಆದಾಯ ಹೆಚ್ಚಾದಂತೆ ಖರ್ಚುಗಳೂ ಹೆಚ್ಚುವುದು. ಬೇಡದ್ದಕ್ಕೆ ಖರ್ಚಾಗುವ ಸಾಧ್ಯತೆಯೇ ಹೆಚ್ಚು. ಬದುಕಿನಲ್ಲಿ ಹೊಸ ತಿರುವು ಬರುವ ಸಾಧ್ಯತೆ ಇದೆ. ನಂಬಿದವರು ಕೈ ಹಿಡಿಯುವರು. ರಾಜಕಾರಣಿಗಳಿಗೆ ಶುಭ ಯೋಗವಿದೆ. ಸತಿ-ಸುತರು ಎದುರಾಗುವುದರಿಂದ ಮನಸ್ಸಿಗೆ ಬೇಸರ ಹಾಗೂ ಗೃಹಶಾಂತಿಗೆ ಭಂಗವಾಗುವುದು. ಸ್ನಾಯು ಸೆಳೆತದಿಂದ ವೈದ್ಯರ ಭೇಟಿ ಅನಿವಾರ್ಯವಾದೀತು.
ಶ್ರೀ ವಿನಾಯಕ ಸೇವೆ. ಶುಭ ಸಂಖ್ಯೆ-5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)
ಗುರು ನಿಮ್ಮ ರಾಶ್ಯಾಧಿಪತಿ, ನಾನಾ ರೀತಿಯಿಂದ ಧನಲಾಭವಾಗುವುದು. ಹಲವರಿಗೆ ವಾಹನ ಖರೀದಿ ಯೋಗವಿದೆ. ಕೃಷಿ ಉಪಕರಣ, ರಾಸಾಯನಿಕಗಳ ಮಾರಾಟಗಾರರಿಗೆ ಹೆಚ್ಚಿನ ಧನಲಾಭ. ಸರ್ಕಾರಿ ನೌಕರರಿಗೆ ಬಡ್ತಿಯಾಗುವ ಸಾಧ್ಯತೆ ಇದೆ. ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ ಉಂಟಾಗುವುದು. ಮನೆಯಲ್ಲಿ ಹಿರಿಯರೊಬ್ಬರ ಆರೋಗ್ಯದಲ್ಲಿ ವ್ಯತ್ಯಾಸವಾದೀತು.
ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-9

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)
ವಾರದ ಪೂರ್ವಾರ್ಧದಲ್ಲಿ ನಿಮ್ಮ ರಾಶ್ಯಾಧಿಪತಿ ಶ್ರೀ ಶನಿದೇವನಿಂದ ಉದ್ಯೋಗ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಎಣ್ಣೆ ಕಾಳುಗಳು, ಎಣ್ಣೆ ಸಾಮಗ್ರಿ ವ್ಯಾಪಾರಿಗಳಿಗೆ ಹೇರಳ ಧನಲಾಭ. ಕಾರ್ಮಿಕ ವರ್ಗಕ್ಕೆ ಸರ್ಕಾರದಿಂದ ಅನುಕೂಲಗಳು ದೊರೆಯಲಿದೆ. ನೆರೆಹೊರೆಯಲ್ಲಿ ಆಸ್ತಿ ಸಂಬಂಧ ವಾದ-ವಿವಾದಗಳು ಉಂಟಾದೀತು. ರಾಹು-ಕೇತುಗಳ ಉಪಟಳವಿರುವ ಕಾರಣ ವಾಹನ ಚಾಲನೆಯಲ್ಲಿ ಜಾಗೃತರಾಗಿರಿ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-7

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)
ವಾರದ ಆದಿಗೆ ಚಂದ್ರ ಗ್ರಹದ ದೃಷ್ಟಿಯ ಪರಿಣಾಮ ಮನದಲ್ಲಿ ನವ ಉಲ್ಲಾಸ, ಶುಭ ಕಾರ್ಯಕ್ಕೆ ಪ್ರೇರಣೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆದೀತು. ಮುತ್ತು, ಹವಳ ಮಾರಾಟಗಾರರಿಗೆ ಉತ್ತಮ ಧನಲಾಭವಾಗುವುದು. ಕ್ಷೀರಜನ್ಯ, ವ್ಯಾಪಾರ, ಐಸ್ ಕ್ರೀಮ್ ವ್ಯಾಪಾರದಿಂದ ಹೆಚ್ಚಿನ ಲಾಭ. ಪಶು ಸಂಪತ್ತು ಹೆಚ್ಚುವುದು. ಹಳೆಯ ಸಾಲ ತೀರುವಳಿಗೆ ಪ್ರಯತ್ನ ಪಡುವಿರಿ. ಪಿತೃ ಸಮಾನ ವ್ಯಕ್ತಿಯ ವಿಯೋಗ ಕಾಡುವುದು.
ಶ್ರೀ ಧನ್ವಂತರಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-8

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)
ಎಲ್ಲವೂ ಎಲ್ಲ ಸಮಯದಲ್ಲೂ ನೀವು ನಿರೀಕ್ಷಿಸಿದಂತೆ ಆಗುವುದಿಲ್ಲ. ಎಲ್ಲದಕ್ಕೂ ಪ್ರಯತ್ನ ಹಾಗೂ ತಾಳ್ಮೆಯ ಅಗತ್ಯವಿದೆ. 'ಬಂದದ್ದೆಲ್ಲಾ ಬರಲಿ ಗೋವಿಂದನ ದಯೆ ಇರಲಿ' ಎಂಬಂತೆ ನಡೆಯಿರಿ. ರಾಜಕೀಯ ರಂಗದವರಿಗೆ ವಿರೋಧಿಗಳ ಉಪಟಳ. ನ್ಯಾಯಾಲಯದ ವಿಚಾರಗಳು ನಿಮ್ಮ ಪರ ಇರದು. ವಾರದ ಕಡೆಗೆ ಮರಳು ಗಾಡಿನಲ್ಲಿ 'ಓಯಸಿಸ್' ಎಂಬಂತೆ ಕೆಲವೊಂದು ಮನಸ್ಸಿಗೆ ಮುದ ನೀಡುವ ಪ್ರಸಂಗಗಳು ನಡೆಯುವುದು.
ಶ್ರೀ ಗುರುರಾಯರ ದರ್ಶನ. ಶುಭ ಸಂಖ್ಯೆ-3

ಗಿರಿಜನರಿಗೆ ಕೃಷಿ ಉಪಕರಣಗಳ ವಿತರಣೆ



ಸರಗೂರು ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ಗಿರಿಜನ ರೈತರಿಗೆ ಕೃಷಿ ಉಪಕರಣಗಳ ವಿತರಣಾ ಕಾರ್ಯಕ್ರಮವನ್ನು ಡಾ.ಆರ್.ನಂದಿನಿ, ಡಾ.ಡೆನ್ನಿಸ್ ಡಿ ಚೌಹಾಣ್, ಡಾ.ಎಸ್.ಕಮಲಾಬಾಯಿ ಉದ್ಘಾಟಿಸಿದರು.

ಸರಗೂರು: ಕೃಷಿ ವಿಜ್ಞಾನ ಕೇಂದ್ರ ಬೆಂಗಳೂರು ಅಖಿಲ ಭಾರತ ಸುಸಂಘಟಿತ ಸಮರ್ಥ ಬೆಳೆಗಳ ಸಂಶೋಧನಾ ಪ್ರಾಯೋಜನೆ ವತಿಯಿಂದ ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಸಾಮಾಜಿಕ ಆರ್ಥಿಕ ಸಬಲೀಕರಣ ಕಾರ್ಯಕ್ರಮದ ಸಹಯೋಗದಲ್ಲಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನ ಗಿರಿಜನ ರೈತರಿಗೆ ಕೃಷಿ ಉಪಕರಣಗಳನ್ನು ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದಲ್ಲಿ ವಿತರಿಸಲಾಯಿತು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಅಭಾಸು ಸಮರ್ಥ ಬೆಳೆಗಳ ಸಂಶೋಧನಾ ಪ್ರಾಯೋಜನೆಯ ಮುಖ್ಯಸ್ಥರಾದ ಡಾ. ಆರ್. ನಂದಿನಿ ಮಾತನಾಡಿ ಇಲಾಖೆಯ ಬುಡಕಟ್ಟು ಉಪಯೋಜನೆಯ ಅಡಿಯಲ್ಲಿ ಗಿರಿಜನ ರೈತರಿಗೆ ಕೃಷಿ ಉಪಕರಣಗಳನ್ನು ನೀಡಲಾಗುತ್ತಿದ್ದು, ಈ ರೀತಿಯ ಯೋಜನೆಗಳನ್ನು ಎಲ್ಲಾ ಗಿರಿಜನರು ಉಪಯೋಗಿಸಿಕೊಳ್ಳುವ ಮೂಲಕ ಕೃಷಿಯಲ್ಲಿ ಹೆಚ್ಚು ಸಾಧನೆಗಳನ್ನು ಮಾಡಲು ಮುಂದಾಗಿ ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಅಭಿವೃದ್ಧಿ ಹೊಂದಲು ಶ್ರಮಿಸಬೇಕು ಎಂದರು.

ಕಾರ್ಯಕ್ರಮದಲ್ಲಿ ಒಟ್ಟು 100 ರೈತರಿಗೆ ಕೃಷಿ ಉಪಕರಣಗಳಾದ ಮಣ್ಣು ತುಂಬುವ ಬಾಣಲಿ, ಟಾರ್ಪಾಲ್, ಅಗಲ ಬಾಯಿಯ ಗುದ್ದಲಿ, ಬಿತ್ತನೆ ರಾಗಿ, ರಾಗಿ ದಂಟಿನ ಬೀಜಗಳನ್ನು ವಿತರಿಸಲಾಯಿತು. ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಅಭಾಸು. ಸಮರ್ಥ ಬೆಳೆಗಳ ಸಂಶೋಧನಾ ಪ್ರಾಯೋಜನೆಯ ಕಿರಿಯ ಬೇಸಾಯ ತಜ್ಞರಾದ ಡಾ.ಎಸ್.ಕಮಲಾಬಾಯಿ ಮಾತನಾಡಿದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್‌ನ ಸಾಮಾಜಿಕ ಆರ್ಥಿಕ ಸಬಲೀಕರಣ ಕಾರ್ಯಕ್ರಮಗಳ ನಿರ್ದೇಶಕರಾದ ಡಾ.ಡೆನ್ನಿಸ್.ಡಿ.ಚೌಹಾಣ್ ಮಾತನಾಡಿದರು.

ವಿವೇಕ ಗ್ರಾಮೀಣ ಜೀವನಾಧಾರ ಕೇಂದ್ರದ ಹಿರಿಯ ವ್ಯವಸ್ಥಾಪಕ ಪಿ.ಡಿ. ನಾಯಕ್, ವ್ಯವಸ್ಥಾಪಕ ಚನ್ನಮಹದೇವ, ಸಾಮಾಜಿಕ ಆರ್ಥಿಕ ಸಬಲೀಕರಣ ಕಾರ್ಯಕ್ರಮ ವ್ಯವಸ್ಥಾಪಕ ಶಂಕರ್ ಬಿ.ವಿ ಸಂಯೋಜಕ ಅಕ್ಷಯ್ ಸಿಬ್ಬಂದಿಗಳಾದ ದೀಪಿಕಾ, ಶಿವಕುಮಾರ್, ಸತೀಶ್, ಸಿದ್ದೇಶ್, ರವಿಕುಮಾರ್ ಹಾಗೂ ಗಿರಿಜನ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಜಾತಿ ಗಣತಿಯಲ್ಲಿ ಗೆಜ್ಜಗಾರ ಎಂದು ನಮೂದಿಸಿ

ನಂಜನಗೂಡು, ಸೆ.20– ರಾಜ್ಯ ಸರ್ಕಾರದಿಂದ ನಡೆಯುವ ಶೈಕ್ಷಣಿಕ ಮತ್ತು ಸಾಮಾಜಿಕ, ಆರ್ಥಿಕ ಜಾತಿ ಜನಗಣತಿಯ ಸಮೀಕ್ಷೆಯಲ್ಲಿ ಗೆಜ್ಜಗಾರ ಸಮುದಾಯದ ಕುಲಬಾಂಧವರು ಜಾತಿಯ ಕಾಲಂನಲ್ಲಿ ಗೆಜ್ಜಗಾರ ಎಂದು ಕಡ್ಡಾಯವಾಗಿ ನಮೂದಿಸಬೇಕು ಎಂದು ರಾಜ್ಯ ಗೆಜ್ಜಗಾರ ರಕ್ಷಣಾ ಸಮಿತಿ ಅಧ್ಯಕ್ಷ ಬಸವರಾಜು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯದಲ್ಲಿ ನಮ್ಮ ಗೆಜ್ಜಗಾರ ಸಮುದಾಯಕ್ಕೆ ಯಾವುದೇ ಉಪಜಾತಿಗಳು ಇರುವುದಿಲ್ಲ, ಆದ್ದರಿಂದ ಎಲ್ಲರೂ ಗೆಜ್ಜಗಾರ ಎಂದು ನಮೂದಿಸಬೇಕು. ಅಲ್ಲದೆ ಸಮುದಾಯ ಕುಲಕಸುಬನ್ನೇ ನಂಬಿಕೊಂಡು ಜೀವಿಸುತ್ತಿರುವುದರಿಂದ ವೃತ್ತಿಯಲ್ಲಿ ಕೂಲಿ ಎಂದು ನಮೂದಿಸಬೇಕು. ಹಾಗಾದಲ್ಲಿ ಮಾತ್ರ ಸಮುದಾಯ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿಯಲು ಸಾಧ್ಯವಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಶಿವನಂಜ ಶೆಟ್ಟಿ, ಮಹದೇವ ಶೆಟ್ಟಿ, ಎಚ್.ವಿ. ಮಂಜುನಾಥ್, ಚನ್ನಬಸವ, ರಮೇಶ್, ವೆಂಕಟರಾಜು, ನಟರಾಜು, ಮಹೇಶ್ ಉಪಸ್ಥಿತರಿದ್ದರು.

ರೈತರ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಮೈಮುಲ್‌ನಿಂದ ಹಾಸ್ಟೆಲ್ ವ್ಯವಸ್ಥೆ

ಸದುಪಯೋಗಪಡಿಸಿಕೊಳ್ಳಲು ಮೈಮುಲ್ ಅಧ್ಯಕ್ಷ ಚಲುವರಾಜು ಮನವಿ



ಸಭೆಯಲ್ಲಿ ಡೈರಿಗೆ ಹೆಚ್ಚು ಹಾಲು ಸರಬರಾಜು ಮಾಡಿದ ಉತ್ಪಾದಕರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.20–ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟದಿಂದ ರೈತರ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ವಸತಿ ನಿಲಯದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಮೈಮುಲ್ ಅಧ್ಯಕ್ಷಆರ್.ಚೆಲುವರಾಜು ಇಂದಿಲ್ಲಿ ತಿಳಿಸಿದರು.

ತಾಲೂಕಿನ ಬೆನಕನಹಳ್ಳಿ ಗ್ರಾಮದಲ್ಲಿ ಏರ್ಪಡಿಸಿದ್ದ ಹಾಲು ಉತ್ಪಾದಕರ ಸಹಕಾರ ಸಂಘದ 2024–2025ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಉತ್ಪಾದಕರ ಮಕ್ಕಳು ಉನ್ನತ ವಿದ್ಯಾಭ್ಯಾಸ ಮಾಡಲು ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಮೈಮುಲ್ ಹೊಸ ಕಟ್ಟಡದಲ್ಲಿ 250 ಮಕ್ಕಳಿಗೆ ವಸತಿ ವ್ಯವಸ್ಥೆ ಮಾಡಲಾಗಿದ್ದು ಅಗತ್ಯ ಇರುವ ರೈತರು ಇದರ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ ಎಂದರು.

ಬೆನಕನಹಳ್ಳಿ ಗ್ರಾಮದಲ್ಲಿ ಹೈನುಗಾರಿಕೆಯಲ್ಲಿ ತೊಡಗಿಕೊಳ್ಳುವ ಅದರಲ್ಲಿ ಹೆಚ್ಚಿನ ಆಸಕ್ತಿ ಇರುವ ರೈತರು ಹೆಚ್ಚಿನ ಮಂದಿ ಇದ್ದಾರೆ. ಕೃಷಿಯಲ್ಲಿಯೇ ಹೆಚ್ಚು ಅವಲಂಬಿತರಾಗಿರುವವರು ಗ್ರಾಮದಲ್ಲಿದ್ದಾರೆ. ಹೈನುಗಾರಿಕೆಯಲ್ಲಿ ನಿಮ್ಮ ಗ್ರಾಮ ಹೆಚ್ಚಿನ ಪ್ರಗತಿ ಸಾಧಿಸಿದೆ. ತಾಲೂಕಿನಲ್ಲಿಯೇ ನಿಮ್ಮ ಸಂಘವನ್ನು ಉತ್ತಮ ಸಹಕಾರ ಸಂಘವೆಂದು ಮತ್ತು ಇಲ್ಲಿನ ಕಾರ್ಯ ನಿರ್ವಾಹಕರ ಕಾರ್ಯವೈಖರಿ ಗುರುತಿಸಿ ಗೌರವಿಸಿ ಸನ್ಮಾನಿಸಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಸಂಘವು ಮತ್ತಷ್ಟು ಅಭಿವೃದ್ಧಿ ಹೊಂದಲು ಮತ್ತಷ್ಟು ಶ್ರಮದ ಅವಶ್ಯಕತೆ ಇದೆ ಎಂದರು.

ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಮಾತನಾಡಿ, ಗ್ರಾಮದ ಹಾಲು ಉತ್ಪಾದಕರ ಸೇವೆಯಿಂದ ಪ್ರತಿದಿನ ಡೈರಿಗೆ 1500 ಲೀಟರ್ ಹಾಲು ಬರುತ್ತಿದೆ. ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಗ್ರಾಮಕ್ಕೆ ಬಿಎಂಸಿ ಕೇಂದ್ರ ಮಾಡಿಸಿಕೊಟ್ಟಿದ್ದೇವೆ. ಸಮುದಾಯ ಭವನಕ್ಕೂ ಒಕ್ಕೂಟಕ್ಕೂ ಸಂಬಂಧವಿಲ್ಲ ಹಾಗಾಗಿ ಯಾವುದೇ ಅನುದಾನ ಕೊಡಲು ಬರುವುದಿಲ್ಲ. ಒಕ್ಕೂಟದಿಂದ ಹೈನುಗಾರಿಕೆಗೆ ಬೇಕಾದ ಯಾವುದೇ ಪರಿಕರಗಳನ್ನು ಕೊಡಿಸಿಕೊಡಬಹುದು. ಆದರೆ ನಮ್ಮ ಲಿಮಿಟ್ ಮೀರಿ ಹೋಗಲು ಸಾಧ್ಯವಿಲ್ಲ ಎಂದರು.

ಸಂಘದ ಮುಖ್ಯ ಕಾರ್ಯ ನಿರ್ವಾಹಕ ಮಾದಪ್ಪ ಸಂಘದ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರಸಕ್ತ ಸಾಲಿನಲ್ಲಿ 5,01,314 ರೂ.ಲಾಭಗಳಿಸಿದೆ.ಈ ಪೈಕಿ ಹಾಲು ಉತ್ಪಾದಕ 160 ಮಂದಿಗೆ ಶೇ. 2.45 ರೂ.ಗಳ ಬೋನಸ್ ವಿತರಣೆ ಮಾಡಲಾಗುತ್ತದೆ ಎಂದರು.

ಇದೇ ವೇಳೆ ಸಂಘಕ್ಕೆ ಹೆಚ್ಚು ಹಾಲು ಸರಬರಾಜು ಮಾಡಿದ ಮಹದೇವಮ್ಮ, ಬಿ.ಎಚ್.ಸೋಮಶೇಖರ್, ಜಿ.ಆರ್.ಸುಂದರಪ್ಪ ಅನಿತಾರಾಜು ಹಾಗು ಸೋಮಣ್ಣರವರನ್ನು ಬಹುಮಾನ ನೀಡಿ ಅಭಿನಂದಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಸಂಘದ ಅಧ್ಯಕ್ಷ ಬಿ.ಎಂ.ಬಸವಣ್ಣ ಉಪಾಧ್ಯಕ್ಷ ಬಿ.ಎನ್.ಪ್ರಕಾಶ್, ನಿರ್ದೇಶಕರುಗಳಾದ ನಾಗೇಂದ್ರ, ಎಂ.ಗಿರೀಶ್, ಬಿ.ಎಸ್ ಮಹೇಶ್, ಬಿ ಎಂ.ಶಿವಕುಮಾರಸ್ವಾಮಿ, ಮಹದೇವಸ್ವಾಮಿ, ರಾಜಬುದ್ಧಿ, ಸಿ.ಮರಿಸ್ವಾಮಿ, ಶಿವಮ್ಮ ಗವಿಸಿದ್ದಯ್ಯ, ಸಿ.ಎಂ. ಇಂದ್ರಮ್ಮ, ಶಿವಮ್ಮ, ಹಾಲು ಪರೀಕ್ಷಕ ಬಿ.ಪಿ.ಮಹೇಶ್, ಬಿ ಎನ್.ಮಹೇಶ್, ಹೂವಯ್ಯ ಸೇರಿದಂತೆ ಷೇರುದಾರರು, ಗ್ರಾಮಸ್ಥರು ಹಾಜರಿದ್ದರು.

ಆತ್ಮತೃಪ್ತಿ ಇದೆ....!

ಮೈಮುಲ್ ಅಧ್ಯಕ್ಷನಾಗಿ 13 ತಿಂಗಳ ನನ್ನ ಆಡಳಿತಾವಧಿ ಮುಗಿದಿರುವುದರಿಂದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದೇನೆ. ನನ್ನ ಅಧಿಕಾರಾವಧಿಯಲ್ಲಿ ಅತ್ಯುತ್ತಮವಾಗಿ ಯಾವುದೇ ರೀತಿಯ ಕಪ್ಪು ಚುಕ್ಕೆಯಿಲ್ಲದೇ ಕರ್ತವ್ಯ ನಿರ್ವಹಿಸಿದ್ದು ಈ ಬಗ್ಗೆ ಆತ್ಮ ತೃಪ್ತಿ ಹೊಂದಿದ್ದೇನೆ. ಮುಂದಿನ 6 ತಿಂಗಳಲ್ಲಿ ಮತ್ತೆ ಚುನಾವಣೆ ಬರಲಿದ್ದು ಮತ್ತೆ ಮರು ಆಯ್ಕೆ ಬಯಸಿ ನಿಮ್ಮ ಬಳಿ ಬರಲಿದ್ದೇನೆ –ಚೆಲುವರಾಜು

ಗುಣಮಟ್ಟದ ಹಾಲು ಪೂರೈಸಲು ಮನವಿ



ಡೇರಿಗೆ ಹೆಚ್ಚಿನ ಹಾಲು ಪೂರೈಕೆ ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು

ಮೂಗೂರು: ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವುದರ ಮೂಲಕ ಸಂಘದ ಉನ್ನತಿಗೆ ಸದಸ್ಯರು ಸಹಕಾರ ನೀಡಬೇಕು ಎಂದು ಹ್ಯಾಕನೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಚ್.ಎಸ್.ಕುಮಾರ್ ಮನವಿ ಮಾಡಿದರು.

ಮೂಗೂರು ಸಮೀಪದ ಹ್ಯಾಕನೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಆಯೋಜಿಸಲಾಗಿದ್ದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದರು

ವಿಸ್ತರಣಾಧಿಕಾರಿ ಶೃತಿ ಅವರು 2024 25ನೇ ಸಾಲಿನ ವಾರ್ಷಿಕ ವಿವರವನ್ನು ಓದಿ ನಿಮ್ಮ ಸಂಘಕ್ಕೆ 28440 ರೂ. ನಿವ್ವಳ ಲಾಭ ಬಂದಿದೆ ಎಂದು ತಿಳಿಸಿದರು.

ಇದೇ ಸಂಧರ್ಭದಲ್ಲಿ ಡೇರಿಗೆ ಹೆಚ್ಚಿನ ಹಾಲು ಪೂರೈಕೆ ಮಾಡಿದ ಹಾಲು ಉತ್ಪಾದಕರನ್ನು ಸನ್ಮಾನಿಸಿ ಗೌರವಿಸಲಾಯಿತು

ಸಭೆಯಲ್ಲಿ ಸಂಘದ ಉಪಾಧ್ಯಕ್ಷೆ ಜಯಮ್ಮ, ನಿರ್ದೇಶಕರುಗಳಾದ ಮಲ್ಲೇಶ್, ಶಿವಮಲ್ಲಪ್ಪ, ಮಲ್ಲಿಕಾರ್ಜುನ್ ಸ್ವಾಮಿ, ಬಸವರಾಜ್, ಬಸವಯ್ಯ, ಶೇಖರಪ್ಪ, ಗೌರಮ್ಮಣಿ, ಪುಟ್ಟಮ್ಮ ಹಾಗೂ ಮುಖಂಡರುಗಳಾದ ಮಹಾದೇವಪ್ಪ, ಪ್ರಭುಸ್ವಾಮಿ ಎಚ್.ಪಿ. ಪುರುಷೋತ್ತಮ ಗ್ರಾಪಂ ಮಾಜಿ ಸದಸ್ಯ ರವಿ, ಜಗದೀಶ್, ರೂಪೇಶ್, ಕುಮಾರಸ್ವಾಮಿ ಇತರರು ಇದ್ದರು.

ಮಾರಿಗುಡಿ ಬೀದಿ ಮುತ್ತುಮಾರಮ್ಮ ದೇವಿಗೆ ನವರಾತ್ರಿ ಪೂಜೆ



ಸುದ್ದಿಗೋಷ್ಠಿಯಲ್ಲಿ ನವರಾತ್ರಿ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಲಾಯಿತು.

ಹುಣಸೂರು, ಸೆ.20–ನಗರ ಮತ್ತು ತಾಲೂಕಿನ ಭಕ್ತಾದಿಗಳು ನವರಾತ್ರಿ ಪೂಜಾ ಕಾರ್ಯದಲ್ಲಿ ಭಾಗಿಯಾಗಿ, ತಾಯಿಯ ಕೃಪೆಗೆ ಪಾತ್ರರಾಗಬೇಕೆಂದು ಮುತ್ತು ಮಾರಮ್ಮ ದೇವಸ್ಥಾನದ ಟ್ರಸ್ಟಿನ ಅಧ್ಯಕ್ಷ ಹೆಚ್.ವೈ. ಮಹದೇವ್ ಮನವಿ ಮಾಡಿದ್ದಾರೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನವರಾತ್ರಿ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು, ಸೆ.22 ರಿಂದ ಅ.2ರವರೆಗೆ ಮಾರಿಗುಡಿ ಬೀದಿಯ ಮುತ್ತುಮಾರಮ್ಮ ದೇವಿಗೆ ನವರಾತ್ರಿಯ ದಿನಗಳಲ್ಲಿ ಕೂಡ ದೇವಿಯನ್ನು ವಿವಿಧ ರೂಪಗಳಲ್ಲಿ ಅಲಂಕರಿಸಲಾಗುವುದು ಎಂದರು.

ಪ್ರತಿದಿನ ದೇವಿಗೆ ಹೂವಿನ ಅಲಂಕಾರದ ಜೊತೆಗೆ ನೈವೇದ್ಯ, ಪೂಜೆ ಪುರಸ್ಕಾರ, ನಡೆಯಲಿದ್ದು, ಒಂಭತ್ತು ಸೇವಾರ್ಥದಾರರಿಂದ, ಭಕ್ತಿಗೀತೆ, ಭರತನಾಟ್ಯ, ಸಂಗೀತ, ಆರ್ಕೆಸ್ಟ್ರಾ, ಗೀತಾಗಾಯನದ ಮತ್ತು ತಾಯಿಯ ದರ್ಶನಕ್ಕೆ ಬರುವ, ಭಕ್ತಾದಿಗಳಿಗೆ ಮನೋರಂಜನೆಯ ಜೊತೆಗೆ ಪ್ರಸಾದ ವಿನಿಯೋಗವಿದ್ದು, ತಾಯಿ ಮುತ್ತು ಮಾರಮ್ಮನ ಕೃಪೆಗೆ ಪಾತ್ರರಾಗಬೇಕಾಗಿ ಮನವಿ ಮಾಡಿದ್ದಾರೆ.

ಆಡಳಿತ ಮಂಡಳಿಯ ಉಪಾಧ್ಯಕ್ಷ ಹೆಚ್.ಎಸ್.ಶಿವಯ್ಯ ಮಾತನಾಡಿ, ಆಷಾಢ ಶುಕ್ರವಾರದ ಮಾಸದಲ್ಲೂ ತಾಯಿಯ ಆರಾಧನೆಯ ಬಗ್ಗೆ ವರದಿ ಮಾಡುವ ಮೂಲಕ ಅತೀಹೆಚ್ಚು ಪ್ರಚಾರ ಮಾಡಿ ಭಕ್ತಾದಿಗಳು ದೇವಸ್ಥಾನಕ್ಕೆ ಬರಲು ಕಾರಣರಾಗಿದ್ದೀರಿ. ಮುಂದೆಯೂ ಪ್ರಚಾರದ ಸಹಕಾರವಿರಲಿ ಎಂದರು.

ಟ್ರಸ್ಟಿನ ಜಂಟಿ ಕಾರ್ಯದರ್ಶಿ ಹೆಚ್.ಆರ್. ಅಶೋಕ್ ರಾಜಲಿಂಗಯ್ಯ ಮಾತನಾಡಿ, ಸೆ.24 ಬುಧವಾರ ಮಹಿಳೆಯರಿಗೆ ಮ್ಯೂಸಿಕಲ್ ಚೇರ್, ವೇಷಭೂಷಣಸ್ಪರ್ಧೆ, ಫ್ಯಾನ್ಸಿ ಡ್ರೆಸ್ ಕಾರ್ಯಕ್ರಮ ಇದ್ದು ಸಂಜೆ 3 ರಿಂದ 5 ರವರೆಗೆ ನಡೆಯಲಿದೆ. ಸೆ.27 (ಶನಿವಾರ), ಸೆ.30 (ಮಂಗಳವಾರ) ಮಹಿಳೆಯರಿಗಾಗಿ ರಂಗೋಲಿ ಸ್ಪರ್ಧೆ, ಲೆಮನ್ ಸ್ಪೂನ್ ಸ್ಪರ್ಧೆಗಳನ್ನು ಹಮ್ಮಿಕೊಂಡಿದ್ದು ಗೆದ್ದವರಿಗೆ ಸಂಗೊಳ್ಳಿ ರಾಯಣ್ಣ ಕ್ಷೇಮಾಭಿವೃದ್ಧಿ ಸಂಘದಿಂದ ಬಹುಮಾನ ನೀಡಲಾಗುವುದು ಎಂದರು.

ಬಿಜೆಪಿ ಕಾರ್ಯಕರ್ತರಿಂದ ರಕ್ತದಾನ

ಪಿರಿಯಾಪಟ್ಟಣ, ಸೆ.20– ಪ್ರಧಾನಿ ನರೇಂದ್ರ ಮೋದಿ ರವರ 75ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಗರ ಘಟಕದ ಅಧ್ಯಕ್ಷ ಟಿ.ರಮೇಶ್ ಹಾಗೂ ಉಪಾಧ್ಯಕ್ಷ ಎಚ್.ಪಿ.ದೇವೇಂದ್ರ ನೇತೃತ್ವದಲ್ಲಿ ಕಾರ್ಯಕ ರ್ತರಿಂದ ರಕ್ತದಾನ ಶಿಬಿರ ಏರ್ಪಡಿಸಲಾಗಿತ್ತು. ಮೈಸೂರು ಜಿಲ್ಲಾ ಆಸ್ಪತ್ರೆ ಸಹಯೋಗದಲ್ಲಿ ನಡೆದ ಈ ಶಿಬಿರದಲ್ಲಿ ಸುಮಾರು 50ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರು ರಕ್ತದಾನ ಮಾಡಿದರು.

ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ರಾಜೇಂದ್ರ, ಮಾಜಿ ಶಾಸಕ ಎಸ್.ಸಿ. ಬಸವರಾಜ್, ನಗರ ಘಟಕದ ಉಪಾಧ್ಯಕ್ಷ ಎಚ್.ಪಿ.ದೇವೇಂದ್ರ, ಅಧ್ಯಕ್ಷ ಟಿ.ರಮೇಶ್ ಪ್ರಧಾನ ಕಾರ್ಯದರ್ಶಿಗಳಾದ ಚನ್ನಬಸವರಾಜು, ರವಿ, ನಿಕಟ ಪೂರ್ವ ಅಧ್ಯಕ್ಷ ಆರ್.ಟಿ. ಸತೀಶ್, ಎಂ.ಎಂ.ರಾಜೇಗೌಡ, ಶುಭ ಗೌಡ, ಮಹಿಳಾ ಮೋರ್ಚಾ ಅಧ್ಯಕ್ಷೆ ಮೀನಾಕ್ಷಿ, ವೀರಭದ್ರ ನಿರ್ಮಲ ಸೇರಿದಂತೆ ಹಲವು ಕಾರ್ಯಕರ್ತರು ಉಪಸ್ಥಿತರಿದ್ದರು.



ಬಿಜೆಪಿ ಕಾರ್ಯಕರ್ತರು ಪಿರಿಯಾಪಟ್ಟಣದಲ್ಲಿ ರಕ್ತದಾನ ಮಾಡಿದರು.

ಜಾತಿ ಸಮೀಕ್ಷೆ ವೇಳೆ ಶಿವಾರ್ಚಕ ಎಂದು ಬರೆಸಲು ಮನವಿ

ಬನ್ನೂರು: ರಾಜ್ಯ ಸರ್ಕಾರ ಸೆ.22 ರಿಂದ ರಾಜ್ಯಾದ್ಯಂತ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜನಗಣತಿಯ ಸಮೀಕ್ಷೆಯಲ್ಲಿ ಶಿವಾರ್ಚಕ ಸಮುದಾಯದವರು ಜಾತಿ ಪಟ್ಟಿಯಲ್ಲಿ ಕ್ರಮ ಸಂಖ್ಯೆ ಎ 1320 ರಲ್ಲಿರುವ ಶಿವಾರ್ಚಕ ಎಂದೇ ಬರೆಸಬೇಕೆಂದು ಗೊರವನಹಳ್ಳಿ ಶ್ರೀ ಆದಿಶಕ್ತಿ ಶಕ್ತಿ ಪೀಠ ಗುರುಕುಲದ ಡಾ.ಬೋಳಪ್ಪ ಗುರೂಜಿ ತಿಳಿಸಿದರು. ಗೊರವನಹಳ್ಳಿ ಗ್ರಾಮದ ಶ್ರೀ ಆದಿಶಕ್ತಿ ಶಕ್ತಿ ಪೀಠ ಗುರುಕುಲದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದರು. ತಮ್ಮ ಸಮುದಾಯದವರು ಯಾವುದೇ ಗೊಂದಲಕ್ಕೆ ಒಳಗಾಗದೇ ಧರ್ಮ ಕಾಲಂನಲ್ಲಿ 'ಹಿಂದೂ' ಎಂದು ಬರೆಸಿ ಉಪಜಾತಿಯ ಕಾಲಂನಲ್ಲಿ ಯಾವುದು ಇಲ್ಲ ಎಂದು ಬರೆಸಬೇಕೆಂದು ಕರೆ ನೀಡಿದರು. ಇದರಿಂದ ಸರ್ಕಾರಕ್ಕೆ ನಿಖರವಾದ ಜನ ಸಂಖ್ಯೆಯ ಮಾಹಿತಿ ದೊರೆಯಲಿದೆ ಎಂದರು.

ಜಾತಿ ಸಮೀಕ್ಷೆಯಲ್ಲಿ ಕುರುಬ ಎಂದು ಬರೆಸಲು ಶಾಸಕರ ಮನವಿ



ತಾಲೂಕು ಕುರುಬ ಸಮಾಜದ ಮುಖಂಡರ ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ: ರಾಜ್ಯದಲ್ಲಿ ಕುರುಬ ಸಮಾಜದವರ ಜನಸಂಖ್ಯೆ ನಿಖರವಾಗಿ ತಿಳಿಯಬೇಕಾದರೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಜಾತಿ ಕಾಲಂ 9 ರ ಗೆಜೆಟ್ ನಂ 0809 ರಲ್ಲಿ ಕುರುಬ ಮತ್ತು ಉಪಜಾತಿ ಕಾಲಂನಲ್ಲಿಯು ಕುರುಬ ಎಂದು ಕಡ್ಡಾಯವಾಗಿ ಬರೆಸಬೇಕು ಎಂದು ಶಾಸಕ ಡಿ.ರವಿಶಂಕರ್ ಮನವಿ ಮಾಡಿದರು.

ಪಟ್ಟಣದ ಚೀರನಹಳ್ಳಿ ರಸ್ತೆಯಲ್ಲಿರುವ ಸಂಗೊಳ್ಳಿ ರಾಯಣ್ಣ ಸಮುದಾಯ ಭವನದಲ್ಲಿ ತಾಲೂಕು ಕುರುಬರ ಸಂಘದ ವತಿಯಿಂದ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಪೂರ್ವಭಾವಿ ಮತ್ತು ಕುರುಬ ಸಮುದಾಯದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಪ್ರಸ್ತುತ ನಾವು ಮಹತ್ವದ ಕಾಲಘಟ್ಟದಲ್ಲಿದ್ದು ಮುಂದಿನ ದಿನಗಳಲ್ಲಿ ಕುರುಬ ಸಮಾಜದ ಮುಖಂಡರು ಮತ್ತು ಪ್ರಮುಖರು ಸಮೀಕ್ಷಾ ಕಾರ್ಯದಲ್ಲಿ ಗಂಭೀರವಾಗಿ ಪಾಲ್ಗೊಂಡು ಪ್ರತಿಯೊಂದು ಕುರುಬರ ಕುಟುಂಬದವರಿಗೂ ಈ ಸಂಬಂದ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ಸಮೀಕ್ಷೆಯಲ್ಲಿ ಸಮರ್ಪಕವಾಗಿ ಬರೆಯಿಸಿದರೆ ಭವಿಷ್ಯದಲ್ಲಿ ಅದು ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಸಹಕಾರಿಯಾಗಲಿದ್ದು ಅದರೊಂದಿಗೆ ಪ್ರತಿಭಾವಂತರು ಶೈಕ್ಷಣಿಕವಾಗಿ ಸಾಧನೆ ಮಾಡುವುದರ ಜತೆಗೆ ಸರ್ಕಾರಿ ಉದ್ಯೋಗ ಪಡೆಯಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿ.ಪಂ.ಮಾಜಿ ಸದಸ್ಯ ಅಮಿತ್.ವಿ. ದೇವರಹಟ್ಟಿ, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ ಮಾತನಾಡಿದರು.

ತಾಲೂಕು ಕುರುಬರ ಸಂಘದ ನಿರ್ದೇಶಕರಾದ ಕೆ.ಹೆಚ್.ಬುಡೀಗೌಡ, ಕೆ.ಎಂ. ಶ್ರೀನಿವಾಸ್, ಎಂ.ಅಪ್ಪಾಜಿಗೌಡ, ಸಾಕರಾಜು, ಹುಚ್ಚೇಗೌಡ, ರಂಗೇಶ್, ಸಿ.ಕೆ.ಮನೋಹರ, ಕೃಷ್ಣೇಗೌಡ, ಜಿ.ಪಂ.ಮಾಜಿ ಸದಸ್ಯರಾದ ಜಿ.ಆರ್.ರಾಮೇಗೌಡ, ಜಯರಾಮೇಗೌಡ, ಪುರಸಭೆ ಸದಸ್ಯ ನಟರಾಜು, ಎಂಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಎಸ್.ಸಿದ್ದೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ.ನಾಗರಾಜು, ಮಾಜಿ ಸದಸ್ಯ ಹೆಬ್ಬಾಳುರಾಜಶೇಖರ್, ತಾ.ಪಂ.ಮಾಜಿ ಅಧ್ಯಕ್ಷ ಬಿ.ಸಿ.ಮಹದೇವ್, ಮಾಜಿ ಸದಸ್ಯ ಸಣ್ಣತಮ್ಮೇಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಬಿ.ಎಸ್.ಚಂದಹಾಸ, ಕುರುಬ ಸಮಾಜದ ಮುಖಂಡರಾದ ಹಂಪಾಪುರರವಿ, ಪುಟ್ಟರಾಜು, ಗಂಧನಹಳ್ಳಿಹೇಮಂತ್, ಎಂ.ರಮೇಶ್, ದೆಗ್ಗನಹಳ್ಳಿಆನಂದ್, ಮಹೇಶ್‌ಗೌಡ, ವೆಂಕಟರಾಮು, ಚಂದ್ರು ಸೇರಿದಂತೆ ಇನ್ನಿತರರು ಹಾಜರಿದ್ದರು.

ಅದ್ದೂರಿ ಗಣೇಶ ವಿಸರ್ಜನೆ



ಕಂಪಲಾಪುರದ ಜನತಾ ಬಡಾವಣೆಯ ಶ್ರೀ ಕರಕಂಟೇಶ್ವರ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗಣಪತಿ ಮೂರ್ತಿಯನ್ನು ಶನಿವಾರ ವಿಸರ್ಜಿಸಲಾಯಿತು. ಸಾವಿರಾರು ಮಂದಿ ಸಂಜೆವರೆಗೂ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕೆರೆಯಲ್ಲಿ ಮೂರ್ತಿಯನ್ನು ವಿಸರ್ಜಿಸಲಾಯಿತು.

ತಾಲೂಕು ಮಟ್ಟದ ಪೋಷಣ ಅಭಿಯಾನ್ ಮಾಸಾಚರಣೆ



ಪೋಷಣ ಅಭಿಯಾನ್ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸುತ್ತಿರುವುದು.

ಹೆಚ್.ಡಿ.ಕೋಟೆ: ಸ್ಥಳೀಯವಾಗಿ ಸಿಗುವ ಆಹಾರ ಪದಾರ್ಥಗಳನ್ನು ಬಳಸಿಕೊಂಡು ಸಮತೋಲಿತ ಆಹಾರವನ್ನು ಸೇವಿಸುವ ಮೂಲಕ ಉತ್ತಮ ಅರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸಿ.ಸಿಡಿಪಿಓ ದೀಪಾ ತಿಳಿಸಿದರು.

ತಾಲೂಕಿನ ಪಡುಕೋಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಾಡಹಂಪಾಪುರ ಶಾಲಾ ವರಣದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಕಾನೂನು ಸೇವೆಗಳ ಪ್ರಾಧಿಕಾರ, ಆರೋಗ್ಯ ಇಲಾಖೆ ಸಹಯೋಗದಲ್ಲಿ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ತಾಲೂಕು ಮಟ್ಟದ ಪೋಷಣ ಅಭಿಯಾನ್ ಮಾಸಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸೆಪ್ಟೆಂಬರ್ ತಿಂಗಳಲ್ಲಿ ಪೋಷಣ್ ಮಾಸಾಚರಣೆ ಬರೀ ಕಾರ್ಯಕ್ರಮವಾಗಿ ರಬಾರದು. ಎಲ್ಲಾ ಮನೆಗಳಲ್ಲಿ ಪೌಷ್ಠಿಕ ಆಹಾರ ಸೇವನೆ ಮಾಡಬೇಕು ಎಂದು ತಿಳಿಸಿದರು.

ನಂತರ ತಾಲೂಕು ಆರೋಗ್ಯ ಅಧಿಕಾರಿ ಡಾ.ರವಿಕುಮಾರ್ ಮಾತನಾಡಿ, ಗರ್ಭಿಣಿ, ಬಾಣಂತಿ ಹದಿಹರೆಯದವರಲ್ಲಿಯೇ ರಕ್ತಹೀನತೆ ಹೆಚ್ಚಾಗಿ ಕಂಡುಬರುತ್ತದೆ. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಎಂಬ ಘೋಷಣೆಯಂತೆ ಆರೋಗ್ಯ ಉತ್ತಮ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕೋಟೆ ತಾಲೂಕು ವಕೀಲರ ಸಂಘದ ಅಧ್ಯಕ್ಷ ಗಂಗರಾಜು, ಮಕ್ಕಳ ಕಲ್ಯಾಣ ಸಮಿತಿ ಸದಸ್ಯದ ಸರಸ್ವತಿ, ಪ್ಯಾನಲ್ ವಕೀಲರಾದ ಶಂಕರ್, ಕುಮಾರ್, ಅಭಿ ಕುಮಾರ್, ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಸುಮಿತ್ರ, ಸದಸ್ಯರಾದ ಲಕ್ಷ್ಮಿ, ದಿವಾಕರ್, ವೆಂಕಟೇಶ್, ಗಾಪಂ ಕಾರ್ಯದರ್ಶಿ ಕೆಂಪನಾಯ್ಕ, ಮುಖ್ಯ ಶಿಕ್ಷಕ ಅಶ್ವಿನಿ ಸಂಜೀವಿ, ಸಂಘದ ಸದಸ್ಯರಾದ ಗಾಯತ್ರಿ, ಮೇಲ್ವಿಚಾ ರಕರು, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತೆಯರು, ಗ್ರಾಮಸ್ಥರು, ಮತ್ತು ಮಹಿಳಾ ಸಂಘದವರು ಹಾಜರಿದ್ದರು.

ಅಭಿವೃದ್ಧಿಯತ್ತ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ




ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಕುರಹಟ್ಟಿ ಮಹೇಶ್ ಉದ್ಘಾಟಿಸಿ, ಮಾತನಾಡಿದರು.

ನಂಜನಗೂಡು: ನರಸೇಗೌಡ, ಎಂ.ಮಹದೇವ್ ಅವರಂತಹ ಮುತ್ಸದ್ದಿಗಳು ತಾಲೂಕಿನ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದ್ದು, ಸಂಘ ಸದೃಢವಾಗಿ ಅಭಿವೃದ್ಧಿಯತ್ತ ಮುನ್ನಡೆದಿದೆ ಎಂದು ಸಂಘದ ಅಧ್ಯಕ್ಷ ಕುರಹಟ್ಟಿ ಮಹೇಶ್ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಶನಿವಾರ ಸಂಘದ ವಾರ್ಷಿಕ ಮಹಾಸಭೆ ಮತ್ತು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಹಿರಿಯ ಸಹಕಾರಿ ಧುರೀಣ ನರಸೇಗೌಡರು ಅಂದು ಕೇವಲ 300 ರೂಪಾಯಿ ಬೆಲೆಗೆ ಖರೀದಿಸಿದ್ದ ಒಂದು ಎಕರೆ ಭೂಮಿ ಇಂದು ಕೋಟ್ಯಾಂತರ ರೂಪಾಯಿ ಸ್ವತ್ತಾಗಿದೆ. ಬಂಡವಾಳದ ಕೊರತೆಯಿಂದ ಸಂಘಕ್ಕೆ ಸೇರಿದ 5 ಎಕರೆ ಜಾಗವನ್ನು ನಿವೇಶನಗಳಾಗಿ ಅಭಿವೃದ್ಧಿಪಡಿಸಿ ಬಂಡವಾಳ ಕ್ರೋಢೀಕರಿಸಿ ಸಂಘದ ಅಭಿವೃದ್ಧಿಗೆ ಬಳಸಲಾಗಿದೆ. ಸಂಘವನ್ನು 25 ವರ್ಷಗಳ ಕಾಲ ನಿರ್ದೇಶಕನಾಗಿ, 13 ವರ್ಷಗಳ ಕಾಲ ಅಧ್ಯಕ್ಷನಾಗಿ ಮುನ್ನಡೆಸುವ ಸದಾವಕಾಶವನ್ನು ಸದಸ್ಯರು ಮಾಡಿಕೊಟ್ಟಿದ್ದೀರಿ ಎಂದರು.

ಯಡದೊರೆಯಲ್ಲಿ ಡಾ.ವಿಷ್ಣು ನಾಮಫಲಕ ಅನಾವರಣ



ನಾಮಫಲಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಸಮಾಜ ಸೇವಕ ಟಿ.ವಿ.ಸುರೇಶ್, ಕನ್ನಡ ಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಚು ಅವರನ್ನು ಸನ್ಮಾನಿಸಲಾಯಿತು

ತಿ.ನರಸೀಪುರ ಸೆ.20– ತಾಲೂಕಿನ ಯಡದೊರೆ ಗ್ರಾಮದಲ್ಲಿ ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗವು ನಿರ್ಮಿಸಿರುವ ವಿಶೇಷ ವಿನ್ಯಾಸದ ನಾಮಫಲಕವನ್ನು ಸಮಾಜ ಸೇವಕ ಟಿ.ವಿ.ಸುರೇಶ್ ಅಲಿಯಾಸ್ ಈರುಳ್ಳಿ ಅನಾವರಣ ಮಾಡಿದರು.

ಸಾಹಸಸಿಂಹ, ಅಭಿನಯ ಭಾರ್ಗವ, ಡಾ.ವಿಷ್ಣುವರ್ಧನ್ ಅವರಿಗೆ ರಾಜ್ಯ ಸರ್ಕಾರ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ತಾಲೂಕಿನ ಯಡದೊರೆ ಗ್ರಾಮದ ಅಭಿಮಾನಿ ಬಳಗವು ವಿಷ್ಣು ಅವರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ನಿರ್ಮಿಸಿರುವ ನಾಮಫಲಕವು ವಿಶೇಷತೆ ಹೊಂದಿದ್ದು, ನಾಮ ಫಲಕದ ಎರಡು ಬದಿಯಲ್ಲಿ ಸಿಂಹದ ಆಕೃತಿಯನ್ನು ಅಳವಡಿಸಲಾಗಿದ್ದು, ನೂರಾರು ಅಭಿಮಾನಿಗಳು ಹಾಗೂ ಗ್ರಾಮಸ್ಥರ ಸಮ್ಮುಖದಲ್ಲಿ ನಾಮಫಲಕ ಅನಾವರಣ ಮಾಡಲಾಯಿತು.

ಈ ವೇಳೆ ಮಾತನಾಡಿದ ಟಿ.ವಿ.ಸುರೇಶ್ ವಿಷ್ಣುವರ್ಧನ್ ಅವರು ಕೇವಲ ನಟ ಮಾತ್ರವಲ್ಲ, ಸಮಾಜ ಸೇವಕರೂ ಆಗಿದ್ದರು. ಅವರು ಪರದೆ ಮೇಲೆ ಹೇಗಿದ್ದರೊ ಹಾಗೆಯೇ ಸಾಹಸಸಿಂಹನಂತೆ ನಡೆದುಕೊಂಡರು. ಎಡಗೈಲಿ ಕೊಟ್ಟಿದ್ದು ಬಲಗೈಗೆ ಗೊತ್ತಾಗಬಾರದು ಎಂಬಂತೆ ಅವರು ಅದೇಷ್ಟೋ ಜನರಿಗೆ ಸಹಾಯ ಮಾಡಿದ್ದು, ಅವರು ಕಾಲವಾದ ನಂತರ ಅವರ ಸೇವೆಗಳು ಬಹಿರಂಗಗೊಳ್ಳುತ್ತಿವೆ. ಅಂತಹ ಮಹಾನ್ ನಟನಿಗೆ ಎಂದೋ ಸಿಗಬೇಕಿದ್ದ ಕರ್ನಾಟಕ ರತ್ನಪ್ರಶಸ್ತಿ ಈಗ ದೊರಕಿದೆ.ಅವರು ಈ ಪ್ರಶಸ್ತಿಗೆ ಮಾತ್ರ ಅರ್ಹರಲ್ಲದೆ ಪದ್ಮಭೂಷಣ ಪ್ರಶಸ್ತಿಗೂ ಅರ್ಹರಾಗಿದ್ದಾರೆ ಎಂದರು.

ಕನ್ನಡ ಸೇನೆ ಜಿಲ್ಲಾ ಕಾರ್ಮಿಕ ಘಟಕದ ಉಪಾಧ್ಯಕ್ಷ ಕೆ.ರಾಚು ಮಾತನಾಡಿ, ಅಭಿನಯ ಭಾರ್ಗವ ಡಾ.ವಿಷ್ಣುವರ್ಧನ್ ರವರು ಜನರ ಸೇವೆ ಹಾಗೂ ಕನ್ನಡ ಚಲನ ಚಿತ್ರ ಕ್ಷೇತ್ರಕ್ಕೆ ನೀಡಿದ ಕೊಡುಗೆ ಸದಾ ನಮ್ಮ ನೆನಪಿನಲ್ಲಿ ಉಳಿಯುತ್ತದೆ ಎಂದರು.

ಈ ವೇಳೆ ಚಿಕ್ಕಹಳ್ಳಿ ಮಹದೇವು, ಕರುನಾಡ ರಕ್ಷಣಾ ವೇದಿಕೆಯ ಜಿಲ್ಲಾಧ್ಯಕ್ಷ ವೇಣುಗೋಪಾಲ್, ಕನ್ನಡ ರಕ್ಷಣಾ ವೇದಿಕೆಯ ಬಂಡೀಪಾಳ್ಯ ಸಂತೋಷ್, ವಿಷ್ಣುವರ್ದನ್ ಅಭಿಮಾನಿ ಬಳಗದ ಪಾನೀಪೂರಿ ಸಂತು, ಕೃಷ್ಣ, ನಿಂಗರಾಜು, ಬಸವಣ್ಣ, ಆಟೋ ಸಿದ್ದರಾಜು, ಜೋತೇಶ್, ಸಾಮ್ರಾಟ್ ನಾಗರಾಜು, ನಂಜುಂಡ ಸ್ವಾಮಿ (ಗಜ)ನಾಗರಾಜು, ಪುಟ್ಟಸುಂದರ, ತಬಲಾ ರಾಚಪ್ಪ, ಮಹೇಶ್ ಹಾಗೂ ಮಹಿಳೆಯರು, ಗ್ರಾಮಸ್ಥರು ಹಾಜರಿದ್ದರು.

ಟೀಕಿಸುವವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹ

ಪಿರಿಯಾಪಟ್ಟಣ: ಸ್ಥಳೀಯ ಶಾಸಕ, ಸಚಿವ ಕೆ.ವೆಂಕಟೇಶ್ ಅವರ ಅಭಿವೃದ್ಧಿ ಕಾರ್ಯಗಳ ವಿರುದ್ಧ ಟೀಕಿಸುತ್ತ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿರುವ ಅನಾಮಧೇಯ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಮುಖಂಡರು ಒತ್ತಾಯಿಸಿದ್ದಾರೆ. ಪಟ್ಟಣದ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕಾಂಗ್ರೆಸ್ ಮುಖಂಡರು ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ಟಿ.ಸ್ವಾಮಿ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ತಾಲೂಕಿನ ಅನಾಮಧೆಯ ವ್ಯಕ್ತಿ ಸಚಿವ ಕೆ.ವೆಂಕಟೇಶ್ ಅವರ ಅಭಿವೃದ್ಧಿ ಕಾರ್ಯಗಳನ್ನು ಟೀಕಿಸುತ್ತ ಮತ್ತು ಸಚಿವರು ಮತ್ತು ಅವರ ಪುತ್ರ ನಿತಿನ್ ಅವರ ಬಗ್ಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ವಿಡಿಯೋ ತುಣುಕನ್ನು ಹರಿಬಿಟ್ಟಿದ್ದಾನೆ. ಈಗಾಗಲೇ ಈತನ ವಿರುದ್ಧ ಈ ಹಿಂದೆ ಹನಿಟ್ರ್ಯಾಪ್ ಪ್ರಕರಣದಲ್ಲಿ ಮೊಕದ್ದಮೆ ದಾಖಲಾಗಿದ್ದು, ಸಾಮಾಜಿಕವಾಗಿ ಅಶಾಂತಿ ಕದಡುವ ವಾತಾವರಣವನ್ನು ಈತನು ಸೃಷ್ಟಿ ಮಾಡುತ್ತಿದ್ದಾನೆ ಎಂದರು.

ಸಾವಿತ್ರಮ್ಮ ನಿಧನ



ಹುಣಸೂರು, ಸೆ.20– ದಿ.ಪ್ರೊಫೆಸರ್ ಸಿ.ಶಿವರುದ್ರಯ್ಯನವರ ಧರ್ಮ ಪತ್ನಿ ಶ್ರೀಮತಿ ಸಾವಿತ್ರಮ್ಮ ಶನಿವಾರ ನಿಧನರಾದರು. ಇದೇ ದಿನ ಸಂಜೆ ನಾಲ್ಕು ಗಂಟೆಗೆ ಲಲಿತಾದ್ರಿಪುರದ ವೀರಶೈವ ರುದ್ರ ಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಮೀಕ್ಷೆಯಿಂದ ಜಾತಿ, ಧರ್ಮದಲ್ಲಿ ಒಡಕು ಮೂಡಿಸುತ್ತಿಲ್ಲ

ಮೈಸೂರಿನಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಮಹದೇವಪ್ಪ ಸ್ಪಷ್ಟನೆ

- ಹಿಂದೂ ಧರ್ಮ ಒಡೆಯುವ ಅಜೆಂಡಾ ನಮ್ಮಲ್ಲಿಲ್ಲ
- ಮತಾಂತರಗೊಳ್ಳುವವರ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡಲ್ಲ
- ಮತಾಂತರ ಆದವರ ಮೂಲ ಜಾತಿ ಮಾತ್ರ ಉಲ್ಲೇಖ
- ಸಮೀಕ್ಷೆಯನ್ನು ಯಾವ ಸಚಿವರೂ ವಿರೋಧಿಸಿಲ್ಲ


ಮಹದೇವಪ್ಪ

ಮೈಸೂರು, ಸೆ.20(ಬಿಎಲ್‌ಯು)– ಸೆಪ್ಟೆಂಬರ್ 22 ರಿಂದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಮೂಲಕ ಜಾತಿಗಳ ಸ್ಥಿತಿ, ಗತಿ ಅಧ್ಯಯನ ಮಾಡುತ್ತೇವೆಯೇ ಹೊರತು ಜಾತಿ– ಧರ್ಮದಲ್ಲಿ ಒಡಕು ಮೂಡಿಸುವುದಿಲ್ಲ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಾತಿ ಗಣತಿ ಮೂಲಕ ಹಿಂದೂ ಧರ್ಮ ಒಡೆಯುತ್ತಿದ್ದಾರೆ ಎಂಬ ಬಿಜೆಪಿಯವರ ಆರೋಪ ಸತ್ಯಕ್ಕೆ ದೂರ ಎಂದು ಮರು ಸ್ಪಷ್ಟನೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿಂದೂ ಧರ್ಮ ಒಡೆಯುವ ಅಜೆಂಡಾ ಇಟ್ಟುಕೊಂಡಿದ್ದಾರೆ ಎಂಬುದು ಆಧಾರರಹಿತ ಆರೋಪ. ಇಂತಹ ಆಪಾದನೆ ಶುದ್ಧ ಸುಳ್ಳು ಹಾಗೂ ಕಟ್ಟು ಕಥೆ. ಜಾತಿ ಹಾಗೂ ಧರ್ಮದಲ್ಲಿ ಒಡಕು ಮೂಡಿಸುವುದು ಬಿಜೆಪಿಯವರ ಕೆಲಸವೇ ಹೊರತು, ನಮ್ಮ ಕೆಲಸವಲ್ಲ ಎಂದು ಡಾ.ಮಹದೇವಪ್ಪ ತಿರುಗೇಟು ನೀಡಿದರು.

ಮತಾಂತರ ತಡೆಯುವ ಹಕ್ಕು ಯಾರಿಗೂ ಇಲ್ಲ: ಯಾರಾದರೂ ಮತಾಂತರ ಆಗುತ್ತೇವೆ ಎಂದರೆ ಅದನ್ನು ತಡೆಯುವ ಹಕ್ಕು ಯಾರಿಗೂ ಇಲ್ಲ. ಜನರ ಸ್ವಾತಂತ್ರ್ಯಕ್ಕೆ ಅಡ್ಡಿ ಮಾಡಲು ನಾವು ಯಾರು ಎಂದು ಪ್ರಶ್ನಿಸಿದ ಸಚಿವರು, ನಾನು ಹಿಂದೂವಾಗಿ ಹುಟ್ಟಿದ್ದೇನೆ, ಆದರೆ ಹಿಂದೂವಾಗಿ ಸಾಯುವುದಿಲ್ಲ ಎಂದು ಡಾ.ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದರು ಎಂದು ಹೇಳಿದರು.

ಹೊಸ ಜಾತಿ ಸೃಷ್ಟಿಸಲ್ಲ: ನಾವು ಯಾವುದೇ ಹೊಸ ಜಾತಿಗಳನ್ನು ಸೃಷ್ಟಿ ಮಾಡುತ್ತಿಲ್ಲ, ಸಂವಿಧಾನ ಆಶಯ ಗಾಳಿಗೆ ತೂರಿ ಹೊಸ ಜಾತಿ ಸೃಷ್ಟಿ ಮಾಡಲು ಸಾಧ್ಯವಿದೆಯೇ ಎಂದು ಮರು ಪ್ರಶ್ನಿಸಿದ ಡಾ.ಮಹದೇವಪ್ಪ, ಕುರುಬ ಕ್ರಿಶ್ಚಿಯನ್, ಒಕ್ಕಲಿಗ ಕ್ರಿಶ್ಚಿಯನ್ ಎಂದು ಮತಾಂತರವಾದವರ ಮೂಲ ಜಾತಿ ನಮೂದಿಸುತ್ತಿದ್ದೇವೆ ಅಷ್ಟೆ. ಇದರಲ್ಲಿ ಯಾವ ತಪ್ಪಿದೆ ಎಂದು ಕೇಳಿದರು.

ರಾಜ್ಯ ಕಾಂಗ್ರೆಸ್ ಸರ್ಕಾರದ ಒಳ್ಳೆಯ ಕೆಲಸದಲ್ಲಿ ವಿವಾದ ಸೃಷ್ಟಿಸುವುದು ಬಿಜೆಪಿಯ ಧೋರಣೆ, ಇದು ಅವರ ಮನಃಸ್ಥಿತಿ ಎಂದು ಕಿಡಿಕಾರಿದರು.

ಯಾರ ವಿರೋಧವಿಲ್ಲ: ನಿನ್ನೆ ನಡೆದ ಸಚಿವ ಸಂಪುಟದಲ್ಲಿ ಜಾತಿ ಸಮೀಕ್ಷೆಗೆ ಸ್ವಪಕ್ಷದ ಸಚಿವರಿಂದಲೇ ವಿರೋಧ ವ್ಯಕ್ತವಾಗಿದೆ ಎಂಬ ಆರೋಪ ಶುದ್ಧ ಸುಳ್ಳು. ಯಾವ ಸಚಿವರು ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿಲ್ಲ ಸಚಿವ ಸಂಪುಟದಲ್ಲಿ ಈ ಬಗ್ಗೆ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

ಸಭೆಗಳು ವಿರೋಧಕ್ಕಲ್ಲ: ಪ್ರತ್ಯೇಕವಾಗಿ ಜಾತಿವಾರು ಸಭೆಗಳು ನಡೆಯುತ್ತಿವೆ. ಆದರೆ ಇದು ಸಮೀಕ್ಷೆಯನ್ನು ವಿರೋಧ ಮಾಡುವುದಕ್ಕಲ್ಲ. ಬದಲಿಗೆ ತಮ್ಮ ಜಾತಿಯನ್ನು ಯಾವ ನಿರ್ದಿಷ್ಟ ಹೆಸರಿನಿಂದ ಉಲ್ಲೇಖಿಸಬೇಕು ಎಂದು ಸಮಾಲೋಚನೆ ನಡೆಸಿ ಜಾಗೃತಿ ಮೂಡಿಸಲು ಸಭೆ ನಡೆಯುತ್ತಿದೆ. ಇದರಲ್ಲಿ ತಪ್ಪೇನಿದೆ ಎಂದು ಕೇಳಿದರು.

ಸಿದ್ದರಾಮಯ್ಯ ತವರಿನಲ್ಲಿ ಮತ್ತೆ ದಲಿತ ಸಿಎಂ ಕೂಗು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಲ್ಲಿ ಮತ್ತೆ ದಲಿತ ಸಿಎಂ ಕೂಗು ಮೊಳಗಿದೆ. ಮೈಸೂರಿನ ಪುರಭವನದಲ್ಲಿ ಇಂದು ಸಂವಿಧಾನ ಪೀಠಿಕೆ ಫಲಕ ಉದ್ಘಾಟನೆ ಸಂದರ್ಭದಲ್ಲಿ ಡಾ.ಮಹದೇವಪ್ಪ ಸಿಎಂ ಆಗಬೇಕು ಎಂಬ ಘೋಷಣೆ ಮೊಳಗಿದವು.

ಆದರೆ, ಸಿಎಂ ಕುರ್ಚಿ ಖಾಲಿ ಇಲ್ಲ ಎಂದು ಸ್ವತಃ ಡಾ.ಮಹದೇವಪ್ಪ ಸ್ಪಷ್ಟಪಡಿಸಿದರೂ ಅವರ ಅಭಿಮಾನಿಗಳು ಮಾತ್ರ ಅದೇ ಘೋಷಣೆ ಕೂಗಿದರು.

ಕೊನೆಗೆ ಮುಗುಳ್ನಗುತ್ತಲೇ ಪ್ರತಿಕ್ರಿಯೆ ನೀಡಿದ ಡಾ.ಮಹದೇವಪ್ಪ, ಇದು ನನ್ನ ಅಭಿಮಾನಿಗಳ ಆಸೆ. ಆದರೆ ಈಗ ಸಿಎಂ ಕುರ್ಚಿ ಖಾಲಿ ಇಲ್ಲ, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ. ಈ ತನಕ ಹೈಕಮಾಂಡ್ ನೀಡುವ ಜವಾಬ್ದಾರಿ ನಿಭಾಯಿಸಿದ್ದೇನೆ. ಆದರೆ ಮುಂದೆ ಏನಾಗುವುದೋ ಗೊತ್ತಿಲ್ಲ. ಜವಾಬ್ದಾರಿಗಳನ್ನು ನೀಡುವುದು ಹೈಕಮಾಂಡ್‌ಗೆ ಬಿಟ್ಟ ವಿಚಾರ ಎಂದರು.

ಬಾನು ಮುಷ್ತಾಕ್ ದಸರಾ ಉದ್ಘಾಟನೆ ವಿರೋಧಿಸುವವರ ಬಾಯಿಗೆ ಕೋರ್ಟ್ ಬೀಗ!

ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರಿಂದ ವಿಶ್ವ ವಿಖ್ಯಾತ ಮೈಸೂರು ದಸರಾ ಉದ್ಘಾಟನೆಗೆ ವಿರೋಧ ಮಾಡುವವರಿಗೆ ಸಂವಿಧಾನದ ಮೂಲಕವೇ ನ್ಯಾಯಾಲಯ ಬಾಯಿಗೆ ಬೀಗ ಹಾಕಿದೆ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು.

ಬಾನು ಮುಷ್ತಾಕ್ ದಸರಾ ಉದ್ಘಾಟನೆ ಮಾಡುವುದ ವಿರೋಧಿಸುವುದನ್ನು ಬಿಜೆಪಿ ನಾಯಕರು ಈಗಲಾದರೂ ಬಿಡಬೇಕು. ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್ ಆದೇಶ ನೀಡಿದ ಮೇಲೂ ವಿರೋಧ ಮಾಡುವುದು ಸರಿಯಲ್ಲ.

ನಾನು ಎಲ್ಲರಿಗೂ ದಸರಾಗೆ ಮುಕ್ತ ಮನಸ್ಸಿನಿಂದ ಆಹ್ವಾನ ನೀಡುತ್ತಿದ್ದೇನೆ. ಇದು ಎಲ್ಲಾ ಧರ್ಮೀಯರ ಹಬ್ಬ. ಇದನ್ನು ಎಲ್ಲರೂ ಸಂತೋಷದಿಂದ ಆಚರಣೆ ಮಾಡೋಣ ಎಂದು ಕರೆ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತನಲ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಿರಾಯ್(ಕ) + ಕಿಸ್ (ತ)	2+2 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಜಾಲಿ ಎಲ್‌ಎಲ್‌ಬಿ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಏಳುಮಲೈ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ಶಕ್ತಿ ತಿರುಮಗನ್ (ತ)	4 ಪ್ರದರ್ಶನಗಳು
ಸಂಗಂ	
ಕಮಲ್ ಶ್ರೀದೇವಿ (ಕ)	4 ಪ್ರದರ್ಶನಗಳು
ಲಿಡೋ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಎಕ್ಕ(ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ –2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ –2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ –2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನಾಳೆಯಿಂದ ವಿಸ್ತಾರ ಸಹಸ್ರ ಚಂಡಿಯಾಗ, ಶತಚಂಡಿ ಮಹಾಯಾಗ

ಮೈಸೂರು,ಸೆ.20(ಜಿಎ)–ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಅಂಗವಾಗಿ ನಡೆಯುವ ವಿಸ್ತಾರ ಸಹಸ್ರ ಚಂಡಿಯಾಗ, ಶತಚಂಡಿ ಮಹಾಯಾಗವು ಸೆ.22ರಿಂದ ಅ.1 ರವರೆಗೆ ಪ್ರತಿದಿನ ಡಾ.ಭಾನುಪ್ರಕಾಶ್ ಶರ್ಮ ಅವರ ನೇತೃತ್ವದಲ್ಲಿ ಮತ್ತು ಯಜ್ಞೇಶ್ವರ ಐತಾಳ್ ಅವರ ಮಾರ್ಗದರ್ಶನದಲ್ಲಿ ನೆರವೇರಲಿದೆ.

ಸೆ.22ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಪ್ರಸಿದ್ಧ ಜ್ಯೋತಿಷಿ ಪಾರ್ಥನಾರಾಯಣ ಅವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡು 12.30ಕ್ಕೆ ಮಹಾ ಪೂರ್ಣಾಹುತಿ ನೆರವೇರಲಿದೆ. ಹೆಚ್ಚಿನ ವಿವರಗಳಿಗೆ ಜಾತಕ ವಿಮರ್ಶಕ ಮೈಕುಮಾರ್ 9845183392, 9845183399 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಇಂದು ಕೊಡಗು ಸಹಕಾರ ಸಂಘದ ವಾರ್ಷಿಕ ಸರ್ವ ಸದಸ್ಯರ ಸಭೆ

ಮೈಸೂರು, ಸೆ. 20– ಕೊಡಗು ಸಹಕಾರ ಸಂಘದ 2024–25ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಜಯಲಕ್ಷ್ಮಿಪುರಂನಲ್ಲಿರುವ ಸಂಘದ ಆವರಣದಲ್ಲಿ ಸೆ. 21 ರಂದು ಬೆಳಗ್ಗೆ 10.30ಕ್ಕೆ ಕರೆಯಲಾಗಿದೆ.

ಸಂಘದ ಅಧ್ಯಕ್ಷರಾದ ಎ.ಸಿ. ನಂಜಮ್ಮ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಕಾರ್ಯಕಾರಿ ನಿರ್ದೇಶಕಿ ಪಿ. ಲವ್ಲಿ ಅಪ್ಪಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಯಾವ ಸಮುದಾಯಕ್ಕೆ ಸೇರಿದವರು?!

ಒಳ ಮೀಸಲಾತಿ ಹಂಚಿಕೆಯಲ್ಲಿನ ಗೊಂದಲ ಪರಿಹರಿಸಲು ಮಾಜಿ ಸಚಿವ ಎನ್.ಮಹೇಶ್ ಆಗ್ರಹ



ಭೀಮ ಬಲ ಬಳಗ ವತಿಯಿಂದ 'ಮೀಸಲಾತಿ ಮುನ್ನೋಟ' ವಿಚಾರಗೋಷ್ಠಿ ನಡೆಸಲಾಯಿತು.

ಮೈಸೂರು,ಸೆ.20(ಜಿಎ)–ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಎಂದು ಗುರುತಿಸಿಕೊಂಡಿರುವವರು ಯಾವ ಸಮುದಾಯಕ್ಕೆ ಸೇರಿದವರು ಎಂದು ಸಮೀಕ್ಷೆ ನಡೆಸಿದರೆ, ಒಳ ಮೀಸಲಾತಿ ಹಂಚಿಕೆಯಲ್ಲಿ ಆಗಿರುವ ಗೊಂದಲ ಪರಿಹರಿಸಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ಎನ್.ಮಹೇಶ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭೀಮ ಬಲ ಬಳಗ ವತಿಯಿಂದ ನಗರದ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 'ಮೀಸಲಾತಿ ಮುನ್ನೋಟ' ವಿಚಾರ ಗೋಷ್ಠಿಯಲ್ಲಿ ಮಾತನಾಡಿ, ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಅವರುಗಳ ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿಗಳು ಹೊಲಯ (ಬಲಗೈ) ಸಮುದಾಯದ ಸ್ಥಿತಿಗತಿಗಳಿಗೆ ಹೋಲಿಕೆಯಾಗುತ್ತದೆ. ಈ ಒಂದು ವಿಚಾರ ಮುಂದಿಟ್ಟುಕೊಂಡು ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರದವರು ಹೊಲಯ ಸಮುದಾಯಕ್ಕೆ ಸೇರಿದವರು ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಆದರೆ, ಇದನ್ನು ವೈಜ್ಞಾನಿಕವಾಗಿ ಸಾಬೀತುಪಡಿಸಬೇಕಾಗಿದ್ದು, ಈ ಜವಾಬ್ದಾರಿ ರಾಜ್ಯ ಸರ್ಕಾರದ ಮೇಲಿದೆ ಎಂದರು.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮುದಾಯದವರು ರಾಜ್ಯದಲ್ಲಿ ಒಟ್ಟು 4.74 ಲಕ್ಷದಷ್ಟು ಇದ್ದಾರೆ. ಈ ಪೈಕಿ ಶೇ.70 ರಷ್ಟು ಜನರು ಬಲಗೈ ಸಮುದಾಯಕ್ಕೆ ಸೇರಿದವರು ಎಂಬುದು ನನ್ನ ನಂಬಿಕೆಯಾಗಿದೆ. ಆದರೆ, ರಾಜ್ಯ ಸರ್ಕಾರ ಈ ಸಮುದಾಯಗಳನ್ನು ಸಮಾನವಾಗಿ ಶೇ.50 ರಂತೆ ಹೊಲಯ ಹಾಗೂ ಮಾದಿಗ ಗುಂಪಿಗೆ ಸೇರಿಸಿರುವುದು ಸರಿಯಲ್ಲ. ಈ ರೀತಿ ಅವೈಜ್ಞಾನಿಕವಾಗಿ ಸೇರಿಸಲು ಸರ್ಕಾರಕ್ಕೆ ಅಧಿಕಾರವಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂಧ್ರ ಸಮುದಾಯದವರು ಯಾರು ಎಂಬುದನ್ನು ಮೊದಲು ಪತ್ತೆ ಹಚ್ಚಬೇಕು. ಇವರ ಮನೆ ಮನೆ ಸರ್ವೇ ಕಾರ್ಯ ನಡೆಸಿದರೆ ಅವರ ಮೂಲ ಯಾವುದು ಎಂಬುದು ತಿಳಿಯುತ್ತದೆ. ಸರ್ಕಾರ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಿದರೆ ಎಲ್ಲ ಗೊಂದಲ ಪರಿಹಾರವಾಗುತ್ತದೆ. ನ್ಯಾಯಮೂರ್ತಿ ನಾಗಮೋಹನ್‌ದಾಸ್ ಆಯೋಗವು ಒಳಮೀಸಲಾತಿ ಹಂಚಿಕೆ ಸಂದರ್ಭ ಪರಿಶಿಷ್ಟ ಜಾತಿಗಳನ್ನು ಐದು ರೀತಿ ವರ್ಗೀಕರಣ ಮಾಡಿದ್ದರು. ಪೂರಕವಾದ ಮಾನದಂಡದೊಂದಿಗೆ ಈ ವರ್ಗೀಕರಣ ಮಾಡಲಾಗಿತ್ತು. ಆದರೆ, ರಾಜ್ಯ ಸರ್ಕಾರ 3 ವರ್ಗಗಳಿಗೆ ಸೀಮಿತಗೊಳಿಸಿ ಮೀಸಲಾತಿ ಹಂಚಿಕೆ ಮಾಡಿರುವುದು ಸರಿಯಲ್ಲ ಎಂದು ತಿಳಿಸಿದರು.

ಅಲೆಮಾರಿ, ಅರೆ ಅಲೆಮಾರಿ ಹಾಗೂ ಅದೇ ರೀತಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿ ಹೊಂದಿರುವ ಇತರೆ ಸಮುದಾಯಗಳನ್ನು ಪರಿಶಿಷ್ಟ ಜಾತಿಯಲ್ಲಿ ಅತ್ಯಂತ ಹಿಂದುಳಿದ ಸಮುದಾಯಗಳು ಎಂದು ಗುರುತಿಸಿದ ಆಯೋಗವು ಅವರಿಗೆ ಪ್ರತ್ಯೇಕ ವರ್ಗ ನೀಡಿತ್ತು ಅದೇ ರೀತಿ ಲಂಬಾಣಿ, ಭೋವಿ, ಕೊರಮ ಹಾಗೂ ಅದೇ ರೀತಿಯ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿ ಹೊಂದಿರುವ ಇತರೆ ಸಮುದಾಯಗಳನ್ನು ಕಡಿಮೆ ಹಿಂದುಳಿದ ಸಮುದಾಯ ಎಂದು ಪರಿಗಣಿಸಿ ಪ್ರತ್ಯೇಕ ವರ್ಗವಾಗಿ ಗುರುತಿಸಿತು. ಅತ್ಯಂತ ಹಿಂದುಳಿದ ಸಮುದಾಯ ಹಾಗೂ ಕಡಿಮೆ ಹಿಂದುಳಿದ ಸಮುದಾಯವನ್ನು ಒಂದೇ ಗುಂಪಿಗೆ ಸೇರಿಸುವುದು ಎಷ್ಟರ ಮಟ್ಟಿಗೆ ಸರಿ. ಇದರ ವಿರುದ್ಧ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯ ಹೋರಾಟ ನಡೆಸುತ್ತಿದ್ದು, ಈ ಹೋರಾಟಕ್ಕೆ ನನ್ನ ಬೆಂಬಲ ಇದೆ ಎಂದರು.

ಗೋಷ್ಠಿಯಲ್ಲಿ ನಿವೃತ್ತ ಪ್ರಾಂಶುಪಾಲ ಮಲ್ಲಿಕಾರ್ಜುನ ಸ್ವಾಮಿ, ವಿಷಯ ತಜ್ಞ ಡಾ.ನವೀನ್ ಮನಿಯ, ನಗರ ಪಾಲಿಕೆ ಮಾಜಿ ಸದಸ್ಯರಾದ ವೇದಾವತಿ, ಅಶ್ವಿನಿ ಶರತ್, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ನಟರಾಜ್ ಶಿವಣ್ಣ, ಯುವ ವಿಜ್ಞಾನಿ ನವೀನ್ ಮೌರ್ಯ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದಿಂದ ಪಿಗ್ಮಿ ಸಂಗ್ರಹ, ಇ–ಸ್ಟ್ಯಾಂಪಿಂಗ್ ಸೌಲಭ್ಯಕ್ಕೆ ನಿರ್ಧಾರ


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ 9ನೇ ಸರ್ವ ಸದಸ್ಯರ ಸಭೆಯನ್ನು ಶನಿವಾರ ನಡೆಸಲಾಯಿತು.

ಮೈಸೂರು,ಸೆ.20(ಜಿಎ)–ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘದ 9ನೇ ವರ್ಷದ ಸರ್ವ ಸದಸ್ಯರ ಸಭೆಯನ್ನು ಶನಿವಾರ ನಡೆಸಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಅಭ್ಯುದಯ ಸಹಕಾರ ಸಂಘಕ್ಕೆ ಆರ್ಥಿಕ ಚೈತನ್ಯ ತುಂಬಲು ಪಿಗ್ಮಿ ಸಂಗ್ರಹ, ಇ – ಸ್ಟ್ಯಾಂಪಿಂಗ್ ಸೌಲಭ್ಯ ಮತ್ತು ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಆರಂಭಿಸಲು ಸರ್ವ ಸದಸ್ಯರ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಂತರ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, ಕಳೆದ 8 ವರ್ಷದ ಹಿಂದೆ ಆರಂಭಗೊಂಡ ಸಹಕಾರ ಸಂಘವು ಅನೇಕ ಸವಾಲುಗಳನ್ನು ದಾಟಿ ಸುಮಾರು 150ಕ್ಕೂ ಹೆಚ್ಚು ಪತ್ರಕರ್ತರಿಗೆ ಸುಮಾರು 50 ಲಕ್ಷ ರೂ.ಗಳ ವರೆಗೆ ಸಾಲ ಸೌಲಭ್ಯ ನೀಡಲಾಗಿದೆ. 60ಕ್ಕೂ ಹೆಚ್ಚು ಪತ್ರಕರ್ತರನ್ನು ಯಶಸ್ವಿನಿ ಆರೋಗ್ಯ ವಿಮಾ ಯೋಜನೆಗೆ ಒಳಪಡಿಸಲಾಗಿದೆ. ಆರ್.ಡಿ ಸಂಗ್ರಹದಲ್ಲಿ ನೂರಕ್ಕೆ ನೂರರಷ್ಟು ಆರ್ಥಿಕ ಶಿಸ್ತು ಪಾಲನೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, ಪಿಗ್ಮಿ ಸಂಗ್ರಹ ಜಾರಿ ಸಂಬಂಧ ಸಾಧಕ ಬಾಧಕ ಪರಿಶೀಲಿಸಲು ಸಮಿತಿ ರಚನೆ ಮಾಡಲಾಗುವುದು. ಹಾಗೂ ಸಾಲ ವಸೂಲಾತಿಗೆ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಉಪಾಧ್ಯಕ್ಷ ಹನಗೋಡು ನಟರಾಜ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಸಹಕಾರ ಸಂಘದ ನಿರ್ದೇಶಕರಾದ ಪ್ರಗತಿ ಗೋಪಾಲಕೃಷ್ಣ, ಹೆಚ್.ಎಸ್. ದಿನೇಶ್ ಕುಮಾರ್, ಜಯಶಂಕರ್ ಮೂರ್ತಿ, ಹುಲ್ಲಹಳ್ಳಿ ಮೋಹನ್, ಸಾಲಿಗ್ರಾಮ ಯಶವಂತ್ , ಮುಕುಂದ, ಎನ್. ಸುರೇಶ್, ಮಹೇಶ್ .ಎಂ. ದಾಸೇಗೌಡ, ನಾಗೇಂದ್ರಕುಮಾರ್, ಬೀಚನಹಳ್ಳಿ ಮಂಜುನಾಥ್, ಬಿ.ರಾಘವೇಂದ್ರ ಉಪಸ್ಥಿತರಿದ್ದರು.

'ಮಹಿಷಾಸುರಮರ್ದಿನಿ' ಚಾಮುಂಡೇಶ್ವರಿಯ ಶ್ರೇಷ್ಠತೆ ಬಗೆಗಿನ ಗೊಂದಲಕ್ಕೆ ತೆರೆ ಎಳೆಯುತ್ತದೆ

- ಪುರಾತತ್ವ ತಜ್ಞ ಡಾ.ಶಲ್ವಪಿಳ್ಳೆ ಅಯ್ಯಂಗಾರ್ ಅಭಿಮತ
- ಆರ್.ಕೃಷ್ಣಮೂರ್ತಿ ರಚಿತ ಮಹಿಷಾಸುರಮರ್ದಿನಿ' ಕೃತಿ ಲೋಕಾರ್ಪಣೆ ಸಮಾರಂಭ



ಲೇಖಕ ಆರ್.ಕೃಷ್ಣಮೂರ್ತಿ ರಚಿತ 'ಮಹಿಷಾಸುರಮರ್ದಿನಿ' ಕೃತಿಯನ್ನು ರಾಜವಂಶಸ್ಥರೂ ಆದ ಸಂಸದ ಯದುವೀರ್ ಬಿಡುಗಡೆಗೊಳಿಸಿದರು. ಆ ವೇಳೆ ಪುರಾತತ್ವ ತಜ್ಞ ಡಾ.ಶಲ್ವಪಿಳ್ಳೆ ಅಯ್ಯಂಗಾರ್, ಲೇಖಕ ಆರ್.ಕೃಷ್ಣಮೂರ್ತಿ ಉಪಸ್ಥಿತರಿದ್ದರು.

ಮೈಸೂರು, ಸೆ.20(ಎಸ್‌ಪಿಎನ್)–ಇತ್ತೀಚೆಗೆ ನಡೆಯುತ್ತಿರುವ ವಿರೋಧಾಭಾಸ ಚರ್ಚೆಗಳಿಂದ 'ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಚ್ಯುತಿ ಬಂದರೆ, ಮೈಸೂರಿನ 'ಅಸ್ಮಿತೆ' ಹಾಗೂ 'ಮೈಸೂರಿನ ಸಾಂಸ್ಕೃತಿಕತೆ' ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ ಎಂದು ಕೆಎಸ್‌ಒಯು ಪ್ರಾಚೀನ ಇತಿಹಾಸ, ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕ ಡಾ. ಶಲ್ವಪಿಳ್ಳೆ ಅಯ್ಯಂಗಾರ್ ಆತಂಕ ವ್ಯಕ್ತಪಡಿಸಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂನಲ್ಲಿರುವ ಮಾಧವ ಕೃಪಾ ಸಭಾಂಗಣದಲ್ಲಿ ಅಯೋಧ್ಯಾ ಪಬ್ಲಿಕೇಷನ್ಸ್ ಮತ್ತು ಮಂಥನ ಮೈಸೂರು ಸಹಯೋಗದೊಂದಿಗೆ ಲೇಖಕ ಆರ್.ಕೃಷ್ಣಮೂರ್ತಿ ರಚಿತ ಮಹಿಷಾಸುರಮರ್ದಿನಿ ಶಿಲ್ಪದ ಬೆಳವಣಿಗೆ ಮತ್ತು ಮಹಿಷಮಂಡಲ–ಸಂಶೋಧನಾತ್ಮಕ ಕೃತಿಯಾದ 'ಮಹಿಷಾಸುರಮರ್ದಿನಿ' ಬಿಡುಗಡೆ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿದರು.

ಕೆಲ ವರ್ಷಗಳಿಂದ ಚಿಂತಕರು 'ಮಹಿಷಾಸುರ ಮರ್ದಿನಿ' ಕುರಿತು ಅನೇಕ ಪ್ರಶ್ನೆಗಳನ್ನು ಹುಟ್ಟುಹಾಕಿದ್ದಾರೆ. ಇಂತಹ ಪ್ರಶ್ನೆಗಳು ಅವಶ್ಯ. ಆದರೆ, ಈ ನೆಪದಲ್ಲಿ 'ವಿಷಯ ಮಂಥನ'ವಾಗಬೇಕೇ ಹೊರತು 'ವಿಷದ ಮಂಥನ'ವಾಗಬಾರದು. ದಸರಾ ಹಬ್ಬ ಜ್ಞಾನ ಮತ್ತು ಅಜ್ಞಾನದ ಕುರಿತು ಪೂಜಿಸುವ ಹಬ್ಬ. ಇಲ್ಲಿ ಚಾಮುಂಡೇಶ್ವರಿ ದೇವಿ ಜ್ಞಾನದ ಸಂಕೇತವಾದರೆ, ಕೋಣದ ಮುಖವಾಡವಿರುವ 'ಮಹಿಷಾಸುರ' ಅಜ್ಞಾನದ ಸಂಕೇತ. ಇಲ್ಲಿನ 9 ದಿನಗಳ ಪೂಜೆ ಸಂದರ್ಭದಲ್ಲಿ ಇದೇ ಅಂಶಗಳೇ ಪೂಜಿಸಲ್ಪಡುತ್ತವೆ ಎಂದರು.

> 'ಮಹಿಷಾಸುರ ಮರ್ದಿನಿ' –'ಮಹಿಷಾ ಮಂಡಲ' ಕುರಿತಾದ ಸಂಶೋಧನೆ ರೂಪದ ಕೃತಿ ರಚನೆಯು 2015ರಿಂದ ಆರಂಭಗೊಂಡು ಅನೇಕ ಹಂತಗಳನ್ನು ದಾಟಿ ಈಗ ಕೃತಿರೂಪದಲ್ಲಿ ನಿಮ್ಮೆದುರಿಗಿದೆ. 'ಮಹಿಷಾಸುರಮರ್ದಿನಿ'ಯ ಆರಾಧನೆಯ ಮೂಲ, ಬೆಳವಣಿಗೆ ಹಾಗೂ ಮಹಿಷಮಂಡಲದ ಸ್ಥಾನದ ನಿಷ್ಕರ್ಷೆ ಸೇರಿದಂತೆ ಇತ್ಯಾದಿ ವಿಷಯಗಳ ಕುರಿತು ಬೆಳಕು ಚೆಲ್ಲಿದೆ. 2500 ವರ್ಷಗಳಿಂದ ಭಾರತದಲ್ಲಿ ಇರುವ ಶಕ್ತಿಆರಾಧನೆ ಹಾಗೂ ಜಗತ್ತಿನ ಬೇರೆ ಬೇರೆ ಭಾಗದಲ್ಲಿ ಇರುವ ಸಾಮ್ಯತೆ ಕುರಿತು ಈ ಕೃತಿಯಲ್ಲಿ ಬೆಳಕು ಚೆಲ್ಲುವ ಪ್ರಯತ್ನವಾಗಿದೆ.
> – ಆರ್.ಕೃಷ್ಣಮೂರ್ತಿ, ಲೇಖಕರು

ಮೈಸೂರು ಅರಸರು ಸೇರಿದಂತೆ ಹಿಂದಿನ ಕಾಲದ ರಾಜ–ಮಹಾರಾಜರು ಶಕ್ತಿ ಮತ್ತು ಶಾಂತಿಯ ಸಂಕೇತವಾಗಿ ಕತ್ತಿಯನ್ನು ಪೂಜಿಸುತ್ತಿದ್ದರು. ಉದಾಹರಣೆಗೆ ಹೇಳುವುದಾದರೆ, ದೇಶ ಸುಭಿಕ್ಷವಾಗಿರಬೇಕಾದರೆ, ಶತ್ರುಗಳು ಒಳ ನುಸುಳದಂತೆ ದೇಶದ ಗಡಿ ಕಾಯಲು ಸೈನ್ಯದ ಅವಶ್ಯಕತೆ ಇರುತ್ತದೆ. ದೇಶದೊಳಗೆ ಅಪರಾಧ ಕೃತ್ಯಗಳನ್ನು ತಡೆಗಟ್ಟಲು ಪೊಲೀಸರ ಅವಶ್ಯಕತೆ ಇರುತ್ತದೆ. ದೇಶದ ಒಳಗೆ–ಹೊರಗೆ ಸೇನೆ–ಪೊಲೀಸರ ಕರ್ತವ್ಯ ನಿಷ್ಠೆಯಿಂದ ನಾವು–ನೀವೆಲ್ಲ ನಿರ್ಭೀತಿಯಿಂದ ಜೀವಿಸಬಹುದು. ಇದಕ್ಕೆ ಆಯುಧಗಳ ಅವಶ್ಯಕತೆ ಇರುತ್ತದೆ. ಇದರ ಸಂಕೇತವಾಗಿ ಪಟ್ಟದ ಕತ್ತಿ, ಆನೆ, ಹಸು, ಕುದುರೆ ಸೇರಿದಂತೆ ಯುದ್ಧ ಸಾಮಗ್ರಿಗಳನ್ನು ಮೈಸೂರು ಅರಸರು ದಸರಾ ಸಂದರ್ಭದಲ್ಲಿ ಪೂಜಿಸುತ್ತಾರೆ ಎಂದು ನವರಾತ್ರಿ ಮಹತ್ವವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಷಾಸುರಮರ್ದಿನಿ: ಪೂರ್ವ ಮತ್ತು ಪಶ್ಚಿಮ ಬಂಗಾಲದಲ್ಲಿ 1860–1910ರ ಅವಧಿಯಲ್ಲಿ ಬ್ರಿಟಿಷರು ಸೃಷ್ಟಿಸಿದ ಕೃತಕ ಬರಗಾಲವು ಭಾರತೀಯರನ್ನು ಬಲಹೀನರನ್ನಾಗಿ ಮಾಡಿತು. ಅಂತಹ ಪರಿಸ್ಥಿತಿಯಲ್ಲಿ ಬ್ರಿಟಿಷರ ದೌರ್ಜನ್ಯ, ಅನೀತಿ ವಿರುದ್ಧ ಹೋರಾಡಲು 'ಮಹಿಷಾಸುರ ಮರ್ದಿನಿ' ಮುನ್ನೆಲೆಗೆ ಬರುತ್ತದೆ. ಸುಮಾರು 19ನೇ ಶತಮಾನದ ಕೊನೆಯಲ್ಲಿ 1873ರಲ್ಲಿ ಕಿರಣ ಚಂದ್ರ ಬಂದೋಪಾಧ್ಯಾಯ ರಚನೆಯ ನಾಟಕದಲ್ಲಿ ಮಹಿಷಾಸುರ ಮರ್ದಿನಿಯನ್ನು ಭಾರತಮಾತೆಯ ಪರಿಕಲ್ಪನೆಯಲ್ಲಿ ಮೂಡಿಸಿದರು. 1882ರಲ್ಲಿ ಬಂಕಿಮ್ ಚಂದ್ರ ಚಟರ್ಜಿ ಯವರು 'ಆನಂದಮಠ' ಕಾದಂಬರಿಯಲ್ಲಿ ಭಾರತ ಮಾತೆಗೆ ವಂದಿಸುವ 'ವಂದೇ ಮಾತರಂ' ಗೀತೆಯನ್ನು ಪರಿಚಯಿಸುತ್ತಾರೆ. ನಂತರದ ದಿನಗಳಲ್ಲಿ ಈ ಗೀತೆ ಸ್ವಾತಂತ್ರ್ಯಸಂಗ್ರಾಮದ ರಣಕಹಳೆ ಗೀತೆಯಾಗಿ ಪರಿವರ್ತಿತವಾಗುವ ಸಂದರ್ಭವನ್ನು ಬಿಚ್ಚಿಟ್ಟರು.

'ಮೈಸೂರು' ಹೆಸರಿಗೆ 400 ವರ್ಷ: ಮಹಾವಂಶದಲ್ಲಿನ ಐತಿಹಾಸಿಕತೆ–ಸತ್ಯಾಸತ್ಯತೆ, ಬೌದ್ಧ ಸಂಪ್ರದಾಯದ ಒಂಬತ್ತು ಸ್ಥಳಗಳ ಪರಿಚಯ ಹಾಗೂ 16ನೇ ಶತಮಾನದಿಂದ ಚಾಲ್ತಿಗೆ ಬಂದ 'ಮಹಿಸೂರು' ಹಾಗೂ ಮೈಸೂರಾಗಿ ಬದಲಾದ ಸಂದರ್ಭವನ್ನು ಎಳೆಎಳೆಯಾಗಿ ಬಿಡಿಸಿದರು. ಮಾಹಿಷ್ಮತಿ–ಮಂಡಲೇಶ್ವರವೇ ಮಹಿಷಾಮಂಡಲ ಅಧ್ಯಯನದಲ್ಲಿ ಮೈಸೂರಿನ ಕುರಿತಾದ ಎಲ್ಲಾ ಅಂಶಗಳಲ್ಲಿ ಲೇಖಕರು ಗಮನ ಸೆಳೆದಿದ್ದಾರೆ. ಕೊನೆಯದಾಗಿ ಲೇಖಕರು ಕೆಲವು ವರ್ಷಗಳಿಂದ ಮಹಿಷಾಸುರ ಕುರಿತು ಎತ್ತಿರುವ ಎಲ್ಲಾ ಪ್ರಶ್ನೆಗಳಿಗೆ ಹಾಗೂ ಸಾರ್ವಜನಿಕರಲ್ಲಿ ಮೂಡಿರುವ ಗೊಂದಲಗಳಿಗೂ ಉತ್ತರ ರೂಪದಲ್ಲಿ ಈ ಪುಸ್ತಕವನ್ನು ನೋಡಬಹುದಾಗಿದೆ ಎಂದರು.

ಅನಾದಿಕಾಲದಿಂದಲೂ ಮೈಸೂರು ರಾಜಮನೆತನ ನವರಾತ್ರಿ ಪೂಜೆಗಳನ್ನು ಆಚರಣೆ ಮಾಡಿಕೊಂಡು ಬರುತ್ತಿದೆ. ಇಂದಿಗೂ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು, 9 ದಿನಗಳ ಆಚರಣೆಯಲ್ಲಿ 7ನೇ ದಿನದ ಕಾಳರಾತ್ರಿ ಪೂಜೆಯಲ್ಲಿ ಮಹಿಷಾಸುರ ವಧೆಯಾಗಲಿದೆ. ಇದು 'ಜ್ಞಾನ' ಮತ್ತು 'ಅಜ್ಞಾನ'ದ ಸಂಕೇತವಾಗಿ ನಡೆಯುವ ಪೂಜೆಯಾಗಿದೆ. ಹಾಗಾಗಿ ಮೈಸೂರು ದಸರಾ ಮಹೋತ್ಸವ ಪಾವಿತ್ರ್ಯತೆ ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಕಿವಿಮಾತು ಹೇಳಿದರು.

ದಸರಾ ವಿರೋಧಾಭಾಸಗಳಿಂದ ಧಾರ್ಮಿಕ ಆಚರಣೆಗೆ ಧಕ್ಕೆಯಾಗಬಹುದೇ!

ಮೈಸೂರು, ಸೆ.20(ಎಸ್‌ಪಿಎನ್)–ಇಷ್ಟು ವರ್ಷಗಳ ಕಾಲ ಸುಸೂತ್ರವಾಗಿ ನಡೆದುಕೊಂಡು ಬರುತ್ತಿದ್ದ ಹಿಂದೂಗಳ ಧಾರ್ಮಿಕ ಹಬ್ಬವಾದ ದಸರಾ ಮಹೋತ್ಸವಕ್ಕೆ ಈ ಬಾರಿ ಹಲವು ವಿರೋಧಾಭಾಸ ಹೇಳಿಕೆಗಳು ಬರುತ್ತಿರುವುದು, ನಮ್ಮ ಆಚರಣೆಗೆ ಎಲ್ಲಿ ಅಡಚಣೆಯಾಗುತ್ತದೆಯೋ ಎಂಬ ಆತಂಕದ ಭಾವನೆ ಮೂಡುತ್ತಿದೆ ಎಂದು ರಾಜವಂಶಸ್ಥರೂ ಆದ ಸಂಸದ ಯದುವೀರ ಕೃಷ್ಣಚಾಮರಾಜ ಒಡೆಯರ್ ಅಭಿಪ್ರಾಯಪಟ್ಟರು.

ಇಲ್ಲಿಯವರೆಗೆ ಹಿಂದೂಗಳ ಹಬ್ಬವಾಗಿ ಸರ್ವರನ್ನೊಳಗೊಂಡ ಸಂಪ್ರದಾಯಬದ್ಧ ದಸರಾ ಹಬ್ಬ ಆಚರಿಸಿಕೊಂಡು ಬಂದಿದ್ದೇವೆ. ಇತ್ತೀಚೆಗೆ ಆಡಳಿತದಲ್ಲಿರುವ ಕೆಲ ವ್ಯಕ್ತಿಗಳು ಚಾಮುಂಡಿದೇವಿ ದೇವಸ್ಥಾನ ಹಿಂದೂಗಳಿಗೆ ಸೇರಿದ್ದಲ್ಲ. ದಸರಾ ಹಬ್ಬ ಜಾತ್ಯಾತೀತ ಹೆಸರಿನಲ್ಲಿ ನಡೆಯುತ್ತಿದೆ ಎಂಬ ಹೇಳಿಕೆ ಜನರ ಮನಸ್ಸನ್ನು ಘಾಸಿಗೊಳಿಸುತ್ತಿದೆ. ಅಲ್ಲದೆ, 'ಅಜ್ಞಾನ'ದ ಸಂಕೇತವಾಗಿ ಆಚರಿಸುವ 'ಮಹಿಷಾಸುರಮರ್ದಿನಿ' ಪ್ರಸಂಗಗಳನ್ನು ಬೇರೆ ರೀತಿಯ ಆಚರಣೆಗೆ ನಾಂದಿ ಹಾಡುತ್ತಿರುವುದು ಜನರಲ್ಲಿ ಮನಸ್ಸಿನ ಗೊಂದಲಕ್ಕೆ ಕಾರಣವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಲ್ಲಾ ಭಾಷೆಗೂ ತರ್ಜುಮೆಯಾಗಬೇಕು: ಇವೆಲ್ಲದಕ್ಕೂ ಉತ್ತರವಾಗಿ ಲೇಖಕ ಆರ್.ಕೃಷ್ಣಮೂರ್ತಿ ರಚಿತ 'ಮಹಿಷಾಸುರಮರ್ದಿನಿ' ಕೃತಿ ಉತ್ತರವಾಗಿ ನಿಲ್ಲುತ್ತದೆ. ಈ ಕೃತಿ ಓದುಗರಿಗೆ ಸಾಕ್ಷಿ ಸಮೇತ ಅಧ್ಯಯನಕ್ಕೆ ಒತ್ತು ನೀಡಿದೆ. ಈ ಕೃತಿ ದೇಶದ ಎಲ್ಲಾ ಭಾಷೆಗಳಿಗೂ ಮಾತ್ರವಲ್ಲ, ವಿದೇಶಿ ಭಾಷೆಗಳಿಗೂ ತರ್ಜುಮೆಗೊಳಿಸುವ ಎಲ್ಲಾ ಪ್ರಯತ್ನಗಳಾಗಬೇಕು ಎಂದು ಸಲಹೆ ನೀಡಿದರು.

ಶ್ರೀ ತಂತ್ರಸಾರಾಗಮ ಸಂಘದ ವಾರ್ಷಿಕ ಮಹಾಸಭೆ


ಶ್ರೀತಂತ್ರಸಾರಾಗಮ ಸಂಘದ 65ನೇ ವಾರ್ಷಿಕ ಸಭೆಯನ್ನು ಸರಸ್ವತಿಪುರಂನಲ್ಲಿರುವ ಕೃಷ್ಣಧಾಮದಲ್ಲಿ ನಡೆಸಲಾಯಿತು.

ಮೈಸೂರು,ಸೆ.20(ಜಿಎ)–ಮೈಸೂರಿನ ಶ್ರೀತಂತ್ರಸಾರಾಗಮ ಸಂಘದ 65ನೇ ವಾರ್ಷಿಕ ಸಭೆಯನ್ನು ಸರಸ್ವತಿಪುರಂನಲ್ಲಿರುವ ಕೃಷ್ಣಧಾಮದಲ್ಲಿ ನಡೆಸಲಾಯಿತು. ಸಭೆಯಲ್ಲಿ ಸಂಘದ ಕಾರ್ಯದರ್ಶಿ ವಿದ್ವಾನ್ ಅನಂತ ಪದ್ಮನಾಭ ವೈಲಯ ಅವರು 65ನೇ ವಾರ್ಷಿಕ ವರದಿ ಮಂಡಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಕೆ.ವಸಂತ ಕುಮಾರ್, ಉಪಾಧ್ಯಕ್ಷರಾದ ಆರೂರು ವಾಸುದೇವರಾವ್, ಕೃಷ್ಣದಾಸ್, ಕೋಶಾಧ್ಯಕ್ಷ ಪಿ.ಜಯರಾಂಭಟ್, ಉಪ ಕಾರ್ಯದರ್ಶಿ ಡಾ.ಶ್ರೀಶ ಭಟ್ ಮತ್ತಿತರರು ಉಪಸ್ಥಿತರಿದ್ದರು.

ನಾಮಪತ್ರ ಸಲ್ಲಿಕೆ



ಮೈಸೂರು ಜಿಲ್ಲಾ ಸಹಕಾರಿ ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ಮೈಸೂರು ಜಿಲ್ಲಾ ಹಾಲು ಉತ್ಪಾದಕ ಸಹಕಾರ ಸಂಘದ ಕ್ಷೇತ್ರದ ವತಿಯಿಂದ ಕೆ.ಉಮಾಶಂಕರ್ ಅವರು ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡರ ಸಮ್ಮುಖದಲ್ಲಿ ಚುನಾವಣಾಧಿಕಾರಿ ಸತೀಶ್ ಅವರಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ಆ ವೇಳೆ ಒಕ್ಕೂಟದ ಹಾಲಿ ನಿರ್ದೇಶಕ ಕೆ.ಎಸ್.ಕುಮಾರ್, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಉಪಸ್ಥಿತರಿದ್ದರು.